

# ಕರ್ನಾಟಕ ಸ್ಕೌಟ್ ಮತ್ತು ಗೈಡ್

ಮಾಸ ಪತ್ರಿಕೆ

# Karnataka Scout & Guide

Monthly Magazine


Vol -65 | Issue-12 | December 2024 | Pages: 32 | Annual Subscription: ₹ 100/-

ಸಂಪುಟ: 65 | ಸಂಚಿಕೆ: 12 | ಡಿಸೆಂಬರ್ 2024 | ಪುಟಗಳು: 32 | ವಾರ್ಷಿಕ ಚಂದ ರೂ. 100/-


## ಶ್ರದ್ಧಾಂಜಲಿ



## ಡಾ॥ ಮನಮೋಹನ್ ಸಿಂಗ್

ಭಾರತದ ಮಾಜಿ ಪ್ರಧಾನ ಮಂತ್ರಿಗಳು, ಅತ್ಯುತ್ತಮ ಆರ್ಥಿಕ ತಜ್ಞರಾಗಿದ್ದ ಡಾ. ಮನಮೋಹನ್ ಸಿಂಗ್ ಅವರ ನಿಧನದಿಂದ ದೇಶವು ಮಹಾನ್ ನಾಯಕನನ್ನು ಕಳೆದುಕೊಂಡಿದೆ. ದೇಶದ ಅಭಿವೃದ್ಧಿ ಮತ್ತು ಆರ್ಥಿಕ ಪ್ರಗತಿಯಲ್ಲಿ ಅವರು ನಿಸ್ವಾರ್ಥ ಹಾಗೂ ಸ್ಮರಣೀಯ ಸೇವೆ ಸಲ್ಲಿಸಿರುತ್ತಾರೆ. ಅವರು ಶ್ರೇಷ್ಠತೆ, ಪ್ರಜಾಪ್ರಭುತ್ವದ ಬಗ್ಗೆ ತೋರಿದ ನಿಷ್ಠೆ, ನಾಯಕತ್ವ ಮತ್ತು ಬದ್ಧತೆ ಅಮೋಘವಾದವು. ಇವರ ನಿಧನಕ್ಕೆ ಕರ್ನಾಟಕ ರಾಜ್ಯ ಸಂಸ್ಥೆ ತೀವ್ರ ಸಂತಾಪವನ್ನು ವ್ಯಕ್ತಪಡಿಸುತ್ತದೆ.



ಡಿಸೆಂಬರ್ 14 ರಂದು ದಕ್ಷಿಣ ಕನ್ನಡ ಜಿಲ್ಲಾ ತರಬೇತಿ ಕೇಂದ್ರ ಪಿಲಿಕುಳದಲ್ಲಿ ನಡೆದ 106ನೇ ರಾಜ್ಯ ಪರಿಷತ್ ಮಹಾಸಭೆಯನ್ನು ದಕ್ಷಿಣ ಕನ್ನಡ ಜಿಲ್ಲಾ ಮುಖ್ಯ ಆಯುಕ್ತರಾದ ಡಾ ಎಂ. ಮೋಹನ್ ಆಳ್ವರವರು ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯ, ರಾಜ್ಯ ಆಯುಕ್ತರುಗಳಾದ ಶ್ರೀ ಎಂ.ಎ. ಖಾಲಿದ್ ಶ್ರೀಮತಿ ಗೀತಾನಟರಾಜ್, ಶ್ರೀ ಸಿ.ಎಸ್. ರೆಡ್ಡಿ, ಶ್ರೀಮತಿ ಬಿ.ವಿ. ರಾಮಲತಾ, ರಾಜ್ಯ ಕಾರ್ಯದರ್ಶಿ ಶ್ರೀ ಕೆ. ಗಂಗಪ್ಪಗೌಡ ಉಪಾಧ್ಯಕ್ಷರುಗಳಾದ ಶ್ರೀಮತಿ ಆಶಾ ಪ್ರಸನ್ನಕುಮಾರ್, ಶ್ರೀ ಹೆಚ್.ಎಂ. ಸಿದ್ದರಾಮಸ್ವಾಮಿ, ಶ್ರೀ ಎ.ಎನ್. ಮಹೇಶ್ ಶ್ರೀ ಜಿ.ಬಿ. ಮನ್ನಿಕೇರಿ, ಜಿಲ್ಲಾ ಮುಖ್ಯ ಆಯುಕ್ತರುಗಳಾದ ಶ್ರೀ ಎಂ.ಕೆ. ಖಾನ್, ಡಾ. ಬಿ.ಆರ್. ಪ್ರಸನ್ನಕುಮಾರ್ ಶ್ರೀ ಇಂದ್ರಾಳಿ ಜಯಕರ್ ಶೆಟ್ಟಿ ಇತರರು ಉಪಸ್ಥಿತರಿದ್ದರು.




ಡಿಸೆಂಬರ್ 10 ರಿಂದ 15ರ ವರೆಗೆ ದಕ್ಷಿಣ ಕನ್ನಡ ಜಿಲ್ಲೆ ಮೂಡುಬಿದರೆಯಲ್ಲಿ 'ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ' ಆಯೋಜಿಸಿದ್ದ ರಾಷ್ಟ್ರೀಯ ಸಾಂಸ್ಕೃತಿಕ ಉತ್ಸವ 30ನೇ ವರ್ಷದ 'ಆಳ್ವಾಸ್ ವಿರಾಸತ್'ಅನ್ನು ಧರ್ಮಸ್ಥಳದ ಧರ್ಮಾಧಿಕಾರಿಗಳಾದ ಡಾ. ಡಿ. ವೀರೇಂದ್ರ ಹೆಗ್ಗಡೆ ರವರು ಉದ್ಘಾಟಿಸಿದರು. ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷರಾದ ಡಾ. ಎಂ. ಮೋಹನ್ ಆಳ್ವ, ಎಂ.ಜಿ.ಆರ್. ಗ್ರೂಪ್ ಅಧ್ಯಕ್ಷ ಶ್ರೀ ಕೆ. ಪ್ರಕಾಶ್‌ಶೆಟ್ಟಿ, ರಾಜ್ಯ ಮುಖ್ಯ ಆಯುಕ್ತ ಶ್ರೀ ಪಿ.ಜಿ.ಆರ್. ಸಿಂಧ್ಯ, ಬರೋಡ ಶಶಿ ಕೇಟರಿಂಗ್ ಸರ್ವೀಸಸ್ ಆಡಳಿತ ನಿರ್ದೇಶಕ ಶ್ರೀ ಶಶಿಧರ ಶೆಟ್ಟಿ, ಡಾ. ಆರ್.ಜಿ. ಜಗದೀಶ್, ಉಪಕುಲಪತಿಗಳು, ಕೆಳದಿ ಶಿವಪ್ಪನಾಯಕ ಕೃಷಿ ಮತ್ತು ತೋಟಗಾರಿಕಾ ವಿಶ್ವವಿದ್ಯಾಲಯ, ಶಿವಮೊಗ್ಗ, ಪುತ್ತಿಗೆ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಕು. ರಾಧಾ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಕರ್ನಾಟಕ ಸ್ಕೌಟ್ ಮತ್ತು ಗೈಡ್ ಮಾಸ ಪತ್ರಿಕೆ

KARNATAKA Scout & Guide
MONTHLY NEWS MAGAZINE

Vol: 65 Issue: 12 December 2024

**ಪೋಷಕರು**
ಪಿ.ಜಿ.ಆರ್. ಸಿಂಧ್ಯ

**ಗೌರವ ಅಧ್ಯಕ್ಷರು**
ಡಾ. ಗೊ.ರು. ಚನ್ನಬಸಪ್ಪ

**ಅಧ್ಯಕ್ಷರು**
ಕೊಂಡಜ್ಜಿ ಬಿ. ಷಣ್ಮುಖಪ್ಪ

**ಸಂಪಾದಕರು**
ಕೆ. ಗಂಗಪ್ಪಗೌಡ

**ಸಹಸಂಪಾದಕರು**
ಎನ್. ಶ್ರೀನಿವಾಸನ್

**ಸಂಚಾಲಕರು**
ಬಿ.ಎಸ್. ರವೀಂದ್ರ

**ಸದಸ್ಯರು**
ಮೋಹನ್ ಕೊಂಡಜ್ಜಿ
ಸಿ.ಪಿ. ಪರಮೇಶ್ವರ
ಚಳ್ಳಕೆರೆ ಯರ್ರಿಸ್ವಾಮಿ
ಎಂ.ಎನ್. ಷಡಕ್ಷರಿ
ಸಿ.ವಿ. ತಿರುಮಲರಾವ್
ಡಾ. ವಿಜಯಲಕ್ಷ್ಮಿ ಬಾಳೆಕುಂದ್ರಿ
ಡಾ. ವಸುಂಧರ ಭೂಪತಿ
ಡಾ. ಶಕುಂತಲ
ಪ್ರಭಾವತಿ ಪಾಟೀಲ್

ಸಂಚಿಕೆಯ ವಾರ್ಷಿಕ ಚಂದಾ ರೂ. 100/-
ವಿದ್ಯಾಸಂಸ್ಥೆ ಹಾಗೂ ಸಂಘ-ಸಂಸ್ಥೆಗಳಿಗೆ
ವಾರ್ಷಿಕ ಚಂದಾ ರೂ. 100/-

ಚಂದಾಹಣವನ್ನು
ಸಂಪಾದಕರು, ಕರ್ನಾಟಕ ಸ್ಕೌಟ್ ಮತ್ತು ಗೈಡ್ ಮಾಸಪತ್ರಿಕೆ
ರಾಜ್ಯ ಕೇಂದ್ರ ಕಛೇರಿ, ಶಾಂತಿಗೃಹ
#39, ಅರಮನೆ ರಸ್ತೆ, ಬೆಂಗಳೂರು - 560 001
ಇಲ್ಲಿಗೆ ಕಳುಹಿಸಲು ಕೋರಿದೆ.

## ಒಳಪುಟಗಳಲ್ಲಿ...

| | |
|---|---|
| ರಾಜ್ಯ ಮುಖ್ಯ ಆಯುಕ್ತರ ನುಡಿ | ...04 |
| ಸಂಪಾದಕೀಯ | ...05 |
| ಸಹಾಯಕ ನಾಯಕ ತರಬೇತುದಾರರ ತರಬೇತಿ ಶಿಬಿರ ಹಾಗೂ ತರಬೇತಿ ನಾಯಕರ ಪುನಶ್ಚೇತನ ತರಬೇತಿ ಶಿಬಿರಗಳ ಸಂಕ್ಷಿಪ್ತ ವರದಿ | ...07 |
| 106ನೇ ರಾಜ್ಯ ಪರಿಷತ್ ಮಹಾಸಭೆ ವರದಿ | ...08 |
| ರಾಜ್ಯ ಮತ್ತು ವಿಭಾಗ ಮಟ್ಟದ ಗೀತಗಾಯನ ಸ್ಪರ್ಧೆ | ...11 |
| ಸ್ಕೌಟ್ಸ್-ಗೈಡ್ಸ್, ರೋವರ್ಸ್ ಮತ್ತು ರೇಂಜರ್ಸ್‌ಗಳ ರಾಜ್ಯ ಮಟ್ಟದ ಸಾಂಸ್ಕೃತಿಕ ಉತ್ಸವ | ...13 |
| ಪ್ರಥಮ ಕಿತ್ತೂರು ಕರ್ನಾಟಕ ಜಾಂಬೊರೇಟ್-2025 | ...14 |
| ಏರ್ ಸ್ಕೌಟ್ಸ್-ಗೈಡ್ಸ್ ಲೀಡರ್‌ಗಳ ಮೂಲತರಬೇತಿ ಶಿಬಿರ | ...15 |
| ಚಾಂಪಿಯನ್ ಆಫ್ ದಿ ಇಯರ್-2023 | ...16 |
| ಜಿಲ್ಲಾ ವಾರ್ತೆಗಳು | ...17 |
| ಶ್ರದ್ಧಾಂಜಲಿ | ...30 |

## ಓದುಗರ ಗಮನಕ್ಕೆ

ಸಹೃದಯ ಓದುಗರೇ,

ಈ ಮಾಸಪತ್ರಿಕೆಯ ಬಗ್ಗೆ ತಮ್ಮ ಅನಿಸಿಕೆ ಅಭಿಪ್ರಾಯ ಮತ್ತು ಸಲಹೆಗಳನ್ನು ಕಳುಹಿಸಲು ಕೋರಿಕೆ. ಇದರಿಂದ ಮಾಸಪತ್ರಿಕೆಯನ್ನು ಮತ್ತಷ್ಟು ಉತ್ತಮಗೊಳಿಸಲು ಸಹಕಾರಿಯಾಗುತ್ತದೆ. ಅಲ್ಲದೆ ತಾವು, ಸ್ಕೌಟ್-ಗೈಡ್ ಚಳವಳಿಯ ಬಗ್ಗೆ ರಚಿಸಿರುವ ಕವನಗಳು, ಸಣ್ಣ ಕತೆಗಳು, ಪ್ರಬಂಧಗಳು, ಪ್ರವಾಸ ಕಥನಗಳು, ಶಿಬಿರದ ಅನುಭವಗಳು ಇತ್ಯಾದಿಗಳನ್ನು ಕಳುಹಿಸಿಕೊಡಲು ಕೋರಿದೆ. ಇವುಗಳಲ್ಲಿ ಸೂಕ್ತ ಕಂಡವುಗಳನ್ನು ಮಾಸಪತ್ರಿಕೆಯಲ್ಲಿ ಪ್ರಕಟಿಸಲಾಗುವುದು.

– ಸಂಪಾದಕರು

080-2226 0017, 2226 7470 www.bsgkarnataka.org The Bharat Scouts & Guides-Karnataka



# ರಾಜ್ಯ ಮುಖ್ಯ ಆಯುಕ್ತರ ನುಡಿ

**ಸಮಸ್ತ ಸ್ಕೌಟ್ಸ್–ಗೈಡ್ ಬಂಧುಗಳಿಗೆ ಶುಭಾಶಯಗಳು**

2025ನೆ ವರ್ಷಕ್ಕೆ ನಾವು ಕಾಲಿಟ್ಟಿದ್ದೇವೆ. ಕಳೆದ ವರ್ಷದ ನಮ್ಮ ಸಾಧನೆಗಳು ಮತ್ತು ಯಶಸ್ಸಿನ ಹಿನ್ನೋಟದಿಂದ ಪ್ರೇರಿತಗೊಂಡು, ಹೊಸ ವರ್ಷದ ಗುರಿಗಳನ್ನು ಸಾಧಿಸುವ ದಿಶೆಯಲ್ಲಿ ನಾವೆಲ್ಲರೂ ಮುಂದುವರೆಯೋಣ. ನಮ್ಮ ಎಲ್ಲ ತಂಡಗಳ ಶ್ರದ್ಧೆ, ಪರಿಶ್ರಮ ಮತ್ತು ಸಾಮರಸ್ಯದಿಂದ ನಾವು ಹೊಸ ಗುರಿಗಳನ್ನು ತಲುಪಿ, ಯಶಸ್ಸಿನ ಹೊಸ ಹಾದಿಗಳನ್ನು ನಿರ್ಮಿಸೋಣ. ಈ ವರ್ಷ ನಮ್ಮ ಸಂಸ್ಥೆಗೆ ಮತ್ತೊಂದು ಮಹತ್ತರ ಸಾಧನೆಯ ವರ್ಷವಾಗಲಿ ಹಾಗೂ ಎಲ್ಲಾ ಸ್ಕೌಟ್ಸ್ ಮತ್ತು ಗೈಡ್ಸ್ ಬಾಂಧವರಿಗೆ ಸಂತೋಷ ಮತ್ತು ಸಮೃದ್ಧಿಯ ವರ್ಷವಾಗಲೆಂದು ಶುಭಾಶಯಗಳನ್ನು ತಿಳಿಸುತ್ತೇನೆ.

ನಮ್ಮ ರಾಜ್ಯ ಸಂಸ್ಥೆಯ 106ನೇ ರಾಜ್ಯ ಪರಿಷತ್ ಸಭೆಯನ್ನು ದಕ್ಷಿಣ ಕನ್ನಡ ಜಿಲ್ಲಾ ಸಂಸ್ಥೆಯ ಸಹಕಾರದಿಂದ ಪಿಲಿಕುಳದಲ್ಲಿ ಅತ್ಯುತ್ತಮವಾಗಿ ಆಯೋಜಿಸಲಾಯಿತು. ಈ ಸಭೆಯ ಸಂಪೂರ್ಣ ಯಶಸ್ಸಿಗೆ ಕಾರಣರಾದ ಜಿಲ್ಲಾ ಸಂಸ್ಥೆಯ ಮುಖ್ಯ ಆಯುಕ್ತರಾದ ಡಾ. ಮೋಹನ್ ಆಳ್ವ ಮತ್ತು ಎಲ್ಲ ಪದಾಧಿಕಾರಿಗಳಿಗೆ ಹೃತ್ಪೂರ್ವಕ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ಆಳ್ವಾಸ್ ವಿರಾಸತ್ ಎಂಬ ಪ್ರಸಿದ್ಧ ಕಾರ್ಯಕ್ರಮದಲ್ಲಿ ಒತ್ತಡಗಳ ನಡುವೆಯೂ, ಡಾ. ಮೋಹನ್ ಆಳ್ವ ಅವರು ರೋವರ್ಸ್ ಮತ್ತು ರೇಂಜರ್ಸ್‌ಗಳ ರಾಜ್ಯ ಮಟ್ಟದ ಸಾಂಸ್ಕೃತಿಕ ಶಿಬಿರವನ್ನು ಯಶಸ್ವಿಯಾಗಿ ಆಯೋಜಿಸಿದರು. ಅವರಿಗೆ ವಿಶೇಷವಾದ ಧನ್ಯವಾದಗಳನ್ನು ತಿಳಿಸುತ್ತೇನೆ. ರಾಜ್ಯದ ವಿವಿಧ ಭಾಗಗಳಿಂದ 161 ಸದಸ್ಯರು ಈ ಸಭೆಯಲ್ಲಿ ಭಾಗವಹಿಸಿರುತ್ತಾರೆ. 2023–24ರಲ್ಲಿ ರಾಜ್ಯ ಸಂಸ್ಥೆ ಏರ್ಪಡಿಸಿದ ಕಾರ್ಯಕ್ರಮಗಳು, ಯೋಜನೆಗಳು ಹಾಗೂ ಸಾಧನೆಗಳ ಬಗ್ಗೆ ಅಭಿನಂದಿಸಲಾಯಿತು. ಅವರೆಲ್ಲರಿಗೂ ನಾನು ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಡಾ. ಮೋಹನ್ ಆಳ್ವ ಅವರು ಪಿಲಿಕುಳದ ನಮ್ಮ ಸಂಸ್ಥೆಯ ಜಾಗದಲ್ಲಿ ಮಾದರಿಯಾಗುವ ಸುಸಜ್ಜಿತ ಸಭಾಂಗಣ ಮತ್ತು ಅನೇಕ ಮೂಲಭೂತ ಸೌಕರ್ಯಗಳನ್ನು ನಿರ್ಮಿಸಿದ್ದು, ಉತ್ತಮ ಪರಿಸರ ದೃಶ್ಯವನ್ನು ಕಾಣಬಹುದು. ಅವರ ಈ ಯೋಜನೆ ಇತರ ಜಿಲ್ಲೆಗಳಿಗೆ ಪ್ರೇರಣೆಯಾಗುವುದೆಂದು ಆಶಿಸುತ್ತೇನೆ.

ನಾವು ಡಿಸೆಂಬರ್ ತಿಂಗಳಲ್ಲಿ ರಾಜ್ಯದ ವಿವಿಧ ಭಾಗಗಳಲ್ಲಿ ಹಲವು ತರಬೇತಿಗಳು, ಚಟುವಟಿಕೆಗಳು ಮತ್ತು ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಆಯೋಜಿಸಿದ್ದೇವೆ. ಕೆಲವು ಜಿಲ್ಲೆಗಳಲ್ಲಿ ಸ್ಕೌಟ್–ಗೈಡ್ ಮೇಳಗಳು, ಪ್ರಕೃತಿ ಅಧ್ಯಯನ ಮತ್ತು ಚಾರಣ ಶಿಬಿರಗಳು ನಡೆದಿವೆ. ತುಮಕೂರಿನಲ್ಲಿ ನಡೆದ ರಾಜ್ಯಮಟ್ಟದ ಗೀತಗಾಯನ ಸ್ಪರ್ಧೆ ಕೂಡ ಯಶಸ್ವಿಯಾಗಿ ಜರುಗಿದೆ. ಈ ಎಲ್ಲಾ ಚಟುವಟಿಕೆಗಳ ಮೂಲಕ ನಮ್ಮಲ್ಲಿ ಚಳುವಳಿಯ ಸದೃಢತೆಯ ಬಗ್ಗೆ ವಿಶ್ವಾಸ ಹುಟ್ಟಿದೆ. ಇದಕ್ಕೆ ಕಾರಣರಾಗಿರುವ ರಾಜ್ಯ, ಜಿಲ್ಲೆ ಮತ್ತು ಸ್ಥಳೀಯ ಸಂಸ್ಥೆಗಳ ಪದಾಧಿಕಾರಿಗಳು, ಶಿಬಿರದ ನಾಯಕರುಗಳು, ದಳನಾಯಕರುಗಳು, ಸಂಪನ್ಮೂಲ ವ್ಯಕ್ತಿಗಳು, ಶಿಕ್ಷಕರು ಹಾಗೂ ಮಕ್ಕಳಿಗೆ ನಾನು ಚಿರಋಣಿ. ಇದೇ ಉತ್ಸಾಹ ಮತ್ತು ಒಗ್ಗೂಡುವಿಕೆಯ ಮನೋಭಾವದಿಂದ ನಮ್ಮ ಮುಂದಿನ ಪ್ರಯತ್ನಗಳು ಸಹ ಯಶಸ್ವಿಯಾಗಲೆಂದು ನಾನು ಆಶಿಸುತ್ತೇನೆ.

ಕಳೆದ 5 ದಶಕಗಳಿಂದ ನಮ್ಮ ರಾಜ್ಯ ಸಂಸ್ಥೆಗೆ ಮಾರ್ಗದರ್ಶನ ಮಾಡುತ್ತಿರುವ, ಚಳುವಳಿ ಬಗ್ಗೆ ಗಾಢ ಅಭಿಮಾನವನ್ನು ಹೊಂದಿರುವ ಹಿರಿಯ ಸಾಹಿತಿಗಳಾದ ನಾಡೋಜ ಡಾ. ಗೊ.ರು.ಚನ್ನಬಸಪ್ಪ ಅವರು ಈ ತಿಂಗಳು ಮಂಡ್ಯದಲ್ಲಿ ಯಶಸ್ವಿಯಾಗಿ ಜರುಗಿದ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಇದನ್ನು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ಸದಸ್ಯರೆಲ್ಲರೂ ಸಂಭ್ರಮಿಸಿದ್ದಾರೆ. ಅವರ ಅಧ್ಯಕ್ಷತೆಯಲ್ಲಿ ಸಮ್ಮೇಳನ ಯಶಸ್ವಿಯಾಗಿ ನಡೆದಿದ್ದು, ಇದು ನಮ್ಮ ಸಂಸ್ಥೆಗೂ ಹೆಮ್ಮೆ ತಂದಿದೆ.

ಜನವರಿ 2025ರಲ್ಲಿ ಯಾದಗಿರಿಯಲ್ಲಿ ನಡೆಯಲಿರುವ ಎರಡನೇ ಕಲ್ಯಾಣ ಕರ್ನಾಟಕ ಸ್ಕೌಟ್ಸ್–ಗೈಡ್ಸ್ ಜಾಂಬೋರೇಟ್ ಹಾಗೂ ಧಾರವಾಡದಲ್ಲಿ ನಡೆಯಲಿರುವ ಪ್ರಥಮ ಕಿತ್ತೂರು ಕರ್ನಾಟಕ ಜಾಂಬೋರೇಟ್‌ಗಳನ್ನು ಯಶಸ್ವಿಯಾಗಿಸಲು ಎಲ್ಲರ ಸಹಕಾರ ಮತ್ತು ಬೆಂಬಲವನ್ನು ನಾನು ನಿರೀಕ್ಷಿಸುತ್ತೇನೆ.

ನಮ್ಮ ಸಂಸ್ಥೆಯ ರಾಜ್ಯ ಸಂಘಟನಾ ಆಯುಕ್ತರು (ಗೈಡ್ಸ್) ಆದ ಶ್ರೀಮತಿ ಮಂಜುಳ ಅವರ ಪತಿ ಶ್ರೀ ಎಂ.ಕೆ. ರಾಜಶೇಖರ್‌ರವರು, ತುಮಕೂರು ಜಿಲ್ಲಾ ಸಂಸ್ಥೆಯಲ್ಲಿ ಅಪಾರ ಸೇವೆ ಸಲ್ಲಿಸಿದ್ದ ಮಾಜಿ ಜಿಲ್ಲಾ ಸ್ಕೌಟ್ ಆಯುಕ್ತರಾದ ಡಾ. ಸಿ. ಜಯರಾಮರಾವ್‌ರವರು ಹಾಗೂ ಕೋಲಾರ ಜಿಲ್ಲಾ ಸಂಸ್ಥೆಯ ಸಹಾಯಕ ಆಯುಕ್ತ (ಮುಕ್ತದಳಗಳು) ರಾಗಿದ್ದ ಶ್ರೀ ರವಿಕುಮಾರ್ ರವರು ಇತ್ತೀಚೆಗೆ ನಮ್ಮನ್ನಗಲಿದ್ದಾರೆ. ಇವರುಗಳ ಅಗಲಿಕೆ ಸ್ಕೌಟ್ಸ್ ಮತ್ತು ಗೈಡ್ಸ್ ಚಳುವಳಿಗೆ ತುಂಬಲಾರದ ನಷ್ಟವಾಗಿದೆ.

ಪರಿಸರ ಪ್ರೇಮಿ ಹಾಗೂ ವೃಕ್ಷಮಾತೆಯೆಂದೇ ಪ್ರಸಿದ್ಧಿಯಾಗಿದ್ದ, ಪದ್ಮ ಪ್ರಶಸ್ತಿ ಪುರಸ್ಕೃತೆ ಶ್ರೀಮತಿ ತುಳಸಿಗೌಡ ಅವರು ಪರಿಸರ ಸಂರಕ್ಷಣೆ ಮತ್ತು ವೃಕ್ಷತೋಟಗಳ ಸ್ಥಾಪನೆ ಮೂಲಕ ಅವರು ನೀಡಿರುವ ಪಾಠಗಳು ಅದೆಷ್ಟೋ ಪೀಳಿಗೆಗೆ ಪ್ರೇರಣೆಯಾಗಿ ಇರಲಿದೆ. ಇವರನ್ನು ಕಳೆದುಕೊಂಡು ರಾಜ್ಯಕ್ಕೆ ತುಂಬಲಾರದ ನಷ್ಟವಾಗಿದೆ.

ರಾಜ್ಯದ ಮಾಜಿ ಮುಖ್ಯಮಂತ್ರಿಗಳಾದ ಗೌರವಾನ್ವಿತ ಶ್ರೀ ಎಸ್.ಎಂ. ಕೃಷ್ಣ ರವರು ಈ ತಿಂಗಳ 10ರಂದು ದೈವಾಧೀನರಾಗಿದ್ದಾರೆ. ದೂರದೃಷ್ಟಿಯುಳ್ಳ ಮತ್ತು ಅಭಿವೃದ್ಧಿಯ ಚಿಂತಕರಾಗಿದ್ದ ಅವರು ಸ್ಕೌಟ್ಸ್ ಗೈಡ್ ಚಳವಳಿಯನ್ನು ಪ್ರೋತ್ಸಾಹಿಸುತ್ತಿದ್ದು, ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ನಮ್ಮ ರಾಜ್ಯ ಸಂಸ್ಥೆಗೆ ಅಧ್ಯಕ್ಷರಾಗಿದ್ದು ಹಲವು ರೀತಿಯಲ್ಲಿ ಬೆಂಬಲ ನೀಡಿದ್ದನ್ನು ನಮ್ಮ ಸಂಸ್ಥೆ ಕೃತಜ್ಞತೆಯಿಂದ ಸ್ಮರಿಸುತ್ತದೆ.

ಮಾಜಿ ಪ್ರಧಾನಮಂತ್ರಿ ಡಾ. ಮನಮೋಹನ್ ಸಿಂಗ್ ಅವರು ಡಿಸೆಂಬರ್ 26ರಂದು ನಿಧನ ಹೊಂದಿರುತ್ತಾರೆ. ಭಾರತದ ಆರ್ಥಿಕ ಸುಧಾರಣೆಯ ಹರಿಕಾರರಾಗಿದ್ದ ಅವರು 1991ರಲ್ಲಿ ಹಣಕಾಸು ಸಚಿವರಾಗಿ ದೇಶದ ಆರ್ಥಿಕತೆಯನ್ನು ಉದಾರೀಕರಣದ ದಿಕ್ಕಿನಲ್ಲಿ ಮುನ್ನಡೆಸಿದರು. ಅವರ ಆಡಳಿತದಲ್ಲಿ ಭಾರತವು ಆರ್ಥಿಕ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಮಹತ್ವದ ಪ್ರಗತಿಯನ್ನು ಸಾಧಿಸಿತು.

ಈ ಎಲ್ಲ ಮಹನೀಯರುಗಳ ನಿಧನಕ್ಕೆ ರಾಜ್ಯ ಸಂಸ್ಥೆಯ ವತಿಯಿಂದ ಹಾಗೂ ವೈಯಕ್ತಿಕವಾಗಿ ಶ್ರದ್ಧಾಂಜಲಿಗಳನ್ನು ಅರ್ಪಿಸುತ್ತಾ, ಅವರೆಲ್ಲರ ಆತ್ಮಗಳಿಗೆ ಚಿರಶಾಂತಿಯನ್ನು ಕರುಣಿಸಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇನೆ.

**ಸ್ಕೌಟ್ಸ್ ಮತ್ತು ಗೈಡ್ಸ್ ವಂದನೆಗಳೊಂದಿಗೆ,**

ತಮ್ಮ ವಿಶ್ವಾಸಿ

(ಪಿ.ಜಿ.ಆರ್. ಸಿಂಧ್ಯ)

ರಾಜ್ಯ ಮುಖ್ಯ ಆಯುಕ್ತರು

ಆಹಾರ ದೈವಿಕ ಸಂಪತ್ತು, ಅದನ್ನು ಸಂರಕ್ಷಿಸೋಣ
ಆಹಾರವನ್ನು ಉಳಿಸಿ, ಭವಿಷ್ಯವನ್ನು ಕಾಪಾಡಿ!

# ಸಂಪಾದಕೀಯ



ಮಾನ್ಯರೆ,

"ಯುವ ಶಕ್ತಿ ವಿದ್ಯುಚ್ಛಕ್ತಿ ಇದ್ದ ಹಾಗೆ, ಹುಷಾರಾಗಿದ್ರೆ ಎಷ್ಟು ಉಪಯುಕ್ತಯೋ, ಎಚ್ಚರ ತಪ್ಪಿದರೆ ಅಷ್ಟೇ ಅಪಾಯ" ಎಂಬ ಮಾತು ಸಶಕ್ತ. ಸದೃಡ ಯುವ ಶಕ್ತಿಯನ್ನು ಪಡೆಯುವಲ್ಲಿ ನಮ್ಮೆಲ್ಲರ ಜವಾಬ್ದಾರಿಗಳನ್ನು ಈ ಮಾತು ಎಚ್ಚರಿಸುವುದಾಗಿದೆ. ನಮ್ಮ ಯುವಕರು "ಯಾವುದೇ ಕ್ಷುಲ್ಲಕ ವಿಷಯಕ್ಕೆ ಮಣಿಯಬಾರದು, ಮಹತ್ತರವಾದುದನ್ನು ಸಾಧಿಸುವಂತಹ ಹಠ ಹೊಂದಿದವರಾಗಿ, ನಿಜದ ನೇರಕ್ಕ ನಡೆಯುವ ನಿಶ್ಚಲತೆಯನ್ನು ಹೊಂದಿ ಅನ್ಯಾಯಕ್ಕೆ ಯಾವಾಗಲೂ ತಲೆಬಾಗದೆ, ಜನ ಸಾಮಾನ್ಯರ ದುಃಖಕ್ಕೆ ಮರುಗುವ ಮನಸ್ಸಿನವರಾಗಿರಬೇಕು" ಇದು ಸರ್ವರ ಆಶಯ ಆಗಿರುವುದು. ಇದನ್ನು ಸಾಕ್ಷಾತ್ಕಾರಗೊಳಿಸುವಲ್ಲಿ ಸರ್ಕಾರದ, ಸಮಾಜದವರೆಲ್ಲರ, ಕಾಯಾ, ವಾಚಾ, ಮನಸಾ ಜವಾಬ್ದಾರಿಯುತ ನಿರ್ವಹಣಾ ಕ್ರಮಗಳು ಅತ್ಯಗತ್ಯ.

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಚಳುವಳಿಯಲ್ಲಿ, ಸಶಕ್ತ, ಸದೃಡ, ಸರ್ವಾಂಗೀಣ ಅಭಿವೃದ್ಧಿಯ ಯುವ ಜನಾಂಗವನ್ನು ನಿರ್ಮಿಸುವಲ್ಲಿ ಮೂರು ವಯಸ್ಸಿನ ಮಕ್ಕಳಿಂದ 25 ವಯಸ್ಸಿನ ಯುವಕರವರೆಗೆ ಘನ ಧ್ಯೇಯೋದ್ದೇಶಗಳನ್ನು ಕಾರ್ಯಾನುಷ್ಠಾನಗೊಳಿಸುತ್ತಿದ್ದಾರೆ. ಅದರಂತೆ 3 ರಿಂದ 5 ವರ್ಷ ವಯೋಮಾನದ ಬನ್ನಿಸ್‌ಗಳಿಗೆ ನಗುನಗುತ್ತಲೇ ಕಲಿಯುವಂತಹ, 5 ರಿಂದ 10 ವರ್ಷ ವಯೋಮಾನದ ಕಬ್ಸ್, ಬುಲ್‌ಬುಲ್ಸ್‌ಗಳು ತಮ್ಮ ಕೈಲಾದಷ್ಟು ಕಾರ್ಯ ಮಾಡುವ ಧ್ಯೇಯ ಹೊಂದಿ, ದಿನಕ್ಕೊಂದು ಒಳ್ಳೇಯ ಕೆಲಸ ಮಾಡುವಲ್ಲಿ ಪ್ರೋತ್ಸಾಹಿಸಲಾಗುವುದು. 10 ರಿಂದ 15 ವಯೋಮಾನದ ಸ್ಕೌಟ್ಸ್–ಗೈಡ್ಸ್‌ಗಳು ತಮ್ಮ ತಮ್ಮ ಜವಾಬ್ದಾರಿಗಳನ್ನು ಯಶಸ್ವಿಯಾಗಿ ನಿರ್ವಹಿಸುವಲ್ಲಿ ಮತ್ತು ಹಾಗೆ ಒದಗಬಹುದಾದ ಅಡಚಣೆಗಳನ್ನು ಎದುರಿಸಿ ಮುನ್ನಡೆಯುವಲ್ಲಿ "ಸದಾ ಸಿದ್ದರಾಗಿ" ಮುನ್ನುಗ್ಗುವ ಸಾಮರ್ಥ್ಯವನ್ನು ಬೆಳೆಸಲಾಗುವುದು. 15 ರಿಂದ 25 ವರ್ಷ ವಯೋಮಾನದ ರೋವರ್ಸ್–ರೇಂಜರ್ಸ್‌ಗಳು ಸಮಾಜ ಸೇವಾ ಮನೋಭಾವನೆಯನ್ನು ಮೈಗೂಡಿಸಿಕೊಳ್ಳಲು ಸಮಾಜಾಭಿವೃದ್ಧಿ ಸೇವೆ" ಚಟುವಟಿಕೆಗಳ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಂಡು ತಮ್ಮಗಳ ಬದುಕನ್ನು ಅರ್ಥಗರ್ಭಿತ ಮತ್ತು ಸಾರ್ಥಕ ಮಾಡಿಕೊಳ್ಳುವಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಚಳುವಳಿಯು ಪ್ರೇರೇಪಿಸುತ್ತಿರುವುದು ನಮಗೆ ತಿಳಿದಿರುವ ವಿಷಯವೇ ಆಗಿದೆ.

ಈ ಎಲ್ಲಾ ಚಟುವಟಿಕೆಗಳನ್ನು, ಕಾರ್ಯಕ್ರಮಗಳನ್ನು ಕೇವಲ ದಳಮಟ್ಟಕ್ಕೆ ಸೀಮಿತಗೊಳಿಸದೆ, ಅವುಗಳು ಜಿಲ್ಲಾ. ರಾಜ್ಯ ರಾಷ್ಟ್ರಮಟ್ಟದಲ್ಲಿ ನಿರ್ವಹಣೆ ಆಗುವಂತೆ ಮಾಡಲು ಅವಶ್ಯಕ ಮೂಲ ಸೌಲಭ್ಯಗಳು ಮತ್ತು ವಿವಿಧ ಕಾರ್ಯಕ್ರಮಗಳು, ಚಟುವಟಿಕೆಗಳ ನಿರ್ವಹಣೆ ಅತ್ಯಗತ್ಯ. ತಮ್ಮೂಲಕ ವಿದ್ಯಾರ್ಥಿಗಳ ಹೆಚ್ಚು ಹೆಚ್ಚು ಕಾರ್ಯಚಟುಚಟಿಕೆಗಳಲ್ಲಿ, ಕಾರ್ಯಕ್ರಮಗಳಲ್ಲಿ ಭಾಗವಹಿಸುವಂತಾಗಿ ಅವರುಗಳ ಸರ್ವಾಂಗೀಣ ಅಭಿವೃದ್ಧಿಗೆ ಸಹಕಾರಿ ಆಗಲಿರುವುದು ಸ್ಪಷ್ಟ.

ಈ ನಿಟ್ಟಿನಲ್ಲಿ ನಮ್ಮ ರಾಜ್ಯ ಮುಖ್ಯ ಆಯುಕ್ತರಾಗಿರುವ ಶ್ರೀ ಪಿ.ಜಿ.ಆರ್. ಸಿಂಧ್ಯರವರ ನೇತೃತ್ವದಲ್ಲಿ ಬಹಳಷ್ಟು ವಿಶೇಷ ತರಬೇತಿಗಳು ಕಲೆ ಮತ್ತು ಸಾಂಸ್ಕೃತಿಕ ಅಭಿವೃದ್ಧಿ ಕಾರ್ಯ ಚಟುವಟಿಕೆಗಳಲ್ಲಿ ಜಾಂಬೂರಿ ಮತ್ತು ಜಾಂಬೋರೇಟ್‌ಗಳು ಯಶಸ್ವಿ ಆಗಿ ನಿರ್ವಹಣೆ ಆಗುತ್ತಿವೆ. ಅಲ್ಲದೆ ಇವುಗಳ ಸಕಾಲಿಕ ಮತ್ತು ಸಮರ್ಪಕ ನಿರ್ವಹಣೆಗೆ ಬಹಳಷ್ಟು ಜಿಲ್ಲಾ ಕೇಂದ್ರಗಳಲ್ಲಿ ಸುಸಜ್ಜಿತ ಆಡಳಿತ ಮತ್ತು ತರಬೇತಿ ಕೇಂದ್ರಗಳು ತಲೆ ಎತ್ತುತ್ತಿರುವುದು ಹರ್ಷದಾಯಕ. ಜೊತೆಗೆ ಡಾ॥ ಎಂ. ಮೋಹನ್ ಆಳ್ವ, ಅಧ್ಯಕ್ಷರು ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ, ಮೂಡಬಿದರೆರವರು ಏರ್ಪಡಿಸಿದ್ದ ಅಂತರರಾಷ್ಟ್ರೀಯ ಸಾಂಸ್ಕೃತಿಕ ಜಾಂಬೂರಿ, ಪಿಲಿಕುಳದಲ್ಲಿ ನಿರ್ಮಿಸಲ್ಪಟ್ಟಿರುವ ಸುಸಜ್ಜಿತ ತರಬೇತಿ ಕೇಂದ್ರ, ವಿವಿಧ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಆಡಳಿತ ಮತ್ತು ತರಬೇತಿ ಕೇಂದ್ರಗಳು ಮತ್ತು ವಿವಿಧ ಜಿಲ್ಲೆಗಳವರು ಸ್ವಯಂ ಪ್ರೇರಣೆಯಿಂದ ಏರ್ಪಡಿಸುತ್ತಿರುವ "ಜಾಂಬೂರೇಟ್". ಯುವ ಶಕ್ತಿಯ ಸುಮನಸ್ಸನ್ನು ಕಟ್ಟುವಲ್ಲಿ ಬಹಳಷ್ಟು ಪೂರಕ ಮತ್ತು ಪ್ರೇರಕ ಆಗಿರುವುದರಲ್ಲಿ ಸಂಶಯವಿಲ್ಲ. ಈ ಎಲ್ಲಾ ಸೌಲಭ್ಯ ಮತ್ತು ಸೌಕರ್ಯಗಳನ್ನು ಹೆಚ್ಚು ಹೆಚ್ಚು ಬಳಸುತ್ತಾ ಯುವ ಶಕ್ತಿಯ ಸರ್ವತೋಮುಖ ಅಭಿವೃದ್ಧಿಗೆ ಸರ್ವರೂ ಶ್ರಮಿಸಬೇಕಾಗಿ ವಿನಂತಿಸುತ್ತೇನೆ.

ವಿದ್ಯಾರ್ಥಿಗಳ ಗುಣಾತ್ಮಕ ಶಿಕ್ಷಣ ಮತ್ತು ಸರ್ವಾಂಗೀಣ ಅಭಿವೃದ್ಧಿಯಲ್ಲಿ ಶಾಲಾಶಿಕ್ಷಕರ ಕಾಲೇಜು ಉಪನ್ಯಾಸಕರುಗಳ ಪಾತ್ರ ಅಪಾರ. ಅವರಿಗೆ ಈ ಬಗ್ಗೆ ಹೆಚ್ಚು ಮಾಹಿತಿ ನೀಡುವಲ್ಲಿ ಮೂಲ ತರಬೇತಿಗಳನ್ನು, ಹೆಚ್ಚುವರಿ ಅರ್ಹತಾ ತರಬೇತಿಗಳನ್ನು ಬಹಳಷ್ಟು ನೀಡುತ್ತಿರುವುದು ಸರಿಯಷ್ಟೇ. ಡಿಸೆಂಬರ್ 18 ರಿಂದ 24ರ ವರೆಗೆ ರಾಜ್ಯದಾದ್ಯಂತ ಏಕಕಾಲದಲ್ಲಿ 500ಕ್ಕೂ ಹೆಚ್ಚು ಶಿಕ್ಷಕರು/ ಉಪನ್ಯಾಸಕರುಗಳಿಗೆ ಮೂಲ ತರಬೇತಿ ನೀಡುವಲ್ಲಿ ಸರ್ವರ ಸಹಕಾರ ಸಹಭಾಗಿತ್ವ ಶ್ಲಾಘನೀಯ. ಹೀಗೆ ತರಬೇತಿ ಪಡೆದವರೆಲ್ಲರೂ ತಮ್ಮ ತಮ್ಮ ಶಾಲೆ/ ಕಾಲೇಜುಗಳಲ್ಲಿ ಸ್ಕೌಟ್ಸ್/ ಗೈಡ್ಸ್ ದಳಗಳನ್ನು ತಕ್ಷಣದಿಂದಲೇ ಪ್ರಾರಂಭಿಸಿ ವಿದ್ಯಾರ್ಥಿಗಳ ಸರ್ವಾಂಗೀಣ ಅಭಿವೃದ್ಧಿಯಲ್ಲಿ ಪಾಲುದಾರರಾಗ ಬೇಕಾದುದು ಅತ್ಯಂತ ಅವಶ್ಯಕ.

ಒಟ್ಟಿನಲ್ಲಿ ಸ್ವಾಮಿ ವಿವೇಕಾನಂದರ "ಏಳಿ, ಎದ್ದೇಳಿ, ಗುರಿ ಮುಟ್ಟುವ ತನಕ ನಿಲ್ಲದಿರಿ" (ARISE, AWAKE, STOP NOT TILL THE GOAL IS REACHED) ಎಂಬುದನ್ನು ಅರಿತು, ವಿದ್ಯಾರ್ಥಿಗಳು (ಯುವಶಕ್ತಿ) ತಮ್ಮ ಅಸಾಧಾರಣ ಸಾಮರ್ಥ್ಯಗಳನ್ನು ಸದ್ಬಳಕೆ ಮಾಡಿಕೊಂಡು, ಅವರ ಬದುಕನ್ನು ಸಾರ್ಥಕಗೊಳಿಸಿ–ಕೊಳ್ಳುವಂತಾಗುವಲ್ಲಿ ಹಿರಿಯರಾದ ನಮ್ಮಗಳೆಲ್ಲರ, ಶಿಕ್ಷಣಾಸಕ್ತರೆಲ್ಲರ ಮಾರ್ಗದರ್ಶನ ಅತ್ಯಗತ್ಯ. "ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುವುದು ಸುಲಭ ಆದರೆ ಅದರಿಂದಾಗುವ ಅನಾಹುತದಿಂದ ತಪ್ಪಿಸಿಕೊಳ್ಳುವುದು ಸಾಧ್ಯವಿಲ್ಲ" ಎಂಬುದನ್ನು ಅರಿತು, ಈ ಯುವ ಶಕ್ತಿಯ ಶ್ರೇಯಸ್ಕರ ಬೆಳವಣಿಗೆಗೆ ಪ್ರೇರಕ ಮತ್ತು ಪೂರಕ ಆಗಿರುವ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಚಳುವಳಿಯ ಅನುಷ್ಠಾನದಲ್ಲಿ ನಾವೆಲ್ಲರೂ ಸಕ್ರೀಯವಾಗಿ ಭಾಗವಹಿಸೋಣ ಎಂದು ಮತ್ತೊಮ್ಮೆ ವಿನಂತಿಸುತ್ತೇನೆ.

ಡಿಸೆಂಬರ್ 2024ರ ತಿಂಗಳ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ಎಲ್ಲಾ ಕಾರ್ಯಕ್ರಮಗಳನ್ನು, ಚಟುವಟಿಕೆಗಳನ್ನು, ತರಬೇತಿಗಳನ್ನು ಯಶಸ್ವಿಯಾಗಿ ನಿರ್ವಹಿಸಿದ ಸರ್ವರಿಗೂ ಅನಂತಾನಂತ ಅಭಿನಂದನೆಗಳೊಂದಿಗೆ ಕೃತಜ್ಞತೆಗಳನ್ನು ತಿಳಿಸಬಯಸುತ್ತೇನೆ.

2025ನೇ ವರ್ಷದ ಶುಭಾಶಯಗಳೊಂದಿಗೆ

ಸ್ಕೌಟ್ಸ್–ಗೈಡ್ಸ್ ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

(ಕೆ. ಗಂಗಪ್ಪಗೌಡ)

ಸಂಪಾದಕರು ಹಾಗೂ ರಾಜ್ಯ ಕಾರ್ಯದರ್ಶಿ

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

# ಶ್ರದ್ಧಾಂಜಲಿ



## ಶ್ರೀ ಎಸ್.ಎಂ. ಕೃಷ್ಣ

ಹಿರಿಯ ರಾಜಕೀಯ ಮುತ್ಸದ್ಧಿ, ಕರ್ನಾಟಕದ ಮಾಜಿ ಮುಖ್ಯಮಂತ್ರಿ ಹಾಗೂ ಮಹಾರಾಷ್ಟ್ರದ ಮಾಜಿ ರಾಜ್ಯಪಾಲರು ಮತ್ತು ಭಾರತ ಸರ್ಕಾರದ ಮಾಜಿ ವಿದೇಶಾಂಗ ಸಚಿವರಾದ ಶ್ರೀ ಎಸ್.ಎಂ. ಕೃಷ್ಣ ಅವರ ನಿಧನವು ಕರ್ನಾಟಕ ಮತ್ತು ಭಾರತದ ರಾಜಕೀಯ ಕ್ಷೇತ್ರಕ್ಕೆ ಅಪಾರ ನಷ್ಟವನ್ನುಂಟುಮಾಡಿದೆ. ಅವರ ಅವಿಸ್ಮರಣೀಯ ಸೇವೆಗಳು, ಪ್ರಜಾ ಪ್ರಭುತ್ವದ ಹಿತಚಿಂತನೆ ಮತ್ತು ದಕ್ಷ ಆಡಳಿತವನ್ನು ರಾಜ್ಯ ಸದಾ ನೆನೆಸುತ್ತೇವೆ.

ಶ್ರೀ ಎಸ್.ಎಂ. ಕೃಷ್ಣ ಅವರು ರಾಜಕೀಯ ಜೀವನದಲ್ಲಿ ಪ್ರಜ್ಞಾವಂತ ರಾಜಕಾರಣಿಯಾಗಿದ್ದವರು. ಶಿಕ್ಷಣ ತಜ್ಞರು, ಅಭಿವೃದ್ಧಿ ಪರವಾದ ದೃಷ್ಟಿಕೋನದೊಂದಿಗೆ, ಬೃಹತ್ ಬೆಂಗಳೂರಿನ ಅಭಿವೃದ್ಧಿಗೆ ಮತ್ತು ಕರ್ನಾಟಕವನ್ನು ಆಧುನಿಕ ರಾಜ್ಯವನ್ನಾಗಿ ರೂಪಿಸಲು ಅವರ ಸೇವೆ ಅಪಾರವಾದುದು. ವಿದೇಶಾಂಗ ಸಚಿವರಾಗಿ ವಿಶ್ವಮಟ್ಟದ ರಾಜಕೀಯದಲ್ಲಿ ಕರ್ನಾಟಕದ ಹೆಸರನ್ನು ಎತ್ತರಕ್ಕೆ ಕೊಂಡೊಯ್ದವರು. ದೇಶದ ಹೆಮ್ಮೆಯನ್ನು ಹೆಚ್ಚಿಸಿದವರು. ಭಾರತ ಸರ್ಕಾರದ ಅತ್ಯುನ್ನತ ಪುರಸ್ಕಾರವಾದ ಪದ್ಮಭೂಷಣ ಪ್ರಶಸ್ತಿಯನ್ನು 2023ರಲ್ಲಿ ರಾಷ್ಟ್ರಪತಿಗಳಾದ ಶ್ರೀಮತಿ ದ್ರೌಪದಿ ಮುರ್ಮು ಅವರು ನೀಡಿ ಗೌರವಿಸಿದ್ದಾರೆ.

ಪ್ರಸಕ್ತ ಸನ್ನಿವೇಶದಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ಚಳುವಳಿಯ ಅನಿವಾರ್ಯತೆಯನ್ನು ಮನಗಂಡಿದ್ದ ಅವರು ಈ ಚಳವಳಿಯನ್ನು ಮೆಚ್ಚುಕೊಂಡಿದ್ದರು. ಮುಖ್ಯಮಂತ್ರಿಗಳಾಗಿದ್ದಾಗ ನಮ್ಮ ಸಂಸ್ಥೆಗೆ ಅಧ್ಯಕ್ಷರಾಗಿದ್ದು ಸಾಕಷ್ಟು ನೆರವನ್ನು ಸಹಕಾರವನ್ನು ಕೊಟ್ಟಿದ್ದರು. ಶ್ರೀಯುತರಿಗೆ ನಮ್ಮ ರಾಷ್ಟ್ರೀಯ ಸಂಸ್ಥೆಯು ನೀಡುವ ಅತ್ಯುನ್ನತ ಪ್ರಶಸ್ತಿ 'ಬೆಳ್ಳಿ ಆನೆ' ಪುರಸ್ಕಾರವನ್ನು ನೀಡಿ ಗೌರವಿಸಲಾಗಿದೆ.

ಇವರು ತಮ್ಮ ಧರ್ಮಪತ್ನಿ ಶ್ರೀಮತಿ ಪ್ರೇಮಕೃಷ್ಣ ಮತ್ತು ಮಕ್ಕಳಾದ ಶ್ರೀಮತಿ ಮಾಳವಿಕ ಹಾಗೂ ಶಾಂಭವಿ ಮತ್ತು ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಇವರ ನಿಧನಕ್ಕೆ ರಾಜ್ಯ ಸಂಸ್ಥೆ ಶ್ರದ್ಧಾಂಜಲಿಯನ್ನು ಅರ್ಪಿಸುತ್ತದೆ. ಅವರ ಕುಟುಂಬದವರಿಗೆ, ಸ್ನೇಹಿತರಿಗೆ ಹಾಗೂ ಅಭಿಮಾನಿಗಳಿಗೆ ಈ ಅಗಲಿಕೆಯ ನೋವನ್ನು ಭರಿಸುವ ಶಕ್ತಿಯನ್ನು ನೀಡಲೆಂದು ಹಾಗೂ ಅವರ ಆತ್ಮಕ್ಕೆ ಚಿರಶಾಂತಿಯನ್ನು ಕರುಣಿಸಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

–ರಾಜ್ಯ ಕಾರ್ಯದರ್ಶಿ

# “ಸಹಾಯಕ ನಾಯಕ ತರಬೇತುದಾರರ ಪೂರ್ವ ತರಬೇತಿ ಶಿಬಿರ ಹಾಗೂ ತರಬೇತಿ ನಾಯಕರ ಪುನಶ್ಚೇತನ ತರಬೇತಿ ಶಿಬಿರಗಳ ಸಂಕ್ಷಿಪ್ತ ವರದಿ”

## (Pre-ALT Course & Re-Orientation Course)

ನವೆಂಬರ್ 25 ರಿಂದ ಡಿಸೆಂಬರ್ 01ರ ವರೆಗೆ ಸಹಾಯಕ ನಾಯಕ ತರಬೇತುದಾರರ ಪೂರ್ವ ತರಬೇತಿ ಶಿಬಿರ ಹಾಗೂ ನವೆಂಬರ್ 27 ರಿಂದ ಡಿಸೆಂಬರ್ 01ರ ವರೆಗೆ ತರಬೇತಿ ನಾಯಕರ ಪುನಶ್ಚೇತನ ತರಬೇತಿ ಶಿಬಿರಗಳನ್ನು ಡಾ. ಆನಿಬೆಸೆಂಟ್ ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ ದೊಡ್ಡಬಳ್ಳಾಪುರ. ಬೆಂಗಳೂರು ಗ್ರಾಮಾಂತರ ಜಿಲ್ಲೆ ಇಲ್ಲಿ ರಾಜ್ಯ ಸಂಸ್ಥೆ ಹಾಗೂ ರಾಷ್ಟ್ರೀಯ ಸಂಸ್ಥೆ ಇವರ ಸಹಯೋಗದಲ್ಲಿ ಆಯೋಜಿಸಲಾಗಿತ್ತು.

ಸಹಾಯಕ ನಾಯಕ ತರಬೇತುದಾರರ ಪೂರ್ವ ತರಬೇತಿ ಶಿಬಿರದಲ್ಲಿ ಕರ್ನಾಟಕ ರಾಜ್ಯದ ಬೇರೆ ಬೇರೆ ಜಿಲ್ಲೆಗಳಿಂದ 118 ಮತ್ತು ಹೊರ ರಾಜ್ಯ ಕೇರಳದಿಂದ 02, ಆಂಧ್ರ ಪ್ರದೇಶದಿಂದ 02 ಒಟ್ಟು 122 ಶಿಬಿರಾರ್ಥಿಗಳು ಭಾಗವಹಿಸಿದ್ದರು ಹಾಗೂ ತರಬೇತಿ ನಾಯಕರ ಪುನಶ್ಚೇತನ ತರಬೇತಿ ಶಿಬಿರದಲ್ಲಿ ರಾಜ್ಯದ ಬೇರೆ ಬೇರೆ ಜಿಲ್ಲೆಗಳಿಂದ 28 ಮತ್ತು ಹೊರ ರಾಜ್ಯ ಆಂಧ್ರ ಪ್ರದೇಶದಿಂದ 04 ಮತ್ತು ತಮಿಳುನಾಡಿನಿಂದ 10 ಒಟ್ಟು 42 ಶಿಬಿರಾರ್ಥಿಗಳು ಶಿಬಿರದಲ್ಲಿ ಭಾಗವಹಿಸಿದ್ದರು.

ಸದರಿ ಶಿಬಿರಗಳಿಗೆ ಶ್ರೀ ಎಸ್.ಎಸ್. ರಾಯ್, ಡಿ.ಡಿ.ಎಸ್.ಎಲ್.ಟಿ, ಶ್ರೀಮತಿ ಕುಮುದ್ ಮೆಹೆರಾ, ಡಿ.ಡಿ.ಜಿ.ಎಲ್.ಟಿ, ಶ್ರೀ ಆರ್. ನಾರಾಯಣನ್, ಎಲ್.ಟಿ (ಸ್ಕೌಟ್), ಶ್ರೀ ನಾಗೇಶ್ ಆರ್. ಶಿವಪೂರ್, ಎಲ್.ಟಿ(ಸ್ಕೌಟ್), ಶ್ರೀಮತಿ ಉಷಾ ಶೆಣೈ, ಎಲ್.ಟಿ (ಗೈಡ್), ಶ್ರೀಮತಿ ಅರುಣಮಾಲಾ, ಎಲ್.ಟಿ (ಗೈಡ್) ಇವರುಗಳು ನಾಯಕರಾಗಿ ಕಾರ್ಯ ನಿರ್ವಹಿಸಿದರು.

ಶ್ರೀ ಸಿ.ಎಸ್.ರೆಡ್ಡಿ, ಎಲ್.ಟಿ (ಸ್ಕೌಟ್), ಶ್ರೀಮತಿ ಬಿ.ವಿ ರಾಮಲತಾ, ಎಲ್.ಟಿ (ರೇ), ಡಾ. ಕೃಪಾ ವಿಜಯ್, ಎಲ್.ಟಿ (ಗೈಡ್), ಶ್ರೀಮತಿ ಶಾಮಲ ಕೆ.ವಿ., ಎಲ್.ಟಿ (ಗೈಡ್), ಶ್ರೀ ಎ. ಸುಂದರಮೂರ್ತಿ, ಎಲ್.ಟಿ (ಸ್ಕೌಟ್), ಶ್ರೀ ಜಿ. ಭುವನ್‌ಬಾಬು, ಎಲ್.ಟಿ (ಸ್ಕೌಟ್), ಶ್ರೀ ಕೆ.ಜಿ. ಗೋಪಾಲಕೃಷ್ಣ, ಎಲ್.ಟಿ (ಸ್ಕೌಟ್), ಶ್ರೀಮತಿ ಕಾತ್ಯಾಯಿನಿ, ಎಲ್.ಟಿ (ಗೈಡ್), ಶ್ರೀಮತಿ ಗಿರಿಜ, ಎಲ್.ಟಿ (ಗೈಡ್), ಶ್ರೀ ಬಿ. ಗಣೇಶನ್, ಎ.ಎಲ್.ಟಿ (ಸ್ಕೌಟ್), ಶ್ರೀಮತಿ ಚೇತನಾ ಪಾಟೀಲ್, ಎ.ಎಲ್.ಟಿ (ಕಬ್), ಶ್ರೀಮತಿ ಸೋಫಿಯಾ ಪೆರ್ನಾಡೀಸ್, ಎ.ಎಲ್.ಟಿ (ಬುಲ್‌ಬುಲ್) ಮತ್ತು ಶ್ರೀಮತಿ ದೀಪಿಕಾ ಆರ್., ಪ್ರೀ–ಎಎ.ಎಲ್.ಟಿ (ರೇ) ಇವರು ಸಹನಾಯಕರಾಗಿ ಕಾರ್ಯನಿರ್ವಹಿಸಿದರು. ಸದರಿ ಶಿಬಿರಗಳ ಉದ್ಘಾಟನೆ ಸಮಾರಂಭವು ಆಯಾ ಶಿಬಿರಗಳ ನಾಯಕರ ಉಪಸ್ಥಿತಿಯಲ್ಲಿ ಜರುಗಿದವು.

ನವೆಂಬರ್ 27 ರಂದು ಶ್ರೀ ಎಮ್. ಎ. ಖಾಲಿದ್, ರಾಜ್ಯ ಆಯುಕ್ತರು (ಸ್ಕೌಟ್) ಹಾಗೂ ಶ್ರೀಮತಿ ರಾಧಾ ವೆಂಕಟೇಶ್, ಸಹಾಯಕ ರಾಜ್ಯ ಆಯುಕ್ತರು (ಗೈಡ್) ಇವರು ಶಿಬಿರಗಳಿಗೆ ಭೇಟಿ ನೀಡಿ ಶಿಬಿರಾರ್ಥಿಗಳಿಗೆ ಶುಭ ಕೋರಿದರು.

ನವೆಂಬರ್ 29 ರಂದು ಶ್ರೀ ಪಿ.ಜಿ.ಆರ್. ಸಿಂಧ್ಯಾ, ರಾಜ್ಯ ಮುಖ್ಯ ಆಯುಕ್ತರು ಇವರು ಶಿಬಿರಕ್ಕೆ ಭೇಟಿ ನೀಡಿ, ಶಿಬಿರಾರ್ಥಿಗಳನ್ನು ಉದ್ದೇಶಿಸಿ, ಸ್ಕೌಟ್ಸ್ ಮತ್ತು ಗೈಡ್ಸ್ ಶಿಕ್ಷಣದ ಮಹತ್ವದ ಬಗ್ಗೆ ಹಾಗೂ ತರಬೇತುದಾರರು ಮತ್ತು ಪ್ರೀ–ಎ.ಎಲ್.ಟಿ ಶಿಬಿರದ ಶಿಬಿರಾರ್ಥಿಗಳು ಮಾಡಬೇಕಾದ ಕರ್ತವ್ಯಗಳ ಬಗ್ಗೆ ತಿಳಿಸಿ, ಯುವಜನಾಂಗದ ಶ್ರೇಯೋಭಿವೃದ್ಧಿಗೆ ಶ್ರಮಿಸಲು ಕರೆ ನೀಡಿದರು.

ನವೆಂಬರ್ 30 ರಂದು ಭವ್ಯ ಶಿಬಿರಾಗ್ನಿಯನ್ನು ಆಯೋಜಿಸಲಾಗಿತ್ತು. ಶ್ರೀ ಕೆ. ಗಂಗಪ್ಪಗೌಡ, ರಾಜ್ಯ ಕಾರ್ಯದರ್ಶಿ ಹಾಗೂ ಶ್ರೀ ಎಮ್.ಎಸ್. ಸತೀಶ್, ರಾಜ್ಯ ಜಂಟಿ ಕಾರ್ಯದರ್ಶಿರವರು ಭವ್ಯ ಶಿಬಿರಾಗ್ನಿ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿ ಶಿಬಿರಾಗ್ನಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು, ಕಾರ್ಯಕ್ರಮದ ಕೊನೆಗೆ ಶಿಬಿರಾರ್ಥಿಗಳು ನೀಡಿದ ಕಾರ್ಯಕ್ರಮಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ ತಮ್ಮ ತಮ್ಮ ತಂಡಗಳಲ್ಲಿ ಮತ್ತು ತಾವು ನಡೆಸುವ ತರಬೇತಿ ಶಿಬಿರಗಳಲ್ಲಿ ಇಂತಹ ಸಮಾರಂಭ ಏರ್ಪಡಿಸಿ, ಚಟುವಟಿಕೆಗಳ ಮಹತ್ವವನ್ನು ಎಲ್ಲರಿಗೂ ತಿಳಿಸುವಂತೆ ಹಿತನುಡಿದರು.

ಡಿಸೆಂಬರ್ 01 ರಂದು ಸರ್ವಧರ್ಮ ಪ್ರಾರ್ಥನೆಯನ್ನು ನಡೆಸಲಾಯಿತು. ನಂತರದಲ್ಲಿ ಶಿಬಿರಾರ್ಥಿಗಳಿಂದ ಮೌಲ್ಯಮಾಪನ, ಶಿಬಿರಾರ್ಥಿಗಳ ಮುಕ್ತ ಸಭೆ ಹಾಗೂ ಧ್ವಜ ಅವರೋಹಣ ಕಾರ್ಯಕ್ರಮ ನಡೆಸಿ, ರಾಷ್ಟ್ರಗೀತೆ ಹೇಳುವುದರೊಂದಿಗೆ ತರಬೇತಿ ಕಾರ್ಯಕ್ರಮಗಳನ್ನು ಮುಕ್ತಾಯಗೊಳಿಸಲಾಯಿತು.










# 106ನೇ ರಾಜ್ಯ ಪರಿಷತ್ ಮಹಾಸಭೆ ವರದಿ

ಡಿಸೆಂಬರ್ 14 ರಂದು ರಾಜ್ಯದ 106ನೇ ರಾಜ್ಯ ಪರಿಷತ್ ಮಹಾ ಸಭೆಯನ್ನು ಜಿಲ್ಲಾ ತರಬೇತಿ ಕೇಂದ್ರ, ಪಿಲಿಕುಳ, ದಕ್ಷಿಣ ಕನ್ನಡ ಜಿಲ್ಲೆ ಇಲ್ಲಿ ನೆರವೇರಿಸಲಾಯಿತು. ಸಾಮೂಹಿಕ ಪ್ರಾರ್ಥನೆ ನಂತರ ಶ್ರೀ ಕೆ. ಗಂಗಪ್ಪಗೌಡ, ರಾಜ್ಯ ಕಾರ್ಯದರ್ಶಿರವರು ಸರ್ವರನ್ನು ಸ್ವಾಗತಿಸುವ ಮೂಲಕ ಸಭೆಯು ಪ್ರಾರಂಭವಾಯಿತು.

ಶ್ರೀ ಕೆ. ಗಂಗಪ್ಪಗೌಡ, ರಾಜ್ಯ ಕಾರ್ಯದರ್ಶಿಗಳು ಮಾತನಾಡಿ "106ನೇ ರಾಜ್ಯ ಪರಿಷತ್ ಮಹಾ ಸಭೆಯು ದಕ್ಷಿಣ ಕನ್ನಡ ಜಿಲ್ಲೆಯ ಪಿಲಿಕುಳದಲ್ಲಿ ನಡೆಯುತ್ತಿರುವುದಕ್ಕೆ ಕಾರಣ, ಇಲ್ಲಿ ನಡೆಯುವ ಅಭಿವೃದ್ಧಿ ಕಾರ್ಯಕ್ರಮ ಮತ್ತು ಚಟುವಟಿಕೆಗಳು. ಉತ್ತಮವಾದ ನಿರ್ಧಾರ ಮತ್ತು ಕಾರ್ಯ ಆದಾಗ ಮಾತ್ರ ಕಾರ್ಯಕ್ರಮಕ್ಕೆ ಅರ್ಥ ಬರುತ್ತೆ ಎಂಬುದನ್ನು ಸಾಕಾರಗೊಳಿಸಿದಂತಹ ವ್ಯಕ್ತಿ ಡಾ॥ ಎಂ. ಮೋಹನ್ ಆಳ್ವಾರವರು. ಯುವ ಶಕ್ತಿಯನ್ನು ಅಭಿವೃದ್ಧಿ ಪಡಿಸಲು ಪೂರಕವಾದಂತಹ ಕಾರ್ಯಕ್ರಮಗಳು ಆಗಬೇಕು ಎಂಬ ನಿಲುವು ತೆಗೆದುಕೊಂಡು, ಅದನ್ನು ಅನುಷ್ಠಾನಗೊಳಿಸುವಲ್ಲಿ ಪೂರಕವಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯ ಪಿಲಿಕುಳ ತರಬೇತಿ ಕೇಂದ್ರವನ್ನು ದೊಡ್ಡ ತರಬೇತಿ ಕೇಂದ್ರವಾಗಿ ಮಾಡುವ ಉದ್ದೇಶವನ್ನು ಡಾ॥ ಎಂ. ಮೋಹನ್ ಆಳ್ವಾರವರು ಹೊಂದಿದ್ದು, ಇದಕ್ಕೆ ಪೂರಕವಾಗಿ ಪ್ರೋತ್ಸಾಹಿಸುತ್ತಾ ಬಂದಿರುವ ಮಾನ್ಯರಾಜ್ಯ ಮುಖ್ಯ ಆಯುಕ್ತರ ಆಶಯದೊಂದಿಗೆ ಇಂದು 106ನೇ ರಾಜ್ಯ ಪರಿಷತ್ ಮಹಾಸಭೆಯನ್ನು ಪಿಲಿಕುಳ ತರಬೇತಿಕೇಂದ್ರದಲ್ಲಿ ನೆರವೇರಿಸಲಾಗುತ್ತಿದೆ" ಎಂದು ತಿಳಿಸಿದರು.



ಶ್ರೀಮತಿ ಆಶಾ ಪ್ರಸನ್ನಕುಮಾರ್, ಉಪಾಧ್ಯಕ್ಷರು ಹಾಗೂ ಜಿಲ್ಲಾ ಮುಖ್ಯ ಆಯುಕ್ತರು, ತುಮಕೂರು ಜಿಲ್ಲೆ ಇವರು ಅಧ್ಯಕ್ಷತೆ ವಹಿಸಿದ್ದರು. ಡಾ॥ ಎಂ. ಮೋಹನ್ ಆಳ್ವಾ, ಜಿಲ್ಲಾ ಮುಖ್ಯ ಆಯುಕ್ತರು, ದಕ್ಷಿಣ ಕನ್ನಡ ಜಿಲ್ಲೆ ಇವರು ದೀಪ ಬೆಳಗಿಸುವ ಮೂಲಕ ಸಭೆಯನ್ನು ಉದ್ಘಾಟಿಸಿದರು. ನಂತರ ಮಾತನಾಡುತ್ತ, 'ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ದಕ್ಷಿಣ ಕನ್ನಡ ಜಿಲ್ಲಾ ಸಂಸ್ಥೆಯ 100ನೇ ವರ್ಷಾಚರಣೆ ಹಾಗೂ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಚಳುವಳಿಯ 75ನೇ ವರ್ಷಾಚರಣೆಯ ಈ ಸಂದರ್ಭದಲ್ಲಿ ಪಿಲಿಕುಳದಲ್ಲಿ ರಾಜ್ಯ ಪರಿಷತ್ ಮಹಾಸಭೆಯನ್ನು ನೆರವೇರಿಸುತ್ತಿರುವುದು ಸಂತೋಷದ ವಿಷಯ. ಪಿಲಿಕುಳ ಕೇಂದ್ರವು ಕೇವಲ ದಕ್ಷಿಣ ಕನ್ನಡ ಜಿಲ್ಲಾ ತರಬೇತಿ ಕೇಂದ್ರವಲ್ಲ, ಇದು ಇಡೀ ರಾಜ್ಯದ ಸ್ವತ್ತು. ಇದು ರಾಜ್ಯ ತರಬೇತಿ ಕೇಂದ್ರ, ಇಡೀ ರಾಜ್ಯದ ಯಾವುದೇ ಕಾರ್ಯಕ್ರಮ, ಶಿಬಿರ, ತರಬೇತಿಗಳಿಗೆ ಈ ಕೇಂದ್ರವು ತೆರೆದಿರುತ್ತದೆ. ಕೇವಲ ನಮ್ಮ ಜಿಲ್ಲೆಯಲ್ಲಿ ಅಷ್ಟೇ ಅಲ್ಲ, ನಮ್ಮ ರಾಜ್ಯದ ಎಲ್ಲಾ ಜಿಲ್ಲಾ ಸಂಸ್ಥೆಗಳಲ್ಲಿಯೂ ಈ ರೀತಿಯ ಕೇಂದ್ರಗಳನ್ನು ರಚಿಸುವಲ್ಲಿ ಜಿಲ್ಲೆಯವರುಗಳು ಕ್ರಮಕೈಗೊಳ್ಳಬೇಕು' ಎಂದು ಹೇಳಿದರು. ಇದೇ ಸಂದರ್ಭದಲ್ಲಿ ಡಾ॥ ಎಂ. ಮೋಹನ್ ಆಳ್ವಾರವರನ್ನು ಸನ್ಮಾನಿಸಿ, ಗೌರವಿಸಲಾಯಿತು.

ಶ್ರೀ ಸಿದ್ಧರಾಮಯ್ಯ, ಸನ್ಮಾನ್ಯ ಮುಖ್ಯ ಮಂತ್ರಿಗಳು, ಕರ್ನಾಟಕ ಸರ್ಕಾರ ಮತ್ತು ಮಾನ್ಯ ಅಧ್ಯಕ್ಷರು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ಹಾಗೂ ಶ್ರೀ ಡಿ.ಕೆ. ಶಿವಕುಮಾರ್, ಮಾನ್ಯ ಉಪ ಮುಖ್ಯ ಮಂತ್ರಿಗಳು, ಕರ್ನಾಟಕ ಸರ್ಕಾರ ಇವರುಗಳ ಸಂದೇಶವನ್ನು ಶ್ರೀಮತಿ ರಾಧಾ ವೆಂಕಟೇಶ್, ಸಹಾಯಕ ರಾಜ್ಯ ಆಯುಕ್ತರು (ಗೈಡ್)ರವರು ಸಭೆಯಲ್ಲಿ ಓದಿದರು.

ನಂತರ ಶ್ರೀ ಕೆ. ಗಂಗಪ್ಪಗೌಡ, ರಾಜ್ಯ ಕಾರ್ಯದರ್ಶಿಗಳು 106ನೇ ರಾಜ್ಯ ಪರಿಷತ್ ಸಭೆಯ ಅಜೆಂಡಾ ಪ್ರಕಾರ ಸಭೆಯನ್ನು ಪ್ರಾರಂಭಿಸಿ ನಡೆಸಿದರು. ಶ್ರೀ ಎಂ.ಎಸ್. ಸತೀಶ್, ರಾಜ್ಯ ಜಂಟಿ ಕಾರ್ಯದರ್ಶಿ (ಸ್ಕೌಟ್) ಇವರು ನಿಧನ ಹೊಂದಿದ ಮಹನೀಯರುಗಳ ವಿವರಗಳನ್ನು ಓದಿದರು. ಒಂದು ನಿಮಿಷ ಮೌನ ಪ್ರಾರ್ಥನೆಯೊಂದಿಗೆ ಅವರುಗಳ ಕುಟುಂಬಕ್ಕೆ ಸಾಂತ್ವನ ತಿಳಿಸಲಾಯಿತು. ನಂತರ, ಅನುಮತಿ ಪಡೆದು ಸಭೆಗೆಗೈರು ಹಾಜರಾದವರ ವಿವರಗಳನ್ನು ಸಭೆಗೆ ಓದಿ ತಿಳಿಸಿದರು. ಮುಂದುವರೆದಂತೆ ಸಭೆಯ ಚರ್ಚಾಂಶಗಳನ್ನು ಸುದೀರ್ಘವಾಗಿ ಚರ್ಚಿಸಿ ಸಭೆಯ ಗೌರವಾನ್ವಿತ ಸದಸ್ಯರಿಂದ ಅನುಮೋದನೆ ಪಡೆಯಲಾಯಿತು.



ಬ್ರಾಂಜ್ ವೂಲ್ಫ್ ಅವಾರ್ಡ್ ವಿಜೇತರಾದ ಶ್ರೀ ಎಂ.ಎ. ಖಾಲಿದ್, ಅಪರ ಮುಖ್ಯ ರಾಷ್ಟ್ರೀಯ ಆಯುಕ್ತರು (ಸ್ಕೌಟ್) ಮತ್ತು ರಾಜ್ಯ ಆಯುಕ್ತರು (ಸ್ಕೌಟ್) ರವರನ್ನು ಶ್ರೀ ಪಿ.ಜಿ.ಆರ್. ಸಿಂಧ್ಯ, ರಾಜ್ಯ ಮುಖ್ಯ ಆಯುಕ್ತರು ಸನ್ಮಾನಿಸಿ ಗೌರವಿಸಿದರು. ಇದೇ ಸಂದರ್ಭದಲ್ಲಿ ಇಂಟರ್ ನ್ಯಾಷನಲ್ ಫ್ರೆಂಡ್‌ಶಿಪ್ ಅವಾರ್ಡ್ 2024 ವಿಜೇತರಾದ ಶ್ರೀ ಎ.ಎಸ್. ಮಧುಸೂದನ್, ಹೆಚ್ಚುವರಿ ಅಂತರರಾಷ್ಟ್ರೀಯ ಆಯುಕ್ತರು ಮತ್ತು ಜಿಲ್ಲಾ ಖಜಾಂಚಿ, ಬೆಂಗಳೂರು ದಕ್ಷಿಣ ಜಿಲ್ಲೆ ಇವರಿಗೂ ಅಭಿನಂದನೆಗಳನ್ನು ತಿಳಿಸಲಾಯಿತು.

ನಂತರ ಶ್ರೀ ಎಂ.ಎ. ಖಾಲಿದ್‌ರವರು ಮಾತನಾಡಿ "ಈ ಅವಾರ್ಡ್ ಕೇವಲ ಎಂ.ಎ. ಖಾಲಿದ್‌ರವರದಲ್ಲ ಇದು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ರಾಜ್ಯ ಸಂಸ್ಥೆಗೆ ಸಂದಿದ ಅವಾರ್ಡ್. ಏಕೆಂದರೆ, ಇದುರಾಜ್ಯ, ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಸಲ್ಲಿಸಿರುವ ಸೇವೆಗೆ ನೀಡುವಂತಹ ಅವಾರ್ಡ್‌ಎಂದು ತಿಳಿಸಿದರು. ನಂತರ ಸ್ಥಳೀಯ ಹಾಗೂ ಜಿಲ್ಲಾ ಹಂತದಲ್ಲಿ ನಿರ್ವಹಿಸಬೇಕಾದ ಕಾರ್ಯಗಳ ಕುರಿತು ಮಾತನಾಡುತ್ತಾ ರಜಾದಿನಗಳಲ್ಲಿ ಸಮವಸ್ತ್ರದೊಂದಿಗೆ ತಮ್ಮ ತಮ್ಮ ಸುತ್ತಮುತ್ತಲಿನ ಸಾರ್ವಜನಿಕರಿಗೆ ಧ್ವಜಚೀಟಿಗಳನ್ನು ನೀಡಿ ಹಣವನ್ನು ಸಂಗ್ರಹಿಸಬಹುದು, ಇದರಿಂದ ಹಣವು ಸಂಗ್ರಹವಾಗುತ್ತದೆ ಜೊತೆಗೆ ಸ್ಕೌಟಿಂಗ್ ಗೋಚರಗೊಳ್ಳುತ್ತದೆ" ಎಂದು ತಿಳಿಸಿದರು.

ನಂತರ ಶ್ರೀ ಸಿ.ಎಸ್. ರೆಡ್ಡಿ, ರಾಜ್ಯ ಆಯುಕ್ತರು (ಸ್ಕೌಟ್) ವಯಸ್ಕ ಸಂಪನ್ಮೂಲ, ಶ್ರೀಮತಿ ಗೀತಾ ನಟರಾಜ್, ರಾಜ್ಯ ಆಯುಕ್ತರು(ಗೈಡ್)ರವರುಗಳು ಸಭೆಯಲ್ಲಿ ಸ್ಕೌಟ್–ಗೈಡ್ ಚಳುವಳಿಯ ಅಭಿವೃದ್ಧಿಯ ಕುರಿತು ಮಾತನಾಡಿ ಮಾರ್ಗದರ್ಶನ ನೀಡಿದರು.



ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯ ಇವರು ಮಾತನಾಡಿ "ರಾಷ್ಟ್ರೀಯ ಸಂಸ್ಥೆಯವರು ಪಿಲಿಕುಳ ಕೇಂದ್ರವನ್ನು ಸೀ–ಸ್ಕೌಟ್ ಕೇಂದ್ರವಾಗಿ ಆಯ್ಕೆ ಮಾಡಲಾಗಿದ್ದು, ಇದು ಅಂತರರಾಷ್ಟ್ರೀಯ ತರಬೇತಿ ಕೇಂದ್ರ ಆಗುವುದರಲ್ಲಿ ಯಾವುದೇ ಸಂಶಯವಿಲ್ಲ. 2023–24ನೇ ಸಾಲಿನಲ್ಲಿ ಕರ್ನಾಟಕ ಸ್ಕೌಟ್ಸ್ ಮತ್ತು ಗೈಡ್ಸ್ ಮೊದಲನೇ ಸ್ಥಾನವನ್ನು ತಲುಪಿರುವುದು ಬಹಳ ಹೆಮ್ಮೆಯ ವಿಷಯ. ಆದರೆ ಪ್ರಸ್ತುತ 2024–25ನೇ ಸಾಲಿನಲ್ಲಿ ಕೇವಲ 30% ಗಣತಿ ತಲುಪಿದ್ದೇವೆ. ಆದ್ದರಿಂದ ಈ ಬಗ್ಗೆ ಯೋಚನೆ ಮಾಡಬೇಕಿದೆ. ಗ್ರಾಮ, ತಾಲ್ಲೂಕು, ಜಿಲ್ಲಾ ಪಂಚಾಯತ್ ವತಿಯಿಂದ ಪಡೆಯುವ ಅನುದಾನಕ್ಕೆ ಲೆಕ್ಕಪತ್ರಗಳನ್ನು ಸಲ್ಲಿಸಬೇಕು ಹಾಗೂ ಜಿಲ್ಲಾ, ಸ್ಥಳೀಯ ಸಂಸ್ಥೆಯ ಆಸ್ತಿಯನ್ನು ಕಾಪಾಡಿಕೊಳ್ಳಬೇಕು" ಎಂದು ತಿಳಿಸಿದರು. ಬ್ರಾಂಜ್ ವೂಲ್ಫ್ ಅವಾರ್ಡ್ ವಿಜೇತರಾದ ಶ್ರೀ ಎಂ.ಎ. ಖಾಲಿದ್ ಹಾಗೂ ಇಂಟರ್ ನ್ಯಾಷನಲ್ ಫ್ರೆಂಡ್‌ಶಿಪ್ ಅವಾರ್ಡ್–2024 ವಿಜೇತರಾದ ಶ್ರೀ ಎ.ಎಸ್. ಮಧುಸೂದನ್ ರವರಿಗೆ ಕರ್ನಾಟಕ ರಾಜ್ಯ ಸ್ಕೌಟ್ಸ್–ಗೈಡ್ಸ್ ಪರವಾಗಿ ಅಭಿನಂದನೆಗಳನ್ನು ತಿಳಿಸಿದರು.

ನಂತರ ಡಾ॥ ಗುಬ್ಬಿ ಗೂಡುರಮೇಶ್, ಸಹಾಯಕ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ ಇವರು ಮಾತನಾಡಿ "ರಾಜ್ಯ ಮಟ್ಟದ ಸಾಂಸ್ಕೃತಿಕ ಉತ್ಸವ ಶಿಬಿರದಲ್ಲಿ ಸುಮಾರು 1500 ಮಕ್ಕಳಿಗೆ ಸಮಾಜದಲ್ಲಿ ತಮ್ಮನ್ನು ತಾವು ಹೇಗೆ ರೂಪಿಸಿಕೊಳ್ಳಬೇಕು, ಬರುವ ತೊಂದರೆಗಳೇನು ಹಾಗೂ ಇತರೆ ವಿಷಯಗಳ ಕುರಿತು ಮಾತನಾಡುವ ಜವಾಬ್ದಾರಿಯನ್ನು ನನಗೆ ನೀಡಿದ್ದರು. ನಾನು ಒಬ್ಬ ಸ್ಕೌಟ್ ಆಗಿ, ಸ್ಕೌಟಿಂಗ್ ಮೌಲ್ಯಗಳನ್ನು ಅರಿತವನಾಗಿದ್ದು, ನಮ್ಮ ಕರ್ತವ್ಯದ ಬಳಿಕವೂ ಇದರಲ್ಲಿ ತೊಡಗಿಸಿಕೊಂಡರೆ ಮಾತ್ರ ನಾವು ಋಣ ತೀರಿಸಲು ಸಾಧ್ಯ' ಎಂದು ಹೇಳಿದರು. ಈ ಸ್ಕೌಟ್–ಗೈಡ್ ಅಭಿವೃದ್ಧಿಯ ಆಶಯವನ್ನು ಹೊಂದಿರುವ ತಾವು ನಮಗೆ ಮಾರ್ಗದರ್ಶನ ನೀಡಿ, ನಾವು ಅದನ್ನು ದುಪ್ಪಟ್ಟು ಮಾಡುತ್ತೇವೆ ಎಂದು ಮಾನ್ಯ ರಾಜ್ಯ ಮುಖ್ಯ ಆಯುಕ್ತರಿಗೆ ತಿಳಿಸಿದರು.

ಶ್ರೀ ಕೆ. ಸುಕುಮಾರ್, ಎಲ್.ಟಿ (ಸ್ಕೌ), ಶ್ರೀ ಗುರುಮೂರ್ತಿ ನಾಯಕಾಪು, ಎಲ್.ಟಿ(ಸ್ಕೌ) ಹಾಗೂ ಶ್ರೀಮತಿ ಫೆಲ್ಸಿ ಝೀನಾ ಫೆರ್ನಾಂಡಿಸ್, ಎಲ್.ಟಿ(ಗೈ)ರವರುಗಳನ್ನು ವಿಧಿ–ವಿಧಾನಗಳ ಮೂಲಕ ಕರ್ನಾಟಕ ಸ್ಕೌಟ್ಸ್ ಮತ್ತು ಗೈಡ್ಸ್‌ಗೆ ಆಹ್ವಾನಿಸುವ ಕಾರ್ಯಕ್ರಮವನ್ನು ನೆರವೇರಿಸಲಾಯಿತು. ಶ್ರೀ ಸಿ.ಎಸ್. ರೆಡ್ಡಿ, ರಾಜ್ಯ ಆಯುಕ್ತರು (ಸ್ಕೌಟ್) ವಯಸ್ಕ ಸಂಪನ್ಮೂಲ ಇವರು ಮೂವರು ನಾಯಕ ತರಬೇತುದಾರರುಗಳಿಗೆ ಸ್ಕೌಟ್–ಗೈಡ್ ಪ್ರತಿಜ್ಞೆಯನ್ನು ಭೋದಿಸಿದರು ಹಾಗೂ ಸದರಿಯವರುಗಳಿಗೆ ಪ್ರಮಾಣ ಪತ್ರಗಳನ್ನು ನೀಡಿ ಕರ್ನಾಟಕ ರಾಜ್ಯದ ಸ್ಕೌಟ್–ಗೈಡ್‌ಗೆ ಆಹ್ವಾನಿಸಲಾಯಿತು. ಇದೇ ಸಂದರ್ಭದಲ್ಲಿ ರಾಜ್ಯ ಮಟ್ಟದ ಮತ್ತು ವಿಭಾಗೀಯ ಮಟ್ಟದ ಪಾರಿತೋಷಕ ಮತ್ತು ಪ್ರಶಸ್ತಿ ಪತ್ರಗಳನ್ನು ವಿಜೇತ ಜಿಲ್ಲಾ ಸಂಸ್ಥೆಗಳಿಗೆ ವಿತರಿಸಲಾಯಿತು.

ಅಧ್ಯಕ್ಷತೆಯನ್ನು ವಹಿಸಿಕೊಂಡಿದ್ದ ಶ್ರೀಮತಿ ಆಶಾ ಪ್ರಸನ್ನಕುಮಾರ್, ಉಪಾಧ್ಯಕ್ಷರು ಮಾತನಾಡಿ, 'ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯರವರು ಬಂದ ಮೇಲೆ ರಾಜ್ಯ ಸಂಸ್ಥೆಯಿಂದ ದಳ ಹಂತದವರೆಗೂ ತಲುಪಿ ಸಲಹೆ ಮತ್ತು ಮಾರ್ಗದರ್ಶನವನ್ನು ನೀಡುತ್ತಿದ್ದಾರೆ. ಅಲ್ಲದೇ ಅವರ ವ್ಯಕ್ತಿತ್ವದಿಂದ ಎಲ್ಲಾ ಸರ್ಕಾರಿ ಇಲಾಖೆಗಳಲ್ಲಿಯೂ ಗುರುತಿಸಿಕೊಂಡಿದ್ದಾರೆ ಹಾಗೂ ಸ್ಕೌಟ್ಸ್–ಗೈಡ್ಸ್ ಸಂಸ್ಥೆಯನ್ನೂ ತಲುಪಿಸಿದ್ದಾರೆ" ಎಂದು ತಿಳಿಸಿದರು.



2023–24ನೇ ಸಾಲಿನಲ್ಲಿ ಭಾರತದಲ್ಲಿಯೇ ಕರ್ನಾಟಕ ರಾಜ್ಯ ಪ್ರಥಮ ಸ್ಥಾನ ಪಡೆದಿರುವ ಬಗ್ಗೆ ರಾಜ್ಯ ಮುಖ್ಯ ಆಯುಕ್ತರು ಹೇಳಿದರು, ಇದು ನಮಗೆ ಹೆಮ್ಮೆಯ ವಿಷಯ. ಮುಂದಿನ ದಿನಗಳಲ್ಲಿಯೂ ಈ ಸ್ಥಾನವನ್ನು ಉಳಿಸಿಕೊಳ್ಳಲು ನಾವೆಲ್ಲರೂ ಕ್ರಮವಹಿಸೋಣ ಎಂದರು. ಈವರೆಗೆ 2024–25ನೇ ಸಾಲಿನ ಗಣತಿ ಕೇವಲ 30% ತಲುಪಿದೆ. ಆದರೆ ನಾವು 10 ಲಕ್ಷಗಣತಿಯನ್ನು ಹೊಂದುವಲ್ಲಿ ನಾವೆಲ್ಲರೂ ಕ್ರಮಕೈಗೊಳ್ಳೋಣ ಎಂದು ಹೇಳಿ, ಕರ್ನಾಟಕ ಸ್ಕೌಟ್–ಗೈಡ್ ಸಂಸ್ಥೆಗೆ ಹೊಸದಾಗಿ ಸೇರಿದ 3 ನಾಯಕ ತರಬೇತುದಾರರುಗಳನ್ನು ಮತ್ತೊಮ್ಮೆ ಸ್ವಾಗತಿಸಿದರು. ರಾಷ್ಟ್ರಗೀತೆಯೊಂದಿಗೆ ಸಭೆಯು ಮುಕ್ತಾಯಗೊಂಡಿತು.

## ರಾಜ್ಯ ಮಟ್ಟದ ಪಾರಿತೋಷಕ ಪ್ರಶಸ್ತಿಪಡೆದ ಜಿಲ್ಲೆಗಳ ವಿವರಗಳು



ಪ್ರಥಮ ಸ್ಥಾನ - ಬೆಳಗಾವಿ
ಅಬ್ದುಲ್ ಗಫಾರ್ ಪರ್ಯಾಯ ಫಲಕ



ದ್ವಿತೀಯ ಸ್ಥಾನ - ದಕ್ಷಿಣ ಕನ್ನಡ
ಜಸ್ಟೀಸ್ ಶಂಕರನಾರಾಯಣರಾವ್ ಪರ್ಯಾಯ ಫಲಕ



ತೃತೀಯ ಸ್ಥಾನ - ಬೆಂಗಳೂರು ದಕ್ಷಿಣ
ಮೇಜರ್ ವೈ.ವಿ.ಕೆ. ಮೂರ್ತಿ ಪರ್ಯಾಯ ಫಲಕ

# ವಿಭಾಗ ಮಟ್ಟದ ಪರ್ಯಾಯ ಫಲಕ – ಪ್ರಶಸ್ತಿಗಳು

## ಬೆಂಗಳೂರು ವಿಭಾಗ


ಪ್ರಥಮ ಸ್ಥಾನ - ದಾವಣಗೆರೆ
ವಿ.ಪಿ. ದೀನದಯಾಳು ನಾಯ್ಡು ಪರ್ಯಾಯ ಫಲಕ


ದ್ವಿತೀಯ ಸ್ಥಾನ - ಚಿತ್ರದುರ್ಗ


ತೃತೀಯ ಸ್ಥಾನ - ಬೆಂಗಳೂರು ಉತ್ತರ

## ಮೈಸೂರು ವಿಭಾಗ


ಪ್ರಥಮ ಸ್ಥಾನ - ಹಾಸನ
ಜೆ.ಬಿ. ಮಲ್ಲಾರಾಧ್ಯ ಪರ್ಯಾಯ ಫಲಕ


ದ್ವಿತೀಯ ಸ್ಥಾನ - ಉಡುಪಿ


ತೃತೀಯ ಸ್ಥಾನ - ಮೈಸೂರು

## ಬೆಳಗಾವಿ ವಿಭಾಗ


ಪ್ರಥಮ ಸ್ಥಾನ - ಧಾರವಾಡ
ಕೊಂಡಜ್ಜಿ ಬಸಪ್ಪ ಪರ್ಯಾಯ ಫಲಕ


ದ್ವಿತೀಯ ಸ್ಥಾನ - ವಿಜಯಪುರ


ತೃತೀಯ ಸ್ಥಾನ - ಬಾಗಲಕೋಟೆ

## ಕಲಬುರಗಿ ವಿಭಾಗ


ಪ್ರಥಮ ಸ್ಥಾನ - ಬೀದರ್
ಪ್ರೊ. ಪಿ. ಶಿವಶಂಕರ್ ಪರ್ಯಾಯ ಫಲಕ


ದ್ವಿತೀಯ ಸ್ಥಾನ - ರಾಯಚೂರು


ತೃತೀಯ ಸ್ಥಾನ - ಬಳ್ಳಾರಿ



## ರಾಜ್ಯ ಮಟ್ಟದ ಗೀತಗಾಯನ ಸ್ಪರ್ಧೆ

ರಾಜ್ಯ ಮತ್ತು ಜಿಲ್ಲಾ ಸಂಸ್ಥೆ, ತುಮಕೂರು ಇವರ ಸಹಯೋಗದೊಂದಿಗೆ ರಾಜ್ಯ ಮಟ್ಟದ ಗೀತಗಾಯನ ಸ್ಪರ್ಧೆಯನ್ನು ಡಿಸೆಂಬರ್ 01 ರಂದು ಸೆಂಟ್ ಮೇರಿಸ್ ಕಾನ್ವೆಂಟ್, ತುಮಕೂರು ಇಲ್ಲಿ ಆಯೋಜಿಸಲಾಯಿತು. ಬೆಳಗ್ಗೆ 8 ಗಂಟೆಗೆ ಕಬ್ಸ್, ಬುಲ್‌ಬುಲ್ಸ್, ಸ್ಕೌಟ್ಸ್, ಗೈಡ್ಸ್, ದಳನಾಯಕರುಗಳ ನೊಂದಾವಣಿ ಕಾರ್ಯಕ್ರಮ ನೆರವೇರಿತು. ಉಪಹಾರ ಮುಗಿದ ನಂತರ ಧ್ವಜಾರೋಹಣವನ್ನು ನೆರವೇರಿಸಲಾಯಿತು. 10 ಗಂಟೆಗೆ ಉದ್ಘಾಟನಾ ಸಮಾರಂಭದಲ್ಲಿ ಶ್ರೀ ಮೋಹನ್, ಉಪನಿರ್ದೇಶಕರು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ತುಮಕೂರು ಇವರು ದೀಪ ಬೆಳಗಿಸಿ ಮಕ್ಕಳಿಗೆ ಶುಭವನ್ನು ಹಾರೈಯಿಸಿದರು.

19 ಜಿಲ್ಲೆಗಳಿಂದ ವಿಭಾಗವಾರು ವಿಜೇತರಾದ ಪ್ರಥಮ ಮತ್ತು ದ್ವಿತೀಯ ಸ್ಥಾನವನ್ನು ಪಡೆದಿರುವ ಕಬ್ಸ್, ಬುಲ್‌ಬುಲ್ಸ್, ಸ್ಕೌಟ್ಸ್, ಗೈಡ್ಸ್, ರೋವರ್ಸ್, ರೇಂಜರ್ಸ್ ಒಟ್ಟು 48 ತಂಡಗಳು ಅಂದರೆ 320 ಜನ ಮಕ್ಕಳು, 60 ದಳನಾಯಕರು ಮತ್ತು ಮಕ್ಕಳನ್ನು ಕರೆತಂದ ಸ್ಕೌಟರ್ಸ್, ಗೈಡರ್ಸ್, ಪೋಷಕರುಗಳು ಭಾಗವಹಿಸಿದ್ದರು. 14 ಜನ ತೀರ್ಪುಗಾರರು ತೀರ್ಪನ್ನು ನೀಡಿದರು. ಮಧ್ಯಾಹ್ನ 3.00 ಗಂಟೆಗೆ ಸಮಾರೋಪ ಸಮಾರಂಭದಲ್ಲಿ ಶ್ರೀಮತಿ ಆಶಾ ಪ್ರಸನ್ನಕುಮಾರ್, ಜಿಲ್ಲಾ ಮುಖ್ಯ ಆಯುಕ್ತರು, ತುಮಕೂರು ಇವರ ಅಧ್ಯಕ್ಷತೆಯಲ್ಲಿ ನೆರವೇರಿತು. ಶ್ರೀಮತಿ ಅರ್ಪಿತ ಕೊಂಡಜ್ಜಿ, ಕೇಂದ್ರ ಸ್ಥಾನಿಕ ಆಯುಕ್ತರು (ಗೈಡ್ಸ್) ಇವರು ಮಕ್ಕಳನ್ನು ಉದ್ದೇಶಿಸಿ ಮಾತನಾಡಿ ಶುಭವನ್ನು ಹಾರೈಸಿದರು.

ಶ್ರೀ ಪಿ.ಜಿ.ಆರ್. ಸಿಂಧ್ಯ, ರಾಜ್ಯ ಮುಖ್ಯ ಆಯುಕ್ತರು ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದರು. ತುಮಕೂರು ಜಿಲ್ಲಾ ಸಂಸ್ಥೆಯ ಪದಾಧಿಕಾರಿಗಳಾದ ಶ್ರೀಮತಿ ಸುಭಾಷಿಣಿ, ಶ್ರೀ ಸುರೇಂದ್ರ ಷಾ ಇತರರು ಭಾಗವಹಿಸಿದ್ದರು.





## ಬೆಂಗಳೂರು ವಿಭಾಗದ ಮಟ್ಟದ ಗೀತಗಾಯನ ಸ್ಪರ್ಧೆ

ರಾಜ್ಯ ಹಾಗೂ ಜಿಲ್ಲಾ ಸಂಸ್ಥೆ ಬೆಂಗಳೂರು ದಕ್ಷಿಣ ಇವರ ಸಹಯೋಗದಲ್ಲಿ ನವೆಂಬರ್ 19 ರಂದು ಡಾ॥ ಅನಿಬೆಸೆಂಟ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ, ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇಲ್ಲಿ ಬೆಂಗಳೂರು ವಿಭಾಗೀಯ ಮಟ್ಟದ ದೇಶಭಕ್ತಿ ಗೀತೆ ಗಾಯನ ಸ್ಪರ್ಧೆ ಆಯೋಜಿಸಲಾಗಿತ್ತು. ಕಾರ್ಯಕ್ರಮದಲ್ಲಿ ಬೆಂಗಳೂರು ವಿಭಾಗದ 12 ಜಿಲ್ಲೆಗಳಿಂದ 880 ಕಬ್ಸ್–ಬುಲ್ಬುಲ್ಸ್, ಸ್ಕೌಟ್ಸ್–ಗೈಡ್ಸ್, ರೋವರ್ಸ್–ರೇಂಜರ್ಸ್ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಕಾರ್ಯಕ್ರಮದ ಸಮಾರೋಪ ಸಮಾರಂಭದಲ್ಲಿ ಶ್ರೀ ಎಂ.ಕೆ. ಖಾನ್, ಜಿಲ್ಲಾ ಮುಖ್ಯ ಆಯುಕ್ತರು ಬೆಂಗಳೂರು ದಕ್ಷಿಣ ಇವರು ಅಧ್ಯಕ್ಷತೆಯನ್ನು ವಹಿಸಿಕೊಂಡಿದ್ದರು. ಶ್ರೀ ಟಿ.ಕೆ. ನಾರಾಯಣಸ್ವಾಮಿ, ಜಿಲ್ಲಾ ತರಬೇತಿ ಆಯುಕ್ತರು, ಶ್ರೀ ಎಂ.ಎಸ್. ಸತೀಶ್, ರಾಜ್ಯ ಜಂಟಿ ಕಾರ್ಯದರ್ಶಿ ಮತ್ತು ಜಿಲ್ಲಾ ಕಾರ್ಯದರ್ಶಿ, ಬೆಂಗಳೂರು ದಕ್ಷಿಣ ಜಿಲ್ಲೆ, ಶ್ರೀಮತಿ ಕುಮಾರಿ ಹೊನ್ನಮ್ಮ, ಪರೀಕ್ಷಾ ವಿಭಾಗದ ಮೇಲ್ವಿಚಾರಕರು ಹಾಗೂ ಶ್ರೀ ಚಂದ್ರು ಪಿ., ಎ.ಎಸ್.ಒ.ಸಿ(ಸ್ಕೌ) ರವರುಗಳು ಉಪಸ್ಥಿತರಿದ್ದರು.





## ಬೆಳಗಾವಿ ವಿಭಾಗ ಮಟ್ಟದ ದೇಶಭಕ್ತಿ ಗೀತೆ ಗೀತಗಾಯನ ಸ್ಪರ್ಧೆ

ನವೆಂಬರ್ 20 ರಂದು ರಾಜ್ಯ ಹಾಗೂ ಜಿಲ್ಲಾ ಸಂಸ್ಥೆ ಧಾರವಾಡ ಇವರುಗಳ ಸಹಯೋಗದಲ್ಲಿ ಬೆಳಗಾವಿ ವಿಭಾಗದ 8 ಜಿಲ್ಲೆಗಳ 470 ಕಬ್ಸ್–ಬುಲ್‌ಬುಲ್ಸ್, ಸ್ಕೌಟ್–ಗೈಡ್ಸ್, ರೋವರ್–ರೇಂಜರ್ಸ್‌ಗಳಿಗೆ ಜಿಲ್ಲಾ ಕಚೇರಿಯಲ್ಲಿ ಬೆಳಗಾವಿ ವಿಭಾಗ ಮಟ್ಟದ ದೇಶಭಕ್ತಿ ಗೀತೆಗೀತ ಗಾಯನ ಸ್ಪರ್ಧೆಯನ್ನು ಆಯೋಜಿಸಲಾಯಿತು. ಸದರಿ ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ವಿ.ವಿ. ಕಟ್ಟಿ, ಉಪಾಧ್ಯಕ್ಷರು ಜಿಲ್ಲಾ ಸಂಸ್ಥೆ ಧಾರವಾಡ, ಹಾಗೂ ಶ್ರೀ ಶ್ರೀಶೈಲಕರಿ ಕಟ್ಟಿ ಜಿಲ್ಲಾ ಮುಖ್ಯ ಆಯುಕ್ತರು ಧಾರವಾಡರವರು ದೀಪ ಬೆಳಗುವ ಮೂಲಕ ನೆರವೆರಿಸಿದರು. ಕಾರ್ಯಕ್ರಮದಲ್ಲಿ ಶ್ರೀ ಬಸವರಾಜ ಕಡಕೋಳ ಜಿಲ್ಲಾ ಖಜಾಂಚಿಗಳು, ಶ್ರೀ ಡಿ.ಡಿ. ಮಾಳಗಿ ಜಿಲ್ಲಾ ಆಯುಕ್ತರು (ರೋ), ಶ್ರೀ ಎಸ್.ಐ. ನೇಕಾರ, ಜಿಲ್ಲಾ ಆಯುಕ್ತರು (ಸ್ಕೌ), ಶ್ರೀ ಜಿ.ಆರ್. ಕಾಂಬಳೆ ಸಹಾಯಕ ಆಯುಕ್ತರು ರೋವಸ್ ಹಾಗೂ ಜಿಲ್ಲಾ ಸಂಸ್ಥೆಯ ಪದಾಧಿಕಾರಿಗಳು ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ಜಿಲ್ಲಾ ಕಾರ್ಯದರ್ಶಿ ಶ್ರೀ ಎಸ್.ಎನ್. ಸಾವಳಗಿ ನಿರೂಪಿಸಿದರು, ಶ್ರೀ ಜಿ.ಎ. ಬೆಳಹಾರ ಡಿ.ಓ.ಟಿ. ಧಾರವಾಡ ವಂದಿಸಿದರು.

ನಂತರ ಸಂಜೆ ನಡೆದ ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಶ್ರೀ ಗಜಾನನ ಮನ್ನಿಕೇರಿ ಉಪಾಧ್ಯಕ್ಷರು ಭಾರತ್ ಸ್ಕೌಟ್ಸ್–ಗೈಡ್ಸ್ ಕರ್ನಾಟಕ, ಸಾ.ಶಿ. ಇಲಾಖೆಯ ಉಪನಿರ್ದೇಶಕರಾದ ಶ್ರೀ ಎಸ್.ಎಸ್. ಕೆಳದಿಮಠ ಹಾಗೂ ಜಿಲ್ಲಾ ಸಂಸ್ಥೆಯ ಎಲ್ಲಾ ಪದಾಧಿಕಾರಿಗಳು ಉಪಸ್ಥಿತಿರಿದ್ದರು.





## ಕಲಬುರ್ಗಿ ವಿಭಾಗದಗೀತಗಾಯನ ಸ್ಪರ್ಧೆ

ನವೆಂಬರ್ 21 ರಂದು ಶ್ರೀ ಗುರು ವಿದ್ಯಾಪೀಠ ಖಣದಾಳದಲ್ಲಿ ವಿಭಾಗ ಮಟ್ಟದ ದೇಶಭಕ್ತಿ ಗೀತಗಾಯನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಶ್ರೀಮತಿ ಮಲ್ಲೇಶ್ವರಿ ಜುಜಾರೆ ಕಲ್ಯಾಣ ಕರ್ನಾಟಕ ಉಸ್ತುವಾರಿ ಶ್ರೀ ಎಸ್.ಪಿ. ಸುಳ್ಳದ್, ಜಿಲ್ಲಾ ಆಯುಕ್ತರು (ಸ್ಕೌಟ್), ಶ್ರೀಮತಿ ನಾಗರತ್ನ ಬಿದಿಗ್ಗಾವಿ, ಜಿಲ್ಲಾ ಆಯುಕ್ತರು (ಗೈಡ್ಸ್), ಶ್ರೀ ಚನ್ನವೀರಯ್ಯಸ್ವಾಮಿ, ಜಿಲ್ಲಾ ಕಾರ್ಯದರ್ಶಿಗಳು, ಶ್ರೀ ಗುರು ವಿದ್ಯಾ ಪೀಠ ಖಣದಾಳ ಶಿಕ್ಷಣ ಸಂಸ್ಥೆ ಕಾರ್ಯದರ್ಶಿಗಳಾದ ಶ್ರೀ ಶಿವರಾಜ್ ದಿಗ್ಗಾವಿ, ಶಾಲೆಯ ಪ್ರಾಂಶುಪಾಲರು ಒಳಗೊಂಡು ಕಾರ್ಯಕ್ರಮ ಉದ್ಘಾಟಿಸಿದರು. ಈ ಕಾರ್ಯಕ್ರಮದಲ್ಲಿ ಕಲ್ಯಾಣ ಕರ್ನಾಟಕ ವಿಭಾಗಕ್ಕೆ ಒಳಪಟ್ಟ ಏಳು ಜಿಲ್ಲೆಗಳ ಕಬ್ಸ್–ಬುಲ್‌ಬುಲ್ಸ್, ಸ್ಕೌಟ್ಸ್–ಗೈಡ್ಸ್, ರೋವರ್ಸ್ ರೇಂಜರ್ಸ್, ದಳನಾಯಕ, ದಳನಾಯಕಿಯರು ಭಾಗವಹಿಸಿದ್ದರು.









### ಅಭಿನಂದನೆಗಳು

ಬೀದರ್ ಜಿಲ್ಲೆ, ಬಾಲ್ಕಿ, ಹಿರೇಮಠ ಸಂಸ್ಥಾನದ ವತಿಯಿಂದ 2024ರ 'ಡಾ. ಚನ್ನಬಸವ ಪಟ್ಟದ್ದೇವರ ಕಾಯಕ ಪ್ರಶಸ್ತಿ'ಗೆ **ಡಾ. ಗುರಮ್ಮ ಸಿದಾರಡ್ಡಿ** ಸಹಾಯಕ ರಾಜ್ಯ ಆಯುಕ್ತರು(ಗೈ) ಹಾಗು ಜಿಲ್ಲಾ ಮುಖ್ಯ ಆಯುಕ್ತರು ಬೀದರ ಅವರನ್ನು ಆಯ್ಕೆ ಮಾಡಿ ಚನ್ನಬಸವಾಶ್ರಮ ಪರಿಸರದಲ್ಲಿ ಡಿಸೆಂಬರ್ 22 ರಂದು ನಡೆದ ಶತಾಯಷಿ ಡಾ. ಚನ್ನಬಸವ ಪಟ್ಟದ್ದೇವರ 135ನೆಯ ಜಯಂತ್ಯೋತ್ಸವ ಸಮಾರಂಭದಲ್ಲಿ ಈ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಶ್ರೀಯುತರು ಬೀದರ ಜಿಲ್ಲೆಯ ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ, ಸಾಹಿತ್ಯಕ ಮುಂತಾದ ಕಾರ್ಯಗಳಲ್ಲಿ ಮತ್ತು ಕಲ್ಯಾಣ ಕರ್ನಾಟಕ ಭಾಗದ ಸರ್ವಾಂಗೀಣ ಅಭಿವೃದ್ಧಿಗೆ ಪೂರಕವಾಗಿರುವ ಎಲ್ಲ ಕಾರ್ಯಗಳಲ್ಲಿ ತಮ್ಮನ್ನು ತಾವು ಸಮರ್ಪಿಸಿಕೊಂಡು ದುಡಿಯುತ್ತಿದ್ದಾರೆ. ಅನೇಕ ಸಂಘ–ಸಂಸ್ಥೆಗಳನ್ನು ಹುಟ್ಟುಹಾಕಿ, ಆ ಮೂಲಕ ಸಾಮಾಜಿಕ ಸೇವೆಗೆ ಆದ್ಯತೆ ನೀಡಿದ್ದಾರೆ. ನೂರಾರು ಸಂಸ್ಥೆ–ಸಂಘಟನೆಗಳ ಜವಾಬ್ದಾರಿ ವಹಿಸಿಕೊಂಡು ಜನಪರ ಕಾರ್ಯಮಾಡುತ್ತಿದ್ದಾರೆ.



ವಿಶೇಷವಾಗಿ ಮಹಿಳಾ ಸಬಲೀಕರಣ, ಶಿಕ್ಷಣ, ಗ್ರಾಮೀಣ ಪ್ರದೇಶ ಅಭಿವೃದ್ಧಿ, ನ್ಯಾಯಾಂಗದ ಸೇವೆ, ಕುಟುಂಬ ಸಂಸ್ಕೃತಿ, ಕೈಗಾರಿಕೆ. ರಾಷ್ಟ್ರೀಯ ಏಕತೆ, ಅಂಗವಿಕಲರ ಪುನರ್‌ವಸತಿ, ಸಾಹಿತ್ಯ, ಧರ್ಮ, ಕಲೆ, ಗ್ರಾಹಕರ ಪರಿಹಾರ ಫೋರಂ, ಅಂ–ಧತ್ವ ನಿವಾರಣೆ, ಸಹಕಾರ ಸಂಘಗಳು, ಕಾರ್ಮಿಕರ ಸೇವೆಯ ಜೊತೆಗೆ ಭಾರತ್ ಸೌಟ್ಸ್ ಮತ್ತು ಗೈಡ್ಸ್ ಮುಂತಾದ ಕ್ಷೇತ್ರಗಳಲ್ಲಿ ಇವರು ಸಲ್ಲಿಸಿರುವ ಸೇವೆ ಅನುಪಮವಾಗಿದೆ. ಇವರಿಗೆ ರಾಜ್ಯಸಂಸ್ಥೆ ಪರವಾಗಿ ಅಭಿನಂದನೆಗಳು

– ರಾಜ್ಯ ಕಾರ್ಯದರ್ಶಿ

# ಸ್ಕೌಟ್ಸ್-ಗೈಡ್ಸ್, ರೋವರ್ಸ್ ಮತ್ತು ರೇಂಜರ್ಸ್‌ಗಳ ರಾಜ್ಯ ಮಟ್ಟದ ಸಾಂಸ್ಕೃತಿಕ ಉತ್ಸವ



ದಕ್ಷಿಣ ಕನ್ನಡ ಜಿಲ್ಲಾ ಸಂಸ್ಥೆ, ಮೂಡುಬಿದ್ರೆ ಸ್ಥಳೀಯ ಸಂಸ್ಥೆ ಹಾಗೂ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ ಮೂಡುಬಿದ್ರೆ ಇದರ ಸಹಭಾಗಿತ್ವದಲ್ಲಿ 30ನೇ ವರ್ಷದ ಆಳ್ವಾಸ್, ವಿರಾಸತ್ ಸಂದರ್ಭದಲ್ಲಿ ಡಿಸೆಂಬರ್ 10 ರಿಂದ 15 ರವರೆಗೆ ರಾಜ್ಯಮಟ್ಟದ ಸ್ಕೌಟ್ಸ್-ಗೈಡ್ಸ್, ರೋವರ್ಸ್-ರೇಂಜರ್ಸ್ ಸಾಂಸ್ಕೃತಿಕ ಉತ್ಸವವು ನಡೆಯಿತು. ಈ ಉತ್ಸವದಲ್ಲಿ 1500 ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಡಿಸೆಂಬರ್ 10 ರಂದು ಬೆಳಗ್ಗೆ ಉದ್ಘಾಟನಾ ಸಮಾರಂಭವು ಶ್ರೀ ಪಿ.ಜಿ.ಆರ್. ಸಿಂಧ್ಯಾ, ರಾಜ್ಯ ಮುಖ್ಯ ಆಯುಕ್ತರು ಇವರ ಅಧ್ಯಕ್ಷತೆಯಲ್ಲಿ, ಡಾ. ಎಂ. ಮೋಹನ್ ಆಳ್ವ, ಅಧ್ಯಕ್ಷರು ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ ಹಾಗೂ ಜಿಲ್ಲಾ ಮುಖ್ಯ ಆಯುಕ್ತರು, ದಕ್ಷಿಣ ಕನ್ನಡ ಜಿಲ್ಲೆ ಇವರ ಉಪಸ್ಥಿತಿಯಲ್ಲಿ ಜರುಗಿತು. ಶಿಬಿರದಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳನ್ನು ನಾಲ್ಕು ತಂಡಗಳಾಗಿ ವಿಂಗಡಿಸಲಾಯಿತು. ಅದೇ ದಿನ ಬೆಳಗ್ಗೆ 10 ರಿಂದ ಮಧ್ಯಾಹ್ನ 01 ಗಂಟೆಯವರೆಗೆ ವಿವಿಧ ಮೇಳಗಳ ವೀಕ್ಷಣೆಗೆ ವಿದ್ಯಾರ್ಥಿಗಳಿಗೆ ಅವಕಾಶವನ್ನು ನೀಡಲಾಯಿತು. ಮಧ್ಯಾಹ್ನದ ಭೋಜನದ ನಂತರ ಸಾಲಿಗ್ರಾಮ ಮಕ್ಕಳ ಮೇಳ, ಕೂಟ ಇವರಿಂದ ಬಡಗುತಿಟ್ಟಿನ ಮಕ್ಕಳ ಯಕ್ಷಗಾನ ನಡೆಯಿತು. ನಂತರ ಆಳ್ವಾಸ್ ವಿರಾಸತ್ 2024ರ ಉದ್ಘಾಟನೆಯ ಪ್ರಯುಕ್ತ ನಡೆದ ಸಾಂಸ್ಕೃತಿಕ ಮೆರವಣಿಗೆಯನ್ನು ವೀಕ್ಷಿಸಲು ವಿದ್ಯಾರ್ಥಿಗಳನ್ನು ಶ್ರೀಮತಿ ವನಜಾಕ್ಷಿ ಕೆ. ಶ್ರೀ ಪತಿಭಟ್ ವೇದಿಕೆಗೆ ಕರೆದೊಯ್ಯಲಾಯಿತು.

ಡಿಸೆಂಬರ್ 11 ರಂದು ಬೆಳಗ್ಗೆ ಯೋಗ ಪ್ರಾಣಾಯಾಮದಿಂದ ಪ್ರಾರಂಭಗೊಂಡು ಉಪಹಾರವನ್ನು ಸೇವಿಸಿದ ನಂತರ ಒಂದನೇ ತಂಡ ಪಿಲಿಕುಳ ವೀಕ್ಷಣೆಗಾಗಿ ತೆರಳಿತು. ಬೆಳಗ್ಗೆ 9 ರಿಂದ 10 ಗಂಟೆಯ ತನಕ ಡಾ. ಎ. ಮೋಹನ್ ಆಳ್ವಾ, ಜಿಲ್ಲಾ ಮುಖ್ಯ ಆಯುಕ್ತರು, ದಕ್ಷಿಣ ಕನ್ನಡ ಜಿಲ್ಲಾ ಸಂಸ್ಥೆ ಇವರಿಂದ ಉಪನ್ಯಾಸ ಕಾರ್ಯಕ್ರಮವು ನಡೆಯಿತು. ತದನಂತರ ಮೂರು ತಂಡಗಳಿಗೆ ಕ್ರಮವಾಗಿ ಶೋಭಾವನ, ಸಾವಿರ ಕಂಬ ಬಸದಿ ವೀಕ್ಷಣೆ, ಮೂಡುಬಿದ್ರೆ ಸ್ವಚ್ಛತಾ ಅಭಿಯಾನ ಹಾಗೂ ಸಾಹಸಮಯ ಚಟುವಟಿಕೆಗಳಿಗೆ ಕರೆದೊಯ್ಯಲಾಯಿತು. ಮಧ್ಯಾಹ್ನ 2 ಗಂಟೆಗೆ ಕುದ್ರೋಳಿ ಗಣೇಶ್ ಮತ್ತು ಬಳಗದವರಿಂದ ವಿಸ್ಮಯ ಜಾದೂ ಪ್ರದರ್ಶನ ನಡೆಯಿತು. ನಂತರ ಆಳ್ವಾಸ್ ವಿರಾಸತ್ ಸಂಸ್ಕೃತಿಕ ಕಾರ್ಯಕ್ರಮದ ವೀಕ್ಷಣೆಗಾಗಿ ವಿದ್ಯಾರ್ಥಿಗಳನ್ನು ಕರೆದೊಯ್ಯಲಾಯಿತು.

ಡಿಸೆಂಬರ್ 12 ರಂದು ಬೆಳಗ್ಗೆ ಯೋಗ ಪ್ರಾಣಾಯಾಮದಿಂದ ಪ್ರಾರಂಭಗೊಂಡು ಉಪಹಾರವನ್ನು ಸೇವಿಸಿದ ನಂತರ ಎರಡನೇ ತಂಡ ಪಿಲಿಕುಳ ವೀಕ್ಷಣೆಗಾಗಿ ತೆರಳಿತು. ಬೆಳಗ್ಗೆ 9 ರಿಂದ 10 ಗಂಟೆಯ ತನಕ ಶ್ರೀ ರಾಜೇಂದ್ರಭಟ್, ಶಿಕ್ಷಕರು ಮತ್ತು ರಾಷ್ಟ್ರಮಟ್ಟದ ವಿಕಸನ ತರಬೇತುದಾರರು ಇವರಿಂದ ಉಪನ್ಯಾಸ ಕಾರ್ಯಕ್ರಮವು ನಡೆಯಿತು. ತದನಂತರ ಮೂರು ತಂಡಗಳಿಗೆ ಕ್ರಮವಾಗಿ ಶೋಭಾವನ, ಸಾವಿರ ಕಂಬ ಬಸದಿ ವೀಕ್ಷಣೆ, ಮೂಡುಬಿದ್ರೆ ಸ್ವಚ್ಛತಾ ಅಭಿಯಾನ ಹಾಗೂ ಸಾಹಸಮಯ ಚಟುವಟಿಕೆಗಳಿಗೆ ಕರೆದೊಯ್ಯಲಾಯಿತು. ಮಧ್ಯಾಹ್ನ 2 ಗಂಟೆಗೆ ರಂಗಧಾರ ರೆಪರ್ಟರಿ, ಕೊಪ್ಪಳ ಇವರಿಂದ 'ಕೃಷ್ಣೇಗೌಡನ ಆನೆ' ನಾಟಕ ಪ್ರದರ್ಶನ ನಡೆಯಿತು. ನಂತರ ಮ್ಯಾಜಿಕ್ ಷೋ ಹಾಗೂ ಪ್ರದರ್ಶನವು ನಡೆಯಿತು. ನಂತರ ಆಳ್ವಾಸ್ ವಿರಾಸತ್ ಸಾಂಸ್ಕೃತಿಕ ಕಾರ್ಯಕ್ರಮದ ವೀಕ್ಷಣೆಗಾಗಿ ವಿದ್ಯಾರ್ಥಿಗಳನ್ನು ಕರೆದೊಯ್ಯಲಾಯಿತು.

ಡಿಸೆಂಬರ್ 13 ರಂದು ಬೆಳಗ್ಗೆ ಯೋಗ ಪ್ರಾಣಾಯಾಮದಿಂದ ಪ್ರಾರಂಭಗೊಂಡು ಉಪಹಾರವನ್ನು ಸೇವಿಸಿದ ನಂತರ ಮೂರನೇ ತಂಡ ಪಿಲಿಕುಳ ವೀಕ್ಷಣೆಗಾಗಿ ತೆರಳಿತು. ಬೆಳಗ್ಗೆ 9 ರಿಂದ 10 ಗಂಟೆಯ ತನಕ ಲೆಫ್ಟಿನೆಂಟ್ ಜನರಲ್ ಬಿ.ಎಸ್. ರಾಜು (ನಿವೃತ್ತ) ಭಾರತೀಯ ಸೇನೆ ಇವರಿಂದ ಉಪನ್ಯಾಸ ಕಾರ್ಯಕ್ರಮವು ನಡೆಯಿತು. ತದ ನಂತರ ಮೂರು ತಂಡಗಳಿಗೆ ಕ್ರಮವಾಗಿ ಶೋಭಾವನ, ಸಾವಿರ ಕಂಬ ಬಸದಿ ವೀಕ್ಷಣೆ, ಮೂಡುಬಿದ್ರೆ ಸ್ವಚ್ಛತಾ ಅಭಿಯಾನ ಹಾಗೂ ಸಾಹಸಮಯ ಚಟುವಟಿಕೆಗಳಿಗೆ ಕರೆದೊಯ್ಯಲಾಯಿತು. ಮಧ್ಯಾಹ್ನ 2 ಗಂಟೆಗೆ ಮಾನವ ಕಂಪ್ಯೂಟರ್ ಎಂದೇ ಪ್ರಖ್ಯಾತರಾಗಿರುವ ವಿಶೇಷ ಚೇತನ ಬಸವರಾಜ ಉಮರಾಣಿ ಇವರಿಂದ ಗಣಿತ ಜಾದೂ ಕಾರ್ಯಕ್ರಮ ನಡೆಯಿತು. ನಂತರ ಶ್ರೀ ಕೋಗಳಿ ಕೊಟ್ರೇಶ್ ಕೂಡ್ಲಿಗಿ, ಪ್ರಖ್ಯಾತ ಹಾಸ್ಯ ಕಲಾವಿದರು ಹಾಗೂ ಶ್ರೀ ಗೋಪಿ, ಬೆಂಗಳೂರು ಪ್ರಖ್ಯಾತ ಮಿಮಿಕ್ರಿ ಕಲಾವಿದರು ಇವರಿಂದ 'ಕಾಮಿಡಿ ಝಲಕ್' ಕಾರ್ಯಕ್ರಮ ನಡೆಯಿತು. ನಂತರ ಆಳ್ವಾಸ್ ವಿರಾಸತ್ ಸಾಂಸ್ಕೃತಿಕ ಕಾರ್ಯಕ್ರಮದ ವೀಕ್ಷಣೆಗಾಗಿ ವಿದ್ಯಾರ್ಥಿಗಳನ್ನು ಕರೆದೊಯ್ಯಲಾಯಿತು.

ಡಿಸೆಂಬರ್ 14 ರಂದು ಬೆಳಗ್ಗೆ ಯೋಗ ಪ್ರಾಣಾಯಾಮದಿಂದ ಪ್ರಾರಂಭಗೊಂಡು ಉಪಹಾರವನ್ನು ಸೇವಿಸಿದ ನಂತರ ನಾಲ್ಕನೇ ತಂಡ ಪಿಲಿಕುಳ ವೀಕ್ಷಣೆಗಾಗಿ ತೆರಳಿತು. ಬೆಳಗ್ಗೆ 9 ರಿಂದ 10 ಗಂಟೆಯ ತನಕ ಡಾ. ಗುಬ್ಬಿ ಗೂಡು ರಮೇಶ್, ಸಹಾಯಕ ನಿರ್ದೇಶಕರು ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಇವರಿಂದ ಉಪನ್ಯಾಸ ಕಾರ್ಯಕ್ರಮವು ನಡೆಯಿತು. ನಂತರ ಮೂರು ತಂಡಗಳಿಗೆ ಕ್ರಮವಾಗಿ ಶೋಭಾವನ, ಸಾವಿರ ಕಂಬ ಬಸದಿ ವೀಕ್ಷಣೆ, ಮೂಡುಬಿದ್ರೆ ಸ್ವಚ್ಛತಾ ಅಭಿಯಾನ ಹಾಗೂ ಸಾಹಸಮಯ ಚಟುವಟಿಕೆಗಳಿಗೆ ಕರೆದೊಯ್ಯಲಾಯಿತು. ಮಧ್ಯಾಹ್ನ ಆಳ್ವಾಸ್ ಅಂಗ ಅಧ್ಯಯನ ಕೇಂದ್ರ ಅಭಿನಯ ಹಾಗೂ ರಂಗಮಾಂತ್ರಿಕ ಡಾ. ಶಜೀವನ್ ರಾಮ್ ಸುಳ್ಯ ನಿರ್ದೇಶನದ 'ನಾಯಿಮರಿ' ನಾಟಕ ನಡೆಯಿತು. ನಂತರ ಆಳ್ವಾಸ್ ವಿರಾಸತ್ ಸಾಂಸ್ಕೃತಿಕ ಕಾರ್ಯಕ್ರಮದ ವೀಕ್ಷಣೆಗಾಗಿ ವಿದ್ಯಾರ್ಥಿಗಳನ್ನು ಕರೆದೊಯ್ಯಲಾಯಿತು.

ಡಿಸೆಂಬರ್ 15 ರಂದು ಬೆಳಗ್ಗೆ ಸಾಮೂಹಿಕ ಯೋಗ ಕಾರ್ಯಕ್ರಮವು ನಡೆಯಿತು. ಬೆಳಗ್ಗೆ ಸಮಾರೋಪ ಸಮಾರಂಭವು ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯಾರವರ ಅಧ್ಯಕ್ಷತೆಯಲ್ಲಿ ನಡೆಯಿತು.



## ಪ್ರಥಮ ಕಿತ್ತೂರು ಕರ್ನಾಟಕ ಜಾಂಬೊರೇಟ್-2025

ರಾಜ್ಯ ಸಂಸ್ಥೆ ಮತ್ತು ಧಾರವಾಡ ಜಿಲ್ಲಾ ಸಂಸ್ಥೆಯ ಸಹಯೋಗದೊಂದಿಗೆ ಕಿತ್ತೂರು ಕರ್ನಾಟಕ ವಿಭಾಗದ ಜಿಲ್ಲೆಗಳ ಸ್ಕೌಟ್ಸ್-ಗೈಡ್ಸ್‌ಗಳಿಗೆ ಪ್ರಥಮ "ಕಿತ್ತೂರು ಕರ್ನಾಟಕ ಜಾಂಬೊರೇಟ್-2025" ಅನ್ನು ಜನವರಿ 06 ರಿಂದ 10ರ ವರೆಗೆ ಸಸ್ಯಚೇತನ ಜಿಲ್ಲಾ ಸ್ಕೌಟ್-ಗೈಡ್ ತರಬೇತಿ ಕೇಂದ್ರ, ದಡ್ಡಿ ಕಮಲಾಪುರ, ಧಾರವಾಡ ಜಿಲ್ಲೆಯಲ್ಲಿ ಶ್ರೀ ಪಿ.ಜಿ.ಆರ್. ಸಿಂಧ್ಯ, ರಾಜ್ಯ ಮುಖ್ಯ ಆಯುಕ್ತರ ನೇತೃತ್ವ ಮತ್ತು ಮಾರ್ಗದರ್ಶನದಲ್ಲಿ ಆಯೋಜಿಸಲಾಗಿದೆ.

ಈ ಜಾಂಬೊರೇಟ್‌ನಲ್ಲಿ ಕಿತ್ತೂರು ಕರ್ನಾಟಕ ವಿಭಾಗದ ಬಾಗಲಕೋಟೆ, ಬೆಳಗಾವಿ, ಧಾರವಾಡ, ಗದಗ, ಹಾವೇರಿ, ಕಾರವಾರ, ಶಿರಸಿ ಮತ್ತು ವಿಜಯಪುರ ಜಿಲ್ಲೆಗಳಿಂದ 1000ಕ್ಕೂ ಹೆಚ್ಚು ಸ್ಕೌಟ್ಸ್, ಗೈಡ್ಸ್, ರೋವರ್ಸ್ ಮತ್ತು ರೇಂಜರ್ಸ್ ವಿದ್ಯಾರ್ಥಿಗಳು ಹಾಗೂ ದಳನಾಯಕರುಗಳು ಭಾಗವಹಿಸಲಿದ್ದಾರೆ. ಜಾಂಬೊರೇಟ್‌ನಲ್ಲಿ ಮಕ್ಕಳಿಗೆ ದೈಹಿಕ, ಮಾನಸಿಕ ಹಾಗೂ ಬೌದ್ಧಿಕ ಚಟುವಟಿಕೆಗಳನ್ನು ಆಯೋಜಿಸಲಾಗುತ್ತಿದ್ದು, ಜಾಂಬೊರೇಟ್ ಉದ್ಘಾಟನಾ ಸಮಾರಂಭಕ್ಕೆ ಶ್ರೀ ಪ್ರಹ್ಲಾದ್‌ಜೋಷಿ, ಮಾನ್ಯ ಕೇಂದ್ರ ಗ್ರಾಹಕರ ವ್ಯವಹಾರಗಳ, ಆಹಾರ ಮತ್ತು ಸಾರ್ವಜನಿಕ ವಿತರಣೆ ಮತ್ತು ಹೊಸ ಹಾಗೂ ನವೀಕರಿಸಬಹುದಾದ ಇಂಧನ ಕೇಂದ್ರ ಸಚಿವರು, ಭಾರತ ಸರಕಾರ ಇವರು ಆಗಮಿಸಿ ಮಕ್ಕಳಿಗೆ ಶುಭ ಹಾರೈಸಲಿದ್ದಾರೆ.

## ಎರಡನೇ ಕಲ್ಯಾಣ ಕರ್ನಾಟಕ ಜಾಂಬೊರೇಟ್-2025

ರಾಜ್ಯ ಸಂಸ್ಥೆ ಮತ್ತು ಯಾದಗಿರಿ ಜಿಲ್ಲಾ ಸಂಸ್ಥೆಯ ಸಹಯೋಗದೊಂದಿಗೆ ಕಲ್ಯಾಣ ಕರ್ನಾಟಕ ವಿಭಾಗದ ಜಿಲ್ಲೆಗಳ ಸ್ಕೌಟ್ಸ್-ಗೈಡ್ಸ್‌ಗಳಿಗೆ ಎರಡನೇ "ಕಲ್ಯಾಣ ಕರ್ನಾಟಕ ಜಾಂಬೊರೇಟ್-2025"ಅನ್ನು ಜನವರಿ 17 ರಿಂದ 21, 2025ರ ವರೆಗೆ ಜಿಲ್ಲಾ ಕ್ರೀಡಾಂಗಣ, ಚಿತ್ತಾಪೂರ ರೋಡ್, ಯಾದಗಿರಿ ಜಿಲ್ಲೆಯಲ್ಲಿ ಶ್ರೀ ಪಿ.ಜಿ.ಆರ್. ಸಿಂಧ್ಯ, ರಾಜ್ಯ ಮುಖ್ಯ ಆಯುಕ್ತರ ನೇತೃತ್ವ ಮತ್ತು ಮಾರ್ಗದರ್ಶನದಲ್ಲಿ ಆಯೋಜಿಸಲಾಗಿದೆ.

ಈ ಜಾಂಬೊರೇಟ್‌ನಲ್ಲಿ ಕಲ್ಯಾಣ ಕರ್ನಾಟಕ ವಿಭಾಗದ ಬೀದರ್, ಬಳ್ಳಾರಿ, ಕಲಬುರಗಿ, ಕೊಪ್ಪಳ, ರಾಯಚೂರು, ವಿಜಯನಗರ ಮತ್ತು ಯಾದಗಿರಿ ಜಿಲ್ಲೆಗಳಿಂದ 2000ಕ್ಕೂ ಹೆಚ್ಚು ಸ್ಕೌಟ್ಸ್ ಮತ್ತು ಗೈಡ್ಸ್‌ಗಳು ಹಾಗೂ ದಳನಾಯಕರುಗಳು ಭಾಗವಹಿಸಲಿದ್ದಾರೆ. ಜಾಂಬೊರೇಟ್‌ನಲ್ಲಿ ಮಕ್ಕಳಿಗೆ ದೈಹಿಕ, ಮಾನಸಿಕ ಹಾಗೂ ಬೌದ್ಧಿಕ ಚಟುವಟಿಕೆಗಳನ್ನು ಆಯೋಜಿಸಲಾಗಿದೆ.

## ಜನವರಿ 2025ರ ಮಾಹೆಯ ಕಾರ್ಯಕ್ರಮಗಳ ವಿವರಗಳು

| ಕ್ರ.ಸಂ | ಕಾರ್ಯಕ್ರಮದ ಹೆಸರು | ದಿನಾಂಕ | ಸ್ಥಳ |
|---|---|---|---|
| 1 | ರಾಷ್ಟ್ರೀಯಯುವ ದಿನಾಚರಣೆ ಮತ್ತು ಸ್ವಾಮಿ ವಿವೇಕಾನಂದರ ಜನ್ಮ ದಿನಾಚರಣೆ | 12.01.2025 | ದಳ, ಸ್ಥಳೀಯ, ಜಿಲ್ಲಾ ಮತ್ತು ರಾಜ್ಯ ಹಂತಗಳಲ್ಲಿ |
| 2 | 75ನೇ ಡೈಮಂಡ್ ಜುಬಿಲಿ ಜಾಂಬೂರಿ | 27.01.2025 ರಿಂದ 02.02.2025 | ತಿರಚಿ, ತಮಿಳುನಾಡು |
| 3 | ರಸ್ತೆ ಸುರಕ್ಷತಾ ಸಪ್ತಾಹ ಆಚರಣೆ | 11 ರಿಂದ 17 ಜನವರಿ 25 | ದಳ, ಸ್ಥಳೀಯ ಮತ್ತು ಜಿಲ್ಲಾ ಹಂತಗಳಲ್ಲಿ |
| 4 | ನೇತಾಜಿ ಸುಬಾಷ್ ಚಂದ್ರ ಬೋಸ್ ಜನ್ಮ ದಿನಾಚರಣೆ | 23.01.2025 | ದಳ, ಸ್ಥಳೀಯ ಮತ್ತು ಜಿಲ್ಲಾ ಹಂತಗಳಲ್ಲಿ |
| 5 | ರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆ | 24.01.2025 | ದಳ, ಸ್ಥಳೀಯ, ಜಿಲ್ಲಾ ಮತ್ತು ರಾಜ್ಯ ಹಂತಗಳಲ್ಲಿ |
| 6 | ರಾಷ್ಟ್ರೀಯ ಮತದಾರರ ದಿನಾಚರಣೆ | 25.01.2025 | ದಳ, ಸ್ಥಳೀಯ ಮತ್ತು ಜಿಲ್ಲಾ ಹಂತಗಳಲ್ಲಿ |
| 7 | ಗಣರಾಜ್ಯೋತ್ಸವ ಆಚರಣೆ | 26.01.2025 | ದಳ, ಸ್ಥಳೀಯ, ಜಿಲ್ಲಾ ಮತ್ತು ರಾಜ್ಯ ಹಂತಗಳಲ್ಲಿ |
| 8 | ಕೊತ್ತಲ ಬಸವೇಶ್ವರ ಭಾರತೀಯ ಸಂಸ್ಕೃತಿ ಉತ್ಸವ | 28.01.2025 ರಿಂದ 07.02.2025 | ಬೀರನಹಳ್ಳಿ ಅಡ್ಡ ರಸ್ತೆ, ಸೇಡಂ ಕಲಬುರಗಿ |
| 9 | ರಾಜ್ಯ ಮಟ್ಟದ ಸಾಹಸ ಮತ್ತು ಪಯೋನರಿಂಗ್ ಶಿಬಿರ | 12.01.2025 ರಿಂದ 16.01.2025 | ಜಿಲ್ಲಾ ಕ್ರೀಡಾಂಗಣ, ಚಿತ್ತಾಪುರ ರೋಡ್ ಯಾದಗಿರಿ |

# ಏರ್ ಸ್ಕೌಟ್ಸ್–ಗೈಡ್ಸ್ ಲೀಡರ್‌ಗಳ ಮೂಲತರಬೇತಿ ಶಿಬಿರ




ರಾಜ್ಯ ಸಂಸ್ಥೆಯ ಅತಿಥ್ಯದಲ್ಲಿ ನವೆಂಬರ್ 19 ರಿಂದ 25ರ ವರಗೆ ಹೆಚ್‌ಎಎಲ್ ಬೆಂಗಳೂರು ಇವರ ಸಹಕಾರದಲ್ಲಿ ರಾಷ್ಟ್ರಮಟ್ಟದ ಏರ್ ಸ್ಕೌಟ್ಸ್ – ಗೈಡ್ಸ್ ಲೀಡರ್ಸ್ ಮೂಲ ತರಬೇತಿ ಶಿಬಿರವನ್ನು ಸಂಘಟಿಸಲಾಯಿತು. ಈ ಶಿಬಿರದಲ್ಲಿ ವಿವಿಧ ರಾಜ್ಯಗಳಿಂದ 38 ಸ್ಕೌಟರ್–ಗೈಡರ್‌ಗಳು ಭಾಗವಹಿಸಿದ್ದರು. ಶ್ರೀ ಜನಾರ್ದನ ಚಕ್ರವರ್ತಿ, ಎಲ್.ಟಿ(ಸ್ಕೌಟ್) ನಾಯಕರಾಗಿ ಕಾರ್ಯ ನಿರ್ವಹಿಸಿದ್ದರು. ಶ್ರೀ ಸತ್ಯಜೀತ್ ಚಟರ್ಜಿ, ಕ್ಯಾಪ್ಟನ್ ಸುಪ್ರಿತೋ ಬರಾಯಿ, ಶ್ರೀಮತಿ ಗಾಯಿತ್ರಿ ಗೌಡ, ಶ್ರೀ ಪಿ. ನಂದಕುಮಾರ್, ಶ್ರೀ. ಘನಶ್ಯಾಂ, ಶ್ರೀ ಆದರ್ಶ ಕುಮಾರ್, ಶ್ರೀ ಶಿವಪ್ಪ ಹಾಗೂ ಹೆಚ್‌ಎಎಲ್ ರೋವರ್ಸ್ ಇತರರು ಶಿಬಿರದಲ್ಲಿ ಸಹಾಯಕರಾಗಿ ಕಾರ್ಯನಿರ್ವಹಿಸಿದ್ದರು.

ಡಾ. ಓಂ ಸಿಂಗ್ ಚೌಡಾವಟ್ ಪ್ರಾಂಶುಪಾಲರು, ಹೆಚ್.ಎ.ಎಲ್ ಬೆಂಗಳೂರು, ಶ್ರೀ ಸುರೇಶ್, AGM skill Development HAL, ಶ್ರೀ ರವಿಶಂಕರ್, ಸಂಪನ್ಮೂಲ ವ್ಯಕ್ತಿಗಳಾಗಿ ಸಹಕರಿಸಿದ್ದರು. ಶ್ರೀ ಕೆ. ಗಂಗಪ್ಪ ಗೌಡ, ರಾಜ್ಯ ಕಾರ್ಯದರ್ಶಿಗಳು, ಶ್ರೀ ಸಿ.ಎಸ್ ರೆಡ್ಡಿ, ರಾಜ್ಯ ಆಯುಕ್ತರು (ವಯಸ್ಕ ಸಂಪನ್ಮೂಲ) ಇವರು ಶಿಬಿರಕ್ಕೆ ಭೇಟಿ ಶಿಬಿರಾರ್ಥಿಗಳನ್ನು ಪ್ರೋತ್ಸಾಹಿಸಿದ್ದರು.

ಶಿಬಿರದ ಸಮಾರೋಪ ಸಮಾರಂಭದಲ್ಲಿ ಶ್ರೀ ಪಿ.ಜಿ.ಆರ್ ಸಿಂಧ್ಯ, ರಾಜ್ಯ ಮುಖ್ಯ ಆಯುಕ್ತರು ಅಧ್ಯಕ್ಷತೆವಹಿಸಿ, ಶಿಬಿರಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದ್ದರು. ಶ್ರೀ ಎಸ್.ಎಸ್ ರಾಯ್, ಜಂಟಿ ನಿರ್ದೇಶಕರು ರಾಷ್ಟ್ರೀಯ ಕೇಂದ್ರ ಕಛೇರಿ ಇವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.



## Heartly Congratulation

**Dr. Mahesh Kumar .S,** Rashtrapati Scout, Cordial High School, Bengaluru obtained seat for Bachelor of Dental Surgery (BDS) under Scouts and Guides Quota in KLE Society's Institute of Dental Sciences, Bengaluru during the academic Year 2020-21 and has completed the Course in Academic Year 2023-24. At present he is working as a House Surgeon in KLE Society's Institute of Dental Sciences, Bengaluru.



# ಚಾಂಪಿಯನ್ ಆಫ್ ದಿ ಇಯರ್-2023




ರಾಜ್ಯ ಸಂಸ್ಥೆಯ 2023-24ನೇ ಸಾಲಿನ ಸಮಗ್ರ ಚಟುವಟಿಕೆ ಮತ್ತು ಅಭಿವೃದ್ಧಿಯನ್ನು ಪರಿಗಣಿಸಿ ರಾಷ್ಟ್ರೀಯ ಸಂಸ್ಥೆಯ ವತಿಯಿಂದ 13 ಪ್ರಶಸ್ತಿಗಳನ್ನು ಕರ್ನಾಟಕ ರಾಜ್ಯ ಸಂಸ್ಥೆಗೆ ನೀಡಿರುತ್ತಾರೆ. ರಾಷ್ಟ್ರದಾದ್ಯಂತ 58 ರಾಜ್ಯ ಸಂಸ್ಥೆಗಳಲ್ಲಿ ಕರ್ನಾಟಕ ರಾಜ್ಯ ಸಂಸ್ಥೆಯು 13 ಪ್ರಶಸ್ತಿಗಳ ಮುಖೇನ ಪ್ರಥಮ ಸ್ಥಾನ ಪಡೆದು **ಚಾಂಪಿಯನ್ ಆಫ್ ದ ಇಯರ್-2023 ಅವಾರ್ಡ್** ಪಡೆದಿರುವುದು ಹೆಮ್ಮೆಯ ವಿಷಯ. ಈ ಸಾಧನೆಗೆ ಶ್ರೀ ಪಿ.ಜಿ.ಆರ್. ಸಿಂಧ್ಯ, ರಾಜ್ಯ ಮುಖ್ಯ ಆಯುಕ್ತರು ಹಾಗೂ ಎಲ್ಲಾ ಪದಾಧಿಕಾರಿಗಳು ಉತ್ತಮ ಮಾರ್ಗದರ್ಶನ ಮತ್ತು ಪ್ರೇರಣೆಗಳನ್ನು ನೀಡಿರುತ್ತಾರೆ.



# ಜಿಲ್ಲಾ ವಾರ್ತೆಗಳು

## ಬಾಗಲಕೋಟೆ

* ನವಂಬರ್ 20ರಂದು ಸ್ಥಳೀಯ ಸಂಸ್ಥೆ ಬದಾಮಿ ವತಿಯಿಂದ ತಾಲೂಕ ಮಟ್ಟದ ಸ್ಕೌಟರ್ ಗೈಡರ್ ಸಮಾವೇಶವನ್ನು ಸರ್ಕಾರಿ ಪ್ರೌಢಶಾಲೆ ಬಾದಾಮಿಯಲ್ಲಿ ಏರ್ಪಡಿಸಲಾಯಿತು. ಮುಖ್ಯ ಅತಿಥಿಗಳಾಗಿ ತಾಲೂಕ ದೈಹಿಕ ಶಿಕ್ಷಣ ಪರೀಕ್ಷಕರಾದ ಶ್ರೀ ಬಿ.ಎಚ್. ಹಳಗೇರಿರವರು ಭಾಗವಹಿಸಿ ಕಡ್ಡಾಯವಾಗಿ ಸ್ಕೌಟ್ ಗೈಡ್‌ನ ಘಟಕಗಳನ್ನು ಪ್ರಾರಂಭಿಸಬೇಕು ಎಂದು ತಿಳಿಸಿದರು. ಪದಾಧಿಕಾರಿಗಳು ಹಾಗೂ ಸ್ಕೌಟರ್ಸ್ ಗೈಡರ್ಸ್ ಉಪಸ್ಥಿತರಿದ್ದರು.



* ನವಂಬರ್ 28 ರಿಂದ 30ರ ವರೆಗೆ ಶಾಲಾ ಶಿಕ್ಷಣ ಇಲಾಖೆ ಮತ್ತು ಕಾಲೇಜು ಶಿಕ್ಷಣ ಇಲಾಖೆ ವತಿಯಿಂದ ಜಿಲ್ಲಾ ಮಟ್ಟದ ನಿಪುಣ್ ಪರೀಕ್ಷಾ ಶಿಬಿರವನ್ನು ತೋಟಗಾರಿಕೆ ಮಹಾವಿದ್ಯಾಲಯ ಹವೇಲಿ, ತಾ॥ ಬಾಗಲಕೋಟೆ ಇಲ್ಲಿ ಆಯೋಜಿಸಲಾಗಿತ್ತು. ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಇಳಕಲನ ಪ್ರಾಂಶುಪಾಲರು ಮತ್ತು ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಬಿ.ಕೆ. ನಂದನೂರ ಆಗಮಿಸಿ ರೋವರ್ಸ್ ರೇಂಜರ್‌ಗಳಿಗೆ ಮಾರ್ಗದರ್ಶನ ಮಾಡಿದರು. ರೋವರ್ ವಿಭಾಗದ ನಾಯಕರಾದ ಡಾ. ರವಿ ಗಡದಣ್ಣವರ, ರೇಂಜರ್ ವಿಭಾಗದ ನಾಯಕರಾಗಿ ಡಾ. ಸುಮಂಗಲಾ ಮೇಟಿ,





ಜಿಲ್ಲೆಯ ಕಾರ್ಯದರ್ಶಿಗಳಾದ ಶ್ರೀ ಎಸ್.ಎಸ್. ದಳವಾಯಿ, ಜಿಲ್ಲಾ ಸಂಘಟಕರಾದ ಕು. ಪ್ರಮೋದ ಚೌಗುಲೆ, DOT ಶ್ರೀ ನಾರಾಯಣ ಯಳ್ಳಿಗುತ್ತಿ, ರೋವರ್ ಸ್ಕೌಟ್ ಲೀಡರ್, ರೇಂಜರ್ ಲೀಡರ್ ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

* ಡಿಸೆಂಬರ್ 05ರಂದು ಬಾಗಲಕೋಟೆ ವಿಶ್ವವಿದ್ಯಾಲಯ ಜಮಖಂಡಿ ಇಲ್ಲಿನ ಕುಲಸಚಿವರು (ಮೌಲ್ಯಮಾಪನ) ಶ್ರೀ ದಯಾನಂದ ಸಾಹುಕಾರ ಅವರಿಗೆ ಜಿಲ್ಲಾ ಸಂಸ್ಥೆ ವತಿಯಿಂದ ಸ್ವಾಗತ ಕೋರಿ ಜಿಲ್ಲೆಯ ಎಲ್ಲ ಪದವಿ ಕಾಲೇಜುಗಳಲ್ಲಿ ಕಡ್ಡಾಯವಾಗಿ ರೋವರ್ ರೇಂಜರ್ ಘಟಕಗಳನ್ನು ಪ್ರಾರಂಭಿಸಲು ಕು. ಪ್ರಮೋದ ಚೌಗುಲೆ ಜಿಲ್ಲಾ ಸಂಘಟಕರು ಮನವಿ ಮಾಡಿದರು. ಜಿಲ್ಲಾ ಸಂಘಟನಾ ಶಿಕ್ಷಕರಾದ ಶ್ರೀ ನಾರಾಯಣ್ ಯಳಿಗುತ್ತಿ, ತಾಲೂಕ ಕಾರ್ಯದರ್ಶಿಗಳಾದ ಶ್ರೀ ಮಹಾವೀರ ಜಮಖಂಡಿ ರವರು ಉಪಸ್ಥಿತರಿದ್ದರು.



## ಬೆಳಗಾವಿ

* ನವಂಬರ್ 22 ರಂದು ಚಿಕ್ಕೋಡಿ ತಾಲ್ಲೂಕಿನ ಉಮರಾಣಿ, ಬೆಳಕೂಡ, ನಾಗರಮುನ್ನೋಳಿ, ಬಂಬಲವಾಡ ಹಾಗೂ ಕರೋಶಿ ಗ್ರಾಮ ಪಂಚಾಯತ್‌ಗಳಿಗೆ ಭೇಟಿ ನೀಡಿ ಸ್ಕೌಟ್ಸ್ ಮತ್ತು ಗೈಡ್ ಚಟುವಟಿಕೆಗಳಿಗಾಗಿ ಸರ್ಕಾರದ ಆದೇಶದಂತೆ 5,000 ರೂಪಾಯಿಗಳ ಅನುದಾನ ಬಿಡುಗಡೆ ಮಾಡುವಂತೆ ಕೋರಿ ಸಂಬಂಧಿಸಿದ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಲಾಯಿತು. ಈ ಕಾರ್ಯಕ್ರಮದಲ್ಲಿ ಜಿಲ್ಲಾ ಸಂಘಟನಾ ಶಿಕ್ಷಕರಾದ ಶ್ರೀ ಎನ್.ಜಿ. ಪಾಟೀಲ, ಗೈಡ್ ಕ್ಯಾಪ್ಟನ್ ಜಯಶ್ರೀ ಚೌಗಲಾ, ಶ್ರೀ ತೋಟದ, ಶ್ರೀಮತಿ ಪುಷ್ಪಾ ಕುಂಬಾರ, ಶ್ರೀಮತಿ ಸುನಿತಾ ಕುಲಕರ್ಣಿ ಉಪಸ್ಥಿತರಿದ್ದರು.



## ಬೆಂಗಳೂರು ಗ್ರಾಮಾಂತರ

* ಡಿಸೆಂಬರ್ 05ರಂದು ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ನೂತನವಾಗಿ ಆಗಮಿಸಿರುವ ಉಪ ನಿರ್ದೇಶಕರು (ಆಡಳಿತ) ಶ್ರೀ ಬೈಲಾಂಜನಪ್ಪ ಅವರನ್ನು ಸ್ವಾಗತಿಸಿ ಸ್ಕೌಟ್ ಮತ್ತು ಗೈಡ್ ಚಟುವಟಿಕೆ ಹಾಗೂ ಮೂಲ ತರಬೇತಿಗಳ ಬಗ್ಗೆ ಚರ್ಚಿಸಲಾಯಿತು ಇದೇ ಸಂದರ್ಭದಲ್ಲಿ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ನಾಗರಾಜ್ ಕಾರ್ಯದರ್ಶಿಗಳಾದ ಶ್ರೀ ಶ್ರೀನಿವಾಸ್ ಪ್ರಸಾದ್ ಹಾಗೂ ಜಿಲ್ಲಾ ಖಜಾಂಚಿಗಳಾದ, ಶ್ರೀ ಗೋಪಾಲಸ್ವಾಮಿ, ಜಿಲ್ಲಾ ಜಂಟಿ ಕಾರ್ಯದರ್ಶಿಗಳಾದ ಜ್ಯೋತಿ ಕುಮಾರ್ ಮತ್ತು ಎಲ್ಲಾ ಜಿಲ್ಲಾ, ತಾಲೂಕಿನ ಪದಾಧಿಕಾರಿಗಳು ಹಾಗೂ ಎಸ್.ಜಿ.ವಿ ಕು. ನಿಹಾಲ್ .ಎನ್.ಎಸ್ ಉಪಸತ್ತಿರಿದರು.



## ಬೆಂಗಳೂರು ದಕ್ಷಿಣ

* ಜಿಲ್ಲಾ ಸಂಸ್ಥೆಯ ವತಿಯಿಂದ ನವಂಬರ್ 18 ರಿಂದ 22ರ ವರಗೆ ಡಾ|| ಅನಿಬೆಸೆಂಟ್ ಪಾರ್ಕ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ ಬೆಂಗಳೂರು ಗ್ರಾಮಾಂತರ ಜಿಲ್ಲೆ ಇಲ್ಲಿ ಜಿಲ್ಲಾ ಮಟ್ಟದ ಪಯೋನರಿಂಗ್ ಮತ್ತು ಎಸ್ಟಿಮೇಶನ್ ಶಿಬಿರ ಮತ್ತು ಜಿಲ್ಲಾ ಮಟ್ಟದ ನಿಪುಣ್ ಪರೀಕ್ಷಾ ಶಿಬಿರ ಹಾಗೂ ದ್ವಿತೀಯ ಸೋಪಾನ ಪರೀಕ್ಷಾ ಶಿಬಿರವನ್ನು ಆಯೋಜನೆ ಮಾಡಲಾಯಿತು. ಶಿಬಿರಕ್ಕೆ ಜಿಲಾ ಮುಖ್ಯ ಆಯುಕ್ತರಾದ ಶ್ರೀ ಎಂ.ಕೆ. ಖಾನ್ ಭೇಟಿ ನೀಡಿ ಮಾರ್ಗದರ್ಶನ ನೀಡಿದರು, ಜಿಲ್ಲಾ ತರಬೇತಿ ಆಯುಕ್ತ ಶ್ರೀ ಟಿ.ಕೆ. ನಾರಾಯಣಸ್ವಾಮಿ ರವರ ನಾಯಕತ್ವದಲ್ಲಿ ಶಿಬಿರ ಆಯೋಜಿಸಲಾಯಿತು. ಶಿಬಿರದಲ್ಲಿ ಜಿಲ್ಲಾ ಕಾರ್ಯದರ್ಶಿ ಶ್ರೀ ಎಂ.ಎಸ್ ಸತೀಶ್, ಶ್ರೀ ಎ.ಎಸ್. ಮಧುಸೂಧನ್, ಜಿಲ್ಲಾ ಖಂಜಾಚಿಗಳು, ಶ್ರೀ ಟಿ.ಕೆ. ನಾರಾಯಣಸ್ವಾಮಿ, ಜಿಲ್ಲಾ ತರಬೇತಿ ಆಯುಕ್ತರು ಸ್ಕೌಟ್ಸ್, ದಳನಾಕರುಗಳು 250 ಸೌಟ್ಸ್–ಗೈಡ್ಸ್, ರೋವರ್ಸ್–ರೇಂಜರ್ಸ, ಶಿಬಿರಾರ್ಥಿಗಳು ಭಾಗವಹಿಸಿದರು.



* ಡಿಸೆಂಬರ್ 06 ರಿಂದ 08ರ ವರಗೆ ಚಾಮರಾಜ ಪೇಟೆ ಸ್ಥಳೀಯ ಸಂಸ್ಥೆಯ ವತಿಯಿಂದ ಅನಿಕೇತನ ಪಬ್ಲಿಕ್ ಶಾಲೆಯಲ್ಲಿ ದ್ವಿತೀಯ ಸೋಪಾನ ಪರೀಕ್ಷ ಶಿಬಿರವನ್ನು ಆಯೋಜನೆ ಮಾಡಲಾಯಿತು. ಪರೀಕ್ಷಾ ಶಿಬಿರಕ್ಕೆ ಜಿಲ್ಲಾ ತರಬೇತಿ ಆಯುಕ್ತರಾದ ಶ್ರೀ ಟಿ.ಕೆ. ನಾರಾಯಣಸ್ವಾಮಿ ರವರು ಸ್ಕೌಟ್ಸ್ ವಿಭಾಗದ ನಾಯಕರಾಗಿದ್ದರು, ಶ್ರೀಮತಿ ಗಾಯತ್ರಿ ಜಿ. ಗೈಡ್ ವಿಭಾಗಕ್ಕೆ ನಾಯಕಿಯಾಗಿದ್ದರು. ಪರೀಕ್ಷಾ ಶಿಬಿರದಲ್ಲಿ 5 ಶಾಲೆಗಳಿದ 85 ಶಿಬಿರಾರ್ಥಿಗಳು ಭಾಗವಹಿಸಿದರು.



## ಬೆಂಗಳೂರು ಉತ್ತರ

* ಬೆಂಗಳೂರು ನಗರ ಪ್ರದೇಶದ ವಿದ್ಯಾರ್ಥಿಗಳಿಗೆ ಕೃಷಿಯ ಬಗ್ಗೆ ಅರಿವು ಹಾಗೂ ಪ್ರಾತ್ಯಕ್ಷಿತೆ ಮತ್ತು ನೈಜ ಅನುಭವವನ್ನು ಪಡೆಯಲು" ಸ್ಕೌಟಿಂಗ್ ನಡಿಗೆ ಕೃಷಿಯ ಕಡೆ" ವಿಶಿಷ್ಟ ಶಿಬಿರವನ್ನು ಬೆಂಗಳೂರು ಉತ್ತರ ಜಿಲ್ಲೆ ವತಿಯಿಂದ ರೋವರ್–ರೇಂಜರ್‌ಗಳಿಗೆ ಉಡುಪಿ ಜಿಲ್ಲೆಯ ಹೆಬ್ರಿ ತಾಲೂಕಿನ ಸರಕಾರಿ ಪ್ರಥಮ ದರ್ಜೆ ಕಾಲೇಜು ಮುನಿಯಾಲು ಇಲ್ಲಿ ನವಂಬರ್ 17 ಮತ್ತು 18 ರಂದು ಶಿಬಿರ ಆಯೋಜನೆ ಮಾಡಲಾಯಿತು. ಬೆಂಗಳೂರು ಉತ್ತರ ಜಿಲ್ಲೆಯ 15 ಕಾಲೇಜಿನಿಂದ 150 ರೋವರ್–ರೇಂಜರ್ ಈ ಶಿಬಿರದಲ್ಲಿ ಭಾಗವಹಿಸಿದರು. ವರಂಗ ತಾಲೂಕಿನ ಮಾತಿಬೆಟ್ಟು ಇಲ್ಲಿ ಕೃಷಿಯ ಬಗ್ಗೆ ಪ್ರಗತಿ ಪರ ಕೃಷಿಕ ಶ್ರೀ ರತ್ನಾಕರ ಶೆಟ್ಟಿ ಇವರು ಮಾಹಿತಿ ನೀಡಿದರು. ನಾಲ್ಕು ಎಕರೆ ಗದ್ದೆಗಳಲ್ಲಿ ನಾಟಿ ಮಾಡಿ ಅನಂದ ಪಟ್ಟರು. ಈ ಶಿಬಿರದಲ್ಲಿ ಪದವಿ ಹಾಗೂ ಪಿಯುಸಿ ವಿದ್ಯಾರ್ಥಿಗಳು ಕೆಸರು ಗದ್ದೆಯಲ್ಲಿ ಆಟವಾಡಿ ಸಂತಸಗೊಂಡರು. ಬೆಂಗಳೂರಿನ ವಿದ್ಯಾರ್ಥಿಗಳಿಗೆ ತುಳುನಾಡ ಸ್ವಾದಿಷ್ಟ ಭೋಜನ ಏರ್ಪಡಿಸಲಾಗಿತ್ತು. ತದನಂತರ ಭೂತ ಆರಾಧನೆ ಹಾಗೂ ಕಂಬಳವನ್ನು ನೋಡುವ ವಿನೂತನ ಅವಕಾಶ ದೊರೆಯಿತು. ನವಂಬರ್ 18 ರಂದು ಹೆಬ್ರಿ ಬಳಿಯ ಕೂಡ್ಲುಪಾಲ್ಸ್ ಇಲ್ಲಿಗೆ ಚಾರಣ ಮತ್ತು ಸ್ವಚ್ಚತಾ ಶಿಬಿರವನ್ನು ಹಮ್ಮಿಕೊಳ್ಳಲಾಗಿತು. ತದನಂತರ ಮಲ್ಪೆಯ ಸೈಂಟ್ ಮೇರಿಸ್ ಇಲ್ಲಿನ ದ್ವೀಪಕ್ಕೆ ಬೋಟ್ ಮೂಲಕ ಬೇಟಿ ನೀಡಲಾಯಿತು. ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಅರ್ ಸಿಂಧ್ಯಾ, ಬೆಂಗಳೂರು ಉತ್ತರ ಜಿಲ್ಲೆಯ ಮುಖ್ಯ ಆಯುಕ್ತರಾದ ಶ್ರೀ ಪ್ರಸನ್ನ ಕುಮಾರ್, ಜಿಲ್ಲಾ ಕಾರ್ಯದರ್ಶಿ ಶ್ರೀ ಬಿ.ಕೆ. ಶೇಷಾದ್ರಿ, ಉಡುಪಿ ಜಿಲ್ಲೆಯ ಮುಖ್ಯ ಆಯುಕ್ತರಾದ ಶ್ರೀಮತಿ ಇಂದ್ರಾಳಿ ಜಯಕರ್ ಶೆಟ್ಟಿ, ಗೈಡ್ಸ್ ಆಯುಕ್ತರಾದ ಶ್ರೀಮತಿ ಜ್ಯೋತಿ ಜೆ. ಪೈ, ಸ್ಕೌಟ್ಸ್ ಅಯುಕ್ತರಾದ ಶ್ರೀ ಜನಾರ್ದನ ಕೊಡವೂರ್, ಜಿಲ್ಲಾ ಕಾರ್ಯದರ್ಶಿ ಶ್ರೀ ಆನಂದ ಅಡಿಗ ಇವರೆಲ್ಲರ ಸಹಕಾರದಿಂದ ಶಿಬಿರ ಯಶಸ್ವಿಯಾಗಿ ಜರಗಿತು. ಸಮಾರಂಭ ಸಮಾರೋಪ ಕಾರ್ಯಕ್ರಮದಲ್ಲಿ ಉಡುಪಿ ಜಿಲ್ಲಾ ಸಂಸ್ಥೆಯ ಸ್ಕೌಟ್ಸ್  ಆಯುಕ್ತರಾದ ಮುನಿಯಾಲು ಕಾಲೇಜಿನ ಪ್ರಾಂಶುಪಾಲರು ಶ್ರೀ ಕೆ.ಜಿ. ಸುಧಾಕರ್ ಹಾಗೂ ಶ್ರೀ ಮಂಜುನಾಥ್ ರೋವರ್ ಸ್ಕೌಟ್ಸ್ ಲೀಡರ್ ಮುನಿಯಾಲು ಇವರನ್ನು ಗೌರವಿಸಲಾಯಿತು. ಶಿಬಿರದಲ್ಲಿ ಬೆಂಗಳೂರು ಉತ್ತರ ಜಿಲ್ಲೆಯ 15 ಕಾಲೇಜಿನ 150 ರೋವರ್ ರೇಂಜರ್ ಭಾಗವಹಿಸಿದರು.



* ಬೆಂಗಳೂರು ಉತ್ತರ ಜಿಲ್ಲೆ ವತಿಯಿಂದ ನವಂಬರ್ 22 ರಂದು ಕಬ್–ಬುಲ್ ಬುಲ್ಸ್‌ಗಳಿಗೆ ಜಿಲ್ಲಾ ಮಟ್ಟದ ಕಬ್‌ಗಳಿಗೆ ತೃತೀಯ ಚರಣ್ ಬುಲ್‌ಬುಲ್‌ಗಳಿಗೆ ಪರೀಕ್ಷಾ ಶಿಬಿರವನ್ನು ಚಾಮುಂಡಿ ಸ್ಕೌಟ್ಸ್ ಗ್ರೂಪ್ ಮಲ್ಲೇಶ್ವರ ಇಲ್ಲಿ ಹಮ್ಮಿಕೊಳ್ಳಲಾಯಿತು. ಹಿರಿಯರಾದ ಶ್ರೀ ನರಸಿಂಹಮೂರ್ತಿ ಇವರು ಶಿಬಿರಕ್ಕೆ ಚಾಲನೆ ನೀಡಿ ಶಿಬಿರಾರ್ಥಿಗಳಿಗೆ ಶುಭ ಹಾರೈಸಿದರು. ಶಿಬಿರದ ನಾಯಕರಾಗಿ ಶ್ರೀಮತಿ ಪುಷ್ಪ ವಿಜಯ್ ಇವರ ನೇತೃತ್ವದಲ್ಲಿ ಪರೀಕ್ಷಾ ಶಿಬಿರ ನಡೆಸಲಾಯಿತು. ಜಿಲ್ಲಾ ಸ್ಕೌಟ್ಸ್ ಆಯುಕ್ತ ಶ್ರೀ ಹೇಮಂತ್ ಕುಮಾರ್



ಶಿಬಿರದಲ್ಲಿ ಭಾಗವಹಿಸಿ ಶಿಬಿರಾರ್ಥಿ, ಸ್ಕೌಟಿಂಗ್ ಗುಣಮಟ್ಟ ಇನ್ನೂ ಹೆಚ್ಚಿಸುವಂತೆ ಕರೆ ನೀಡಿದರು. ಜಿಲ್ಲಾ ಮುಖ್ಯ ಆಯುಕ್ತರು ಶ್ರೀ ಪ್ರಶನ್ನಕುಮಾರ್ ಭಾಗವಹಿಸಿ ಸ್ಕೌಟಿಂಗ್ ಬೆಳೆಸುವಲ್ಲಿ ಶಿಕ್ಷಕರ ಪಾತ್ರ ಮಹತ್ವ ಎಂದರು.

* ನಾಡೋಜ ಡಾ. ಗೊ.ರು. ಚನ್ನಬಸಪ್ಪ ಹಿರಿಯ ಸಾಹಿತಿಗಳು ಜಾನಪದ ವಿದ್ವಾಂಸರು ಅಜೀವ ಧರ್ಮದರ್ಶಿಗಳು, ಪ್ರಕಟಣಾ ಸಮಿತಿ ಅಧ್ಯಕ್ಷರು, 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಆಯ್ಕೆ ಆಗಿರುವುದು ಸ್ಕೌಟ್ಸ್ ಮತ್ತು ಗೈಡ್ಸ್ ಸದಸ್ಯರೆಲ್ಲರೂ ಸಂತಸ ಪಡುವ ವಿಷಯ. ಈ ಸಂದರ್ಭದಲ್ಲಿ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಅರ್ ಸಿಂಧ್ಯ ಇವರ ಮಾರ್ಗದರ್ಶನದಲ್ಲಿ ಡಿಸೆಂಬರ್ 19ರ ಮಧ್ಯಾಹ್ನ ಸುಮಾರು 1.30ರ ವೇಳೆಗೆ ಗೊ.ರು. ಚನ್ನಬಸಪ್ಪ ಅವರನ್ನು ರಾಜರಾಜೇಶ್ವರಿನಗರದ ನಿವಾಸದಿಂದ ಮಂಡ್ಯದ ಸಮ್ಮೇಳನಕ್ಕೆ ಹೊರಡುವ ಸಮಯದಲ್ಲಿ ರಾಜ್ಯ ಕಾರ್ಯದರ್ಶಿಗಳು ಶ್ರೀ ಕೆ. ಗಂಗಪ್ಪಗೌಡ ಇವರು ಹೂಗುಚ್ಛ ನೀಡಿ ರಾಜ್ಯ ಸಂಸ್ಥೆ ವತಿಯಿಂದ ಕಾರ್ಯಕ್ರಮಕ್ಕೆ ಶುಭ ಹಾರೈಸಲಾಯಿತು. ಕಾರ್ಯಕ್ರಮದಲ್ಲಿ ಬೆಂಗಳೂರು ಉತ್ತರ ಹಾಗೂ ದಕ್ಷಿಣ ಜಿಲ್ಲೆ ವತಿಯಿಂದ 175 ಕಬ್–ಬುಲ್‌ಬುಲ್, ಸ್ಕೌಟ್ಸ್–ಗೈಡ್ಸ್ ರೋವರ್–ರೇಂಜರ್ ಭಾಗವಹಿಸಿದರು.

– ಕಾರ್ಯಕ್ರಮದಲ್ಲಿ ಬೆಂಗಳೂರು ಉತ್ತರ ಜಿಲ್ಲೆಯ ಸ್ಕೌಟ್ಸ್ ನಡಿಗೆ ಹಳ್ಳಿಯ ಕಡೆ 29ನೇ ತಿಂಗಳ ಸಮುದಾಯ ಸೇವಾ ಶಿಬಿರವನ್ನು ನವಂಬರ್ 28 ರಂದು ಗಂಟಿಗಾನಹಳ್ಳಿಯಲ್ಲಿ ನಡೆಸಲಾಯಿತು. ಈ ಸೇವಾ ಶಿಬಿರದ ಸಮಯದಲ್ಲಿ ಹಳ್ಳಿಯ ಜನರಲ್ಲಿ ಭಾರತದ ಸಂವಿಧಾನದ ಪೀಠಿಕೆಯ ಬಗ್ಗೆ ಜಾಗೃತಿ ಮೂಡಿಲಾಯಿತು. ಗ್ರಾಮ ಪಂಚಾಯಿತ್ ಅಧಿಕಾರಿಗಳು ಜೊತೆ ಕೂಡಿ ಸ್ವಚ್ಛತಾ ಅಭಿಯಾನ ಮತ್ತು ಜನಜಾಗೃತಿ ಮಾಡಲಾಯಿತು.





## ಚಿಕ್ಕಮಗಳೂರು

* ನವಂಬರ್ 29 ರಿಂದ 30ರ ವರೆಗೆ ಚತುರ್ಥ ಚರಣ್ ಮತ್ತು ಹೀರಕ್ ಪಂಕ್ ಪರೀಕ್ಷಾ ಶಿಬಿರವನ್ನು ಜಿಲ್ಲಾ ಸಂಸ್ಥೆಯಲ್ಲಿ ಏರ್ಪಡಿಸಲಾಗಿತ್ತು. ಈ ಶಿಬಿರದಲ್ಲಿ 43 ಕಬ್ಸ್, 35 ಬುಲ್‌ಬುಲ್ಸ್‌ಗಳು ಭಾಗವಹಿಸಿದ್ದರು. ಈ ಶಿಬಿರದ ನಾಯಕರುಗಳಾಗಿ ಶ್ರೀಮತಿ ಸಿ. ಸಂಧ್ಯಾರಾಣಿ, ಎಲ್.ಟಿ.(ಸಿ) ಶ್ರೀತಿ ಪ್ರತಿಭಾಮ, ಎಂ.ವಿ.–ಪ್ರೀ, ಎ.ಎಲ್.ಟಿ ಇವರುಗಳು ಕಾರ್ಯನಿರ್ವಹಿಸಿದರು.



## ಚಿಕ್ಕಬಳ್ಳಾಪುರ

* ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಚಿಕ್ಕಬಳ್ಳಾಪುರ ರಾಜ್ಯ ಹಾಗೂ ಜಿಲ್ಲಾ ಸಂಸ್ಥೆ ಚಿಕ್ಕಬಳ್ಳಾಪುರ ಸಹಯೋಗದಲ್ಲಿ ಡಿಸೆಂಬರ್ 12 ರಿಂದ 18ರ ವರೆಗೆ ಶ್ರೀ ಕೆ.ವಿ. ಕ್ಯಾಂಪಸ್, ಚಿಕ್ಕಬಳ್ಳಾಪುರ ಇಲ್ಲಿ ಜಿಲ್ಲಾ ಮಟ್ಟದ ಸ್ಕೌಟ್ ಮಾಸ್ಟರ್ ಮೂಲ ತರಬೇತಿ ಮತ್ತು ಗೈಡ್ ಕ್ಯಾಪ್ಟನ್ ಮೂಲ ತರಬೇತಿ ಶಿಬಿರವನ್ನು ಆಯೋಜಿಸಲಾಗಿತ್ತು. ಸದರಿ ತರಬೇತಿಯಲ್ಲಿ 30 ಜನ ಸ್ಕೌಟ್ ಮಾಸ್ಟರ್ ಮತ್ತು 45 ಗೈಡ್ ಕ್ಯಾಪ್ಟನ್ ಒಟ್ಟು 75 ಶಿಕ್ಷಕರು ತರಬೇತಿ ಪಡೆದರು.



ಮಾನ್ಯ ಉಪನಿರ್ದೇಶಕರು ಹಾಗೂ ಜಿಲ್ಲಾ ಮುಖ್ಯ ಆಯುಕ್ತ ಶ್ರೀ ಮುನಿಕೆಂಪೇಗೌಡ ರವರು ಕಾರ್ಯಕ್ರಮ ಉದ್ಘಾಟನೆ ಮಾಡಿ ಶಿಬಿರದ ಶಿಬಿರಾರ್ಥಿಗಳಿಗೆ ಶುಭಹಾರೈಸಿದರು. ಉದ್ಘಾಟನಾ ಸಮಾರಂಭದಲ್ಲಿ ಜಿಲ್ಲಾ ಸಂಸ್ಥೆ ಉಪಾಧ್ಯಕ್ಷರಾದ ಶ್ರೀಲಕ್ಷ್ಮೀನಾರಾಯಣ ಗುಪ್ತ, ಜಿಲ್ಲಾ ಕಾರ್ಯದರ್ಶಿ ಹಾಗೂ ಶಿಬಿರದ ನಾಯಕರಾದ ಶ್ರೀ ಪ್ರಕಾಶ್ .ಸಿ.ಬಿ., ಶ್ರೀಮತಿ ಎನ್. ಉಮಾದೇವಿ ಹಾಗೂ ಸಹ ಸಿಬ್ಬಂದಿ ಭಾಗವಹಿಸಿದರು. ಶ್ರೀ ಮುನಿಕೆಂಪೇಗೌಡ, ಉಪನಿರ್ದೇಶಕರು ನಾಯಕತ್ವ ಗುಣಗಳ ವಿಷಯದ ಬಗ್ಗೆ ಉಪನ್ಯಾಸನೀಡಿ ಯೋಗ ಮಾಡುವ ಮೂಲಕ ಶಿಬಿರಾರ್ಥಿಗಳಿಗೆ ಮಾರ್ಗದರ್ಶನ ನೀಡಿದರು.



ಶ್ರೀ ಎನ್. ಶ್ರೀನಿವಾಸನ್, ರಾಜ್ಯ ಸಹಾಯಕ ಆಯುಕ್ತರು ಕಂಪಾಸ್, ನಕ್ಷೆ ತಯಾರಿಸುವ ಬಗ್ಗೆ, ಅಂದಾಜು ಮಾಡುವ ಬಗ್ಗೆ ವಿಶೇಷ ಉಪನ್ಯಾಸ ನೀಡಿದರು. ಶ್ರೀ ಚಿನ್ನಸ್ವಾಮಿರೆಡ್ಡಿ, ರಾಜ್ಯ ಆಯುಕ್ತರು (ವಯಸ್ಕ ಸಂಪನ್ಮೂಲ) ರವರು ಸಮುದಾಯ ಸೇವೆ, ಸಮುದಾಯ ಅಭಿವೃದ್ಧಿ ಮತ್ತು ಕಾರ್ಯಕ್ರಮ ಯೋಜನೆ ವಿಷಯದ ಬಗ್ಗೆ ವಿಶೇಷ ಉಪನ್ಯಾಸ ನೀಡಿದರು.



ಡಿಸೆಂಬರ್ 17 ರಂದು ಸಮಾರೋಪ ಸಮಾರಂಭ ಆಯೋಜಿಸಲಾಗಿತ್ತು ಈ ಸಮಾರಂಭದಲ್ಲಿ ಶ್ರೀ ಪಿ.ಜಿ.ಆರ್. ಸಿಂಧ್ಯ, ರಾಜ್ಯ ಮುಖ್ಯ ಆಯುಕ್ತರು ಭಾಗವಹಿಸಿ ಶಿಬಿರಾರ್ಥಿಗಳಿಗೆ ಮತ್ತಷ್ಟು ಉತ್ತೇಜನ ನೀಡಿ, ಹುರಿದುಂಬಿಸಿ ಮಾರ್ಗದರ್ಶನ ನೀಡಿದರು. ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಚಿನ್ನಸ್ವಾಮಿರೆಡ್ಡಿ, ರಾಜ್ಯ ಆಯುಕ್ತರು (ವಯಸ್ಕ ಸಂಪನ್ಮೂಲ) ವಹಿಸಿದ್ದರು. ಶ್ರೀ ಎಂ.ಎ. ಚಲ್ಲಯ್ಯ ಹಾಗೂ ರಾಜ್ಯ



ಸಂಘಟನಾ ಆಯುಕ್ತರಾದ ಶ್ರೀ ಎಂ. ಪ್ರಭಾಕರ್ ಭಟ್‌ರವರು ಭಾಗವಹಿಸಿ ಮಾತನಾಡಿದರು. ಈ ಸಂದರ್ಭದಲ್ಲಿ ಸಂಸ್ಥೆಯ ಉಪಾಧ್ಯಕ್ಷರಾದ ಶ್ರೀಲಕ್ಷ್ಮೀನಾರಾಯಣಗುಪ್ತ, ಜಿಲ್ಲಾ ಗೈಡ್ ಆಯುಕ್ತೆ ಶ್ರೀಮತಿ ಕೃಷ್ಣಕುಮಾರಿ, ಜಿಲ್ಲಾ ಕಾರ್ಯದರ್ಶಿ ಮತ್ತು ಸ್ಕೌಟ್ ವಿಭಾಗದ ನಾಯಕ ಶ್ರೀ ಪ್ರಕಾಶ್ ಸಿ.ಬಿ., ಗೈಡ್ ವಿಭಾಗದ ನಾಯಕಿ ಶ್ರೀಮತಿ ಎನ್. ಉಮಾದೇವಿ, ಜಿಲ್ಲಾ ಸಂಸ್ಥೆ ಜಂಟಿ ಕಾರ್ಯದರ್ಶಿ ಶ್ರೀಮತಿ ಉಮಾ ಹಾಗೂ ಶಿಬಿರದ ಸಹನಾಯಕರು ಭಾಗವಹಿಸಿದ್ದರು.

ಡಿಸೆಂಬರ್ 18 ರಂದು ಸರ್ವ ಧರ್ಮ ಪ್ರಾರ್ಥನೆ ಆಯೋಜಿಸಲಾಗಿತ್ತು. ನಂತರ ದಳ ನಡೆಸುವ ಬಗ್ಗೆ, ಸಂಘಟನೆ, ಓ.ವೈ.ಎಂ.ಎಸ್ ನೊಂದಣಿ ಮತ್ತು ಮುಕ್ತ ಮಾತುಕತೆ ನಡೆಸಲಾಯಿತು. ಧ್ವಜಾ ಅವರೋಹಣ ಮತ್ತು ರಾಷ್ಟ್ರ ಗೀತೆಯೊಂದಿಗೆ ಶಿಬಿರವನ್ನು ಸಂಪೂರ್ಣಗೊಳಿಸಲಾಯಿತು.

* ಅಕ್ಟೋಬರ್ 26 ರಂದು ಬಾಗೇಪಲ್ಲಿ ತಾಲ್ಲೂಕು ಮಟ್ಟದ ಗೀತಗಾಯನ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು. ಮಾನ್ಯ ಕ್ಷೇತ್ರಶಿಕ್ಷಣಾಧಿಕಾರಿಗಳು ಉದ್ಘಾಟಿಸಿ ಶುಭ ಹಾರೈಸಿದರು. ಈ ಸಂದರ್ಭದಲ್ಲಿ ಸ್ಥಳೀಯ ಸಂಸ್ಥೆ ಪದಾಧಿಕಾರಿಗಳು, ಶಿಕ್ಷಣ ಇಲಾಖೆಯ ಅಧಿಕಾರಿಗಳು, ತಾಲ್ಲೂಕಿನ ವಿವಿಧ ಸ್ಕೌಟ್ಸ್ ಮತ್ತು ಗೈಡ್ಸ್ ತಂಡಗಳು ಭಾಗವಹಿಸಿ ಯಶಸ್ವಿಗೊಳಿಸಿದರು.



* ನವಂಬರ್ 01 ರಂದು ಜಿಲ್ಲಾ ಸಂಸ್ಥೆ ಹಾಗೂ ಸ್ಥಳೀಯ ಸಂಸ್ಥೆ ವತಿಯಿಂದ ದಳ ಮಟ್ಟದಲ್ಲಿ ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು.

* ಅಕ್ಟೋಬರ್ 25 ರಿಂದ ನವಂಬರ್ 05ರ ವರೆಗೆ ಹಸಿರು ದೀಪಾವಳಿ ಅಭಿಯಾನದ ಚಟುವಟಿಕೆಗಳನ್ನು ಎಲ್ಲಾ ದಳ ಹಂತದಲ್ಲಿ ಆಯೋಜಿಸಲಾಗಿತ್ತು. ರಾಜ್ಯ ಸಂಸ್ಥೆಯ ವತಿಯಿಂದ ಚಟುವಟಿಕೆಗಳು, ಕಾರ್ಯಕ್ರಮಗಳಲ್ಲಿ ವಿದ್ಯಾರ್ಥಿಗಳು ಭಾಗವಹಿಸಿ ಯಶಸ್ವಿಗೊಳಿಸಿದರು.

* ನವಂಬರ್ 07 ರಂದು ಜಿಲ್ಲಾ ಸಂಸ್ಥೆ ಚಿಕ್ಕಬಳ್ಳಾಪುರ ಹಾಗೂ ಸ್ಥಳೀಯ ಸಂಸ್ಥೆ ಚಿಕ್ಕಬಳ್ಳಾಪುರ ವತಿಯಿಂದ ಡಾ. ಅಬ್ದುಲ್ ಕಲಾಂ ಭವನ, ಚಿಕ್ಕಬಳ್ಳಾಪುರ ಇಲ್ಲಿ ಚಿಕ್ಕಬಳ್ಳಾಪುರ ಸ್ಥಳೀಯ ಸಂಸ್ಥೆ ತಾಲ್ಲೂಕು ಮಟ್ಟದ ಗೀತ ಗಾಯನ ಸ್ಪರ್ಧೆ ಮತ್ತು 75ನೇ ವರ್ಷದ ಸಂಸ್ಥಾಪನಾ ಮತ್ತು ಧ್ವಜ ದಿನಾಚರಣೆಯ ಕಾರ್ಯಕ್ರಮ ಆಯೋಜಿಸಲಾಗಿತ್ತು. 75ನೇ ಧ್ವಜ ದಿನಾಚರಣೆಯ ಅಮೃತ ಮಹೋತ್ಸವದ ಅಂಗವಾಗಿ ಧ್ವಜ ಚೀಟಿಗಳನ್ನು ಜಿಲ್ಲಾ ಉಪನಿರ್ದೇಶಕರು (ಆಡಳಿತ) ಶ್ರೀ ಬೈಲಾಂಜನಪ್ಪ, ಜಿಲ್ಲಾ ಉಪನಿರ್ದೇಶಕರು (ಅಭಿವೃದ್ಧಿ) ಶ್ರೀ ಮುನಿಕೆಂಪೇಗೌಡ, ಜಿಲ್ಲಾ ಸಂಸ್ಥೆ ಉಪಾಧ್ಯಕ್ಷರಾದ ಶ್ರೀ ಲಕ್ಷ್ಮೀನಾರಾಯಣ ಗುಪ್ತ ರವರು, ಡಯಟ್ ಹಿರಿಯ ಉಪನ್ಯಾಸಕರಾದ ಶ್ರೀ ಆನಂದ್ ಮತ್ತು ಇತರೆ ಅಧಿಕಾರಿಗಳು ಮತ್ತು ಪದಾಧಿಕಾರಿಗಳು ಧ್ವಜ ಚೀಟಿಗಳನ್ನು ಬಿಡುಗಡೆಗೊಳಿಸಿದರು.

* ನವಂಬರ್ 07 ರಂದು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥಾಪನ ದಿನಾಚರಣೆಯನ್ನು ಆಚರಿಸಲಾಯಿತು. ರಾಷ್ಟ್ರೀಯ ಸಂಸ್ಥೆಯಿಂದ ಬಂದಿರುವ ಧ್ವಜ ಚೀಟಿಯ ಬಿಡುಗಡೆ ಕಾರ್ಯಕ್ರಮವನ್ನು ಮಾಡಲಾಯಿತು, ಧ್ವಜ ಚೀಟಿಯನ್ನು ಸಾರ್ವಜನಿಕರಿಗೆ ಹಂಚಿ ಸ್ಕೌಟಿಂಗ್ ಮತ್ತು ಗೈಡಿಂಗ್ ಬಗ್ಗೆ ಮಾಹಿತಿ ನೀಡಲಾಯಿತು, ಸೈಕಲ್ ಜಾಥಾ ಕಾರ್ಯಕ್ರಮ ಮಾಡಲಾಯಿತು, ಸ್ಥಳೀಯ ಗ್ರಾಮ ಪಂಚಾಯತ್ ಬಾಗೇಪಲ್ಲಿಗೆ ಭೇಟಿ ನೀಡಿ, ಧ್ವಜ ಚೀಟಿಯನ್ನು ಅಧಿಕಾರಿಗಳಿಗೆ ಹಂಚಲಾಯಿತು, ಸ್ವಚ್ಛತಾ ಅಭಿಯಾನ ಕಾರ್ಯಕ್ರಮ ಮಾಡಲಾಯಿತು, ಗಿಡ ನೆಡುವ ಮತ್ತು ಪರಿಸರ ಸಂರಕ್ಷಣೆಯ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು, ಸ್ವಚ್ಛತಾ ಮತ್ತು ಆರೋಗ್ಯದ ಬಗ್ಗೆ ಅರಿವು ಮೂಡಿಸಲಾಯಿತು, ಹೊರ ಸಂಚಾರ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು, ಸ್ಥಳೀಯ ಆಶ್ರಮಗಳಿಗೆ ಭೇಟಿ ನೀಡಿ ಸಹಕಾರ ನೀಡಲಾಯಿತು. ತಹಶೀಲ್ದಾರ್ ಕಚೇರಿ, ಪೊಲೀಸ್ ಸ್ಟೇಷನ್, ಪಂಚಾಯಿತಿ ಎಲ್ಲಾ ಅಧಿಕಾರ ವರ್ಗಗಳಿಂದ ಧ್ವಜ ಚೀಟಿಯನ್ನು ಬಿಡುಗಡೆ ಮಾಡಿಸಲಾಯಿತು, ನಿಧಿ ಸಂಗ್ರಹವನ್ನು ಮಾಡಲಾಯಿತು. ನಂತರ ಗೋಳೂರಿನಲ್ಲಿರುವಂತಹ ವೃದ್ಧಾಶ್ರಮದಲ್ಲಿ ಎಲ್ಲಾ ವಿದ್ಯಾರ್ಥಿಗಳು ಸ್ವಚ್ಛತಾ ಕಾರ್ಯವನ್ನು ನೆರವೇರಿಸಿ ವೃದ್ಧರಿಗೆ ಹಣ್ಣು ಹಂಪಲು ವಿತರಿಸಲಾಯಿತು.

* ನವಂಬರ್ 07 ರಂದು ವತಿಯಿಂದ ಗುಡಿಬಂಡೆ ಸ್ಥಳೀಯ ಸಂಸ್ಥೆ ಚಿಕ್ಕಬಳ್ಳಾಪುರ ಜಿಲ್ಲೆ ಇಲ್ಲಿ ಸಂಸ್ಥಾಪನಾ ದಿನಾಚರಣೆ ಮತ್ತು 75ನೇ ಧ್ವಜ ದಿನಾಚರಣೆ ಅಮೃತ ಮಹೋತ್ಸವದ ಆಚರಣೆ ಮಾಡಲಾಯಿತ್ತು. ಸರ್ಕಾರಿ ಪ್ರೌಢಶಾಲೆ ತಿರುಮಣಿ ಶಾಲೆಯ ಗೈಡ್ಸ್‌ಗಳು ಗಿಡ ನಡೆಯುವ ಕಾರ್ಯಕ್ರಮ. ಸ್ವಚ್ಛತಾ ಅಭಿಯಾನ, ಗ್ರಾಮ ಪಂಚಾಯತ್ ಭೇಟಿ, ಸಾರ್ವಜನಿಕ ಆಸ್ಪತ್ರೆ ಭೇಟಿ ಇತ್ಯಾದಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದರು.

* "ಭೂಮಿಯ ಉಳಿವಿಗಾಗಿ ಸೇವಾ ಗುಣಗಳನ್ನು ಮೈಗೂಡಿಸಕೊಳ್ಳಬೇಕು" ಎಂದು ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿ ಶ್ರೀ ಆನಂದ್‌ರವರು ವಿದ್ಯಾರ್ಥಿಗಳಿಗೆ ಕರೆ ನೀಡಿದರು. ಚಿಂತಾಮಣಿ ನಗರದ ತಾಲ್ಲೂಕು ಪಂಚಾಯತಿ ಕಛೇರಿಯಲ್ಲಿ ಆಯೋಜಿಸಿದ್ದ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ 75ನೇ ಸಂಸ್ಥಾಪನಾ ಮತ್ತು ಧ್ವಜ ದಿನಾಚರಣೆ ಕಾರ್ಯಕ್ರಮದ ಧ್ವಜಚೀಟಿಗಳು ಬಿಡುಗಡೆ ಮಾಡಿ ಮಾತನಾಡಿದರು. ಶ್ರೀಮತಿ ಉಮಾದೇವಿ ಕ್ಷೇತ್ರ ಶಿಕ್ಷಣಾಧಿಕಾರಿಗಳು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿ "117 ವರ್ಷಗಳ ಹಿಂದಿನಿಂದಲೆ ಲಾರ್ಡ್ ಬೇಡನ್ ಪೊವೆಲ್ ರವರು 03 ವರ್ಷದ ಮಕ್ಕಳಿಗೆ 25 ವರ್ಷದ ಯುವಕ/ ಯುವತಿಯರಿಗೆ ವಿವಿಧ ಚಟುವಟಿಕೆಗಳನ್ನು ರೂಪಿಸಿ ಅವುಗಳನ್ನು ಕಾರ್ಯಗತಗೊಳಿಸುವ ನಿಟ್ಟಿನಲ್ಲಿ ವಿವಿಧ ರೀತಿಯ ಶಿಬಿರಗಳ ಮೂಲಕ ತರಬೇತಿ ನೀಡಲಾಗುತ್ತಿದೆ. ಜಾಗತಿಕ ಮಟ್ಟದಲ್ಲಿ ಸುಸ್ಥಿರ ಅಭಿವೃದ್ಧಿಯ ಗುರಿಗಳನ್ನು ಸಾಕಾರಗೊಳಿಸಲು ಸ್ಕೌಟ್ಸ್ ಮತ್ತು ಗೈಡ್ಸ್‌ಗಳು ಉತ್ತಮ ತರಬೇತಿಯನ್ನು ಪಡೆಯುತ್ತಿದ್ದು, ಎಲ್ಲರೂ ಸೇರಿ ಭೂಮಿಯನ್ನು ಉಳಿಸೋಣ" ಎಂದು ತಿಳಿಸಿದರು.

* ನವಂಬರ್ 15 ರಂದು ಡಾ. ಎ.ಪಿ.ಜೆ ಅಬ್ದುಲ್ ಕಲಾಂ ಭವನ ಚಿಕ್ಕಬಳ್ಳಾಪುರ ಇಲ್ಲಿ ಜಿಲ್ಲಾ ಮಟ್ಟದ ಗೀತ ಗಾಯನ ಸ್ಪರ್ಧೆ ಮತ್ತು ಜಾನಪದ ಗೀತೆಗಾಯನ ಸ್ಪರ್ಧೆ, ದಳ ನಾಯಕರ ದೇಶಭಕ್ತಿ ಗೀತೆಗಾಯನ ಸ್ಪರ್ಧೆ ಆಯೋಜಿಸಲಾಗಿತ್ತು. ಕಾರ್ಯಕ್ರಮವನ್ನು ಜಿಲ್ಲಾ ಉಪಾಧ್ಯಕ್ಷರಾದ ಶ್ರೀ ಲಕ್ಷ್ಮೀನಾರಾಯಣ ಗುಪ್ತ ರವರು ಉದ್ಘಾಟಿಸಿದರು. ಉಪನಿರ್ದೇಶಕರು ಹಾಗೂ ಜಿಲ್ಲಾ ಸ್ಕೌಟ್ ಆಯುಕ್ತರಾದ ಶ್ರೀ ಮುನಿಕೆಂಪೆಗೌಡ ರವರು ಅಧ್ಯಕ್ಷತೆ ವಹಿಸಿ ಶುಭಹಾರೈಸಿದರು. ತಿರ್ಪುಗಾರರಾಗಿ ಶ್ರೀ ಸುಬ್ರಮಣಿ ಮತ್ತು ಶ್ರೀ ಕೀರ್ತಿ ಬಸಪ್ಪ ಲಗಿಣಿರವರು ಕಾರ್ಯ ನಿರ್ವಹಿಸಿದರು. ಪ್ರಥಮ ಮತ್ತು ದ್ವಿತೀಯ ಸ್ಥಾನ ಪಡೆದ ತಂಡಗಳನ್ನು ಬೆಂಗಳೂರು ವಿಭಾಗೀಯ ಮಟ್ಟಕ್ಕೆ ಆಯ್ಕೆ ಮಾಡಲಾಯಿತು. ಈ ಸಂದರ್ಭದಲ್ಲಿ ಜಿಲ್ಲಾ ಕಾರ್ಯದರ್ಶಿ ಶ್ರೀ ಪ್ರಕಾಶ್ ಸಿ.ಬಿ., ಜಿಲ್ಲಾ ತರಬೇತಿ ಆಯುಕ್ತೆ ಶ್ರೀಮತಿ ಲಕ್ಷ್ಮೀ ಹೊನ್ನಪ್ಪ ನಾಯಕ್, ಜಿಲ್ಲಾ ಜಂಟಿ ಕಾರ್ಯದರ್ಶಿ ಸಿದ್ದೇಶ್ವರ, ಸ್ಥಳೀಯ ಸಂಸ್ಥೆ ಕಾರ್ಯದರ್ಶಿ ಶ್ರೀ ಗಿರಿಧರ್ ವೈ.ಜಿ., ಹಾಗೂ ಇತರೆ ಪದಾಧಿಕಾರಿಗಳು ಹಾಜರಿದ್ದು ಯಶಸ್ವಿಗೊಳಿಸಿದರು. ಕಾರ್ಯಕ್ರಮವನ್ನು ಜಿಲ್ಲಾ ಮತ್ತು ಸ್ಥಳೀಯ ಸಂಸ್ಥೆ ಪದಾಧಿಕಾರಿಗಳ ಸಹಕಾರದಲ್ಲಿ ಜಿಲ್ಲಾ ಸಂಘಟಕರು ವಿಶ್ವನಾಥ ವಿ.,ರವರು ಸಂಘಟಿಸಿದರು.



* ನವಂಬರ್ 26 ರಂದು ಸಂವಿಧಾನ ಸರ್ಮಪಣೆ ದಿನಾಚರಣೆಯನ್ನು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಮತ್ತು ಬಿ.ಜಿ.ಎಸ್ ವರ್ಲ್ಡ್ ಶಾಲೆ ಇಲ್ಲಿ ಆಯೋಜಿಸಲಾಗಿತ್ತು. ಭಾರತ ಸಂವಿಧಾನದ ಪೀಠಿಕೆ ಬೋದನೆ ಮಾಡಲಾಯಿತ್ತು. ಹಾಗೂ ವಿಶೇಷ ಉಪನ್ಯಾಸ ಕಾರ್ಯಕ್ರಮ ಆಯೋಜಿಸಲಲಾಗಿತ್ತು.

* ಡಿಸೆಂಬರ್ 06 ರಂದು ಬಾಲಕರ ಸರ್ಕಾರಿ ಪದವಿ ಪೂರ್ವ ಕಾಲೇಜು, ಚಿಂತಾಮಣಿ ಚಿಕ್ಕಬಳ್ಳಾಪುರ ಜಿಲ್ಲೆ ಇಲ್ಲಿ ಶ್ರೀ ಯೋಗಿ ನಾರೇಯಣ ರೋವರ್ಸ್ ತಂಡಗಳಿಗೆ ಕಾಲೇಜು ವತಿಯಿಂದ ಸಮವಸ್ತ್ರವನ್ನು ಪ್ರಾಂಶುಪಾಲರಾದ ಶ್ರೀ ಸುಬ್ಬಯ್ಯ ಮತ್ತು ಕಾಲೇಜಿನ ಎಲ್ಲಾ ಉಪನ್ಯಾಸಕರು ಮತ್ತು ರೋವರ್ ಸ್ಕೌಟ್ ಲೀಡರ್ ಶ್ರೀ ವೆಂಕಟರಮಣಪ್ಪರವರ ನೇತೃತ್ವದಲ್ಲಿ ವಿತರಣೆ ಮಾಡಲಾಯಿತು. ಈ ಸಂದರ್ಭದಲ್ಲಿ ವಿಶ್ವನಾಥ ವಿ., ಜಿಲ್ಲಾ ಸಂಘಟಕರು ರೋವರ್ಸ್‌ಗಳಿಗೆ ಮಾಹಿತಿ ಕಾರ್ಯಾಗಾರ ನೆಡೆಸಿ ಮಾಹಿತಿ ನೀಡಿದರು.

## ಚಿತ್ರದುರ್ಗ

* ಡಿಸೆಂಬರ್ 11 ರಂದು ಚಿತ್ರದುರ್ಗ ಡಾನ್ ಬೋಸ್ಕೋ ಶಾಲೆಯ ಅತಿಥಿಗಳನ್ನು ಸ್ಕೌಟ್‌ಗಳು ಕಲರ್ ಪಾರ್ಟಿಯ ಮೂಲಕ ಸ್ವಾಗತಿಸಿದರು. ಶಾಲೆಯ ಪ್ರಾಂಶುಪಾಲರಾದ ಫಾದರ್ ಜಾನ್ ಪೌಲ್, ಮುಖ್ಯೋಪಾಧ್ಯಾಯರಾದ ಸ್ಕೌಟ್ ಮಾಸ್ಟರ್, ಸತೀಶ್ ಹಾಗೂ ಗೈಡ್ ಕ್ಯಾಪ್ಟನ್ ಶ್ರೀಮತಿ ಬಶೀರ್ ಉನ್ನೀಸಾ ಭಾಗವಹಿಸಿದರು.



* ಚಿತ್ರದುರ್ಗ ಡಾನ್ ಬೋಸ್ಕೋ ಶಾಲೆಯ ಸ್ಕೌಟ್ ಮತ್ತು ಗೈಡ್ಸ್‌ಗಳಿಗೆ ಡಿಸೆಂಬರ್ 13 ರಂದು ಚಾರಣ ಶಿಬಿರವನ್ನು ಜೋಗಿಮಟ್ಟಿ, ಆಡುಮಲ್ಲೇಶ್ವರ ಮತ್ತು ಚಿರತೆ ಕಲ್ಲು ಇಲ್ಲಿಗೆ ಆಯೋಜಿಸಲಾಗಿತ್ತು. ಶಾಲೆಯ ಪ್ರಾಂಶುಪಾಲರಾದ ಫಾದರ್ ಉದಯ ಕುಮಾರ್ ಮತ್ತು ಫಾದರ್ ಜಾನ್ ಪೌಲ್ ಅವರು ಆಗಮಿಸಿ ಚಾರಣಕ್ಕೆ ಚಾಲನೆಯನ್ನು ನೀಡಿ ಶುಭಾಶಯಗಳು ಕೋರಿದರು. ಸ್ಕೌಟ್ ಮಾಸ್ಟರ್ ಶ್ರೀ ಸತೀಶ್ ಹಾಗೂ ಗೈಡ್ ಕ್ಯಾಪ್ಟನ್ ಶ್ರೀಮತಿ ಬಶೀರ್ ಹುನ್ನಿಸಾ ಭಾಗವಹಿಸಿದ್ದರು.

* ಡಿಸೆಂಬರ್ 13 ರಂದು ಶ್ರೀ ನಿಜಲಿಂಗಪ್ಪ ವಿದ್ಯಾಸಂಸ್ಥೆ ಹೊಸದುರ್ಗ ಇಲ್ಲಿನ ಸ್ಕೌಟ್ಸ್‌ಗಳು ಸಿದ್ದಪ್ಪನ ಬೆಟ್ಟಕ್ಕೆ ಚಾರಣಕ್ಕೆ ತೆರಳಿ ಸಿದ್ದಪ್ಪನ ಬೆಟ್ಟದ ಸುತ್ತಮುತ್ತಲಿನ ಹಾಗೂ ದೇವಸ್ಥಾನದ ಸುತ್ತಲು ಸ್ವಚ್ಛತ ಕಾರ್ಯವನ್ನು ಮಾಡಿದರು. ದೇವಸ್ಥಾನದ ಕಮಿಟಿಯ ಅಧ್ಯಕ್ಷರು ಮತ್ತು ಸದ್ಯಸರು ಸ್ಕೌಟ್ಸ್ ಮತ್ತು ಗೈಡ್ಸ್ ಚಟುವಟಿಕೆಗಳ ಬಗ್ಗೆ ಮೆಚ್ಚುಗೆ ವ್ಯಕ್ತ ಪಡಿಸಿದರು, ಈ ಶಿಬಿರದ ವ್ಯವಸ್ಥೆಯನ್ನು ಶಾಲಾ ಸ್ಕೌಟ್ಸ್ ಮಾಸ್ಟರ್ ಶ್ರೀ ಸತೀಶ್‌ರವರು ಏರ್ಪಡಿಸಿದ್ದರು.



* ಡಿಸೆಂಬರ್ 05 ರಿಂದ 07ರ ವರೆಗೆ ಹೊಸದುರ್ಗ ತಾಲ್ಲೂಕಿನ ಮಾರಬಘಟ್ಟ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಸ್ಕೌಟ್ಸ್–ಗೈಡ್‌ಗಳು ಎರಡು ದಿನಗಳ ಅಧ್ಯಯನ ಪ್ರವಾಸಕ್ಕಾಗಿ ಗುರುವಾರ ಶಿವಮೊಗ್ಗ ವಿಮಾನ ನಿಲ್ದಾಣದಿಂದ ಬೆಂಗಳೂರಿನ ಅಂತರ್‌ರಾಷ್ಟ್ರಿಯ ವಿಮಾನ ನಿಲ್ದಾಣಕ್ಕೆ ವಿಮಾನದ ಮೂಲಕ ಪ್ರಯಾಣಿಸಿದರು. ಶಾಲೆಯ 5 ರಿಂದ 7ನೇ ತರಗತಿವರೆಗಿನ 19 ವಿದ್ಯಾರ್ಥಿಗಳು ಮೂವರು ಶಿಕ್ಷಕರು




ಹಾಗೂ ಸ್ಕೌಟ್ಸ್ ಮತ್ತು ಗೈಡ್ಸ್‌ಗೆ ಸೇರಿದ ಇಸಿಓ ಶ್ರೀ ಯೋಗರಾಜ್ ದಾನಿಗಳಿಂದ ನೆರವು ಪಡೆದು ಪ್ರವಾಸ ಆಯೋಜಿಸಿದ್ದರು. ಸದ್ಗುರು ಆಯುರ್ವೇದ ಕಂಪನಿ ಮಾಲೀಕ ಶ್ರೀ ಡಿ.ಎಸ್. ಪ್ರದೀಪ ಶೆಟ್ಟಿ ಮಾರಬಘಟ್ಟದ ಶ್ರೀ ಚನ್ನಪ್ಪ, ನೌಕರರ ಸಂಘದ ತಾಲ್ಲೂಕು ಅಧ್ಯಕ್ಷ ಶ್ರೀ ಶಾಂತಕುಮಾರ. ಇತರರು ಆರ್ಥಿಕ ನೆರವು ನೀಡಿದ್ದಾರೆ. ಮಾರಬಘಟ್ಟದ ಉದ್ಯಮಿ ಶ್ರೀ ಪ್ರಭಾಕರ್ ಮಕ್ಕಳಿಗೆ ಎರಡು ದಿನದ ಊಟ ವಸತಿ ಸೌಲಭ್ಯ ಕಲ್ಪಿಸಿದ್ದಾರೆ ಇಪ್ಪತ್ತು ವರ್ಷಗಳಿಂದ ತಾಲ್ಲೂಕಿನಲ್ಲಿ ಸ್ಕೌಟ್ ಮತ್ತು ಗೈಡ್ಸ್ ನೇತೃತ್ವವಹಿಸಿರುವ ಶಿಕ್ಷಕ ಶ್ರೀ ಯೋಗರಾಜ್ ಪ್ರತಿ ಶಾಲೆಗೂ ಸ್ಕೌಟ್ ಮತ್ತು ಗೈಡ್ಸ್ ಪರಿಚಯಿಸುವ ಮೂಲಕ ಸಮಾಜ ಮುಖಿ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದಾರೆ.

## ದಕ್ಷಿಣ ಕನ್ನಡ

* ಎಸ್‌ಡಿಎಂ ಬೆಳ್ತಂಗಡಿಯಲ್ಲಿ ಧ್ವಜದಚೀಟಿಯ ಬಿಡುಗಡೆಯನ್ನು ಧರ್ಮಸ್ಥಳದ ಶ್ರೀಮತಿ ಸುಪ್ರಿಯಾ ಹರ್ಷೇಂದ್ರಕುಮಾರ್ ಬಿಡುಗಡೆಗೊಳಿಸಿದರು.



* ಸ್ಥಳೀಯ ಸಂಸ್ಥೆ ಪಂಜ ಇದರ ವತಿಯಿಂದ ಕುಕ್ಕೆ ಶ್ರೀ ಸುಬ್ರಹ್ಮಣ್ಯೇಶ್ವರ ಮಹಾವಿದ್ಯಾಲಯ, ಸುಬ್ರಹ್ಮಣ್ಯ ಇವರ ಸಹಯೋಗದಲ್ಲಿ ಸ್ಕೌಟ್–ಗೈಡ್ ವಾರ್ಷಿಕ ಮೇಳ 2024–25ವನ್ನು ನವೆಂಬರ್ 8 ಮತ್ತು 9 ರಂದು ಕುಕ್ಕೆ ಶ್ರೀ ಸುಬ್ರಹ್ಮಣ್ಯೇಶ್ವರ ಮಹಾವಿದ್ಯಾಲಯದಲ್ಲಿ ಜರುಗಿತು. ವಾರ್ಷಿಕ ಮೇಳ ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀಮತಿ ಆಶಾ ನಾಯಕ್ ದೈಹಿಕ ಶಿಕ್ಷಣ ಪರಿವೀಕ್ಷಣಾಧಿಕಾರಿ, ಸುಳ್ಯ, ಶ್ರೀ ದೇವಳದ ಕಾರ್ಯನಿರ್ವಹಣ ಅಧಿಕಾರಿಯಗಳಾದ ಶ್ರೀ ಅರವಿಂದ ಅಯ್ಯಪ್ಪ ಸುತಗುಂಡಿ ಇವರ ಅಧ್ಯಕ್ಷತೆಯಲ್ಲಿ ನೆರವೇರಿಸಿದರು. ಜಿಲ್ಲಾ ಸ್ಕೌಟ್ ಆಯುಕ್ತರಾದ ಶ್ರೀ ಮೊಹಮ್ಮದ್ ತುಂಬೆ, ಜಿಲ್ಲಾ ಗೈಡ್ ಆಯುಕ್ತರಾದ ಶ್ರೀಮತಿ ವಿಮಲ ರಂಗಯ್ಯ ಮತ್ತು ಇತರರು ವೇದಿಕೆಯಲ್ಲಿ ಉಪಸ್ಥಿತರಿದ್ದರು. 12 ಕಬ್, 12 ಬುಲ್‌ಬುಲ್, 220 ಸ್ಕೌಟ್, 243 ಗೈಡ್, 48 ರೋವರ್, 52 ರೇಂಜರ್ಸ್ ಹಾಗೂ 51 ಮಂದಿ ಶಿಕ್ಷಕರು ಒಟ್ಟು ಸೇರಿ 638 ಮಂದಿ ಭಾಗವಹಿಸಿದ್ದರು. ಸ್ಥಳೀಯ ಸಂಸ್ಥೆಯ ಅಧ್ಯಕ್ಷರಾದ ಮಾಧವ ಬಿ.ಕೆ ಸ್ವಾಗತಿಸಿ, ಉಪಾಧ್ಯಕ್ಷ ಸೋಮಶೇಖರ್ ನೇರಳೆ ವಂದಿಸಿದ ಈ ಕಾರ್ಯಕ್ರಮವನ್ನು ಕಾರ್ಯದರ್ಶಿ ಉದಯಕುಮಾರ್ ರೈ ಬಾಳಿಲ ನಿರೂಪಿಸಿದರು. ತದ ನಂತರ ಸ್ಕೌಟ್ ಮತ್ತು ಗೈಡ್ ಚಟುವಟಿಕೆಗಳು ಜರುಗಿದವು. ಸಂಜೆ ನಗರ ಮೆರವಣಿಗೆಯನ್ನು ಹಮ್ಮಿಕೊಳ್ಳಲಾಯಿತು.



ಈ ಕಾರ್ಯಕ್ರಮದ ಉದ್ಘಾಟನೆಯನ್ನು ಸುಬ್ರಹ್ಮಣ್ಯ ಠಾಣಾಧಿಕಾರಿ ಶ್ರೀ ಕಾರ್ತಿಕ್ ಇವರು ನೆರವೇರಿಸಿದರು. ರಾತ್ರಿ 6 ರಿಂದ ಕಾಲೇಜಿನ ಸಾಂಸ್ಕೃತಿಕ ತಂಡದಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು. ಅನಂತರ ಶಿಬಿರಾಗ್ನಿ ಕಾರ್ಯಕ್ರಮ ನಡೆಯಿತು. ಈ ಕಾರ್ಯಕ್ರಮವನ್ನು ಶ್ರೀ ರಾಜೇಶ್ ಎನ್.ಎಸ್. ಅಧ್ಯಕ್ಷರು ಕಾಲೇಜಿನ ಲಯನ್ಸ್ ಕ್ಲಬ್ ಕುಕ್ಕೆ ಸುಬ್ರಹ್ಮಣ್ಯ ಇವರು ನಡೆಸಿಕೊಟ್ಟರು. ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಶ್ರೀ ಗಣೇಶ್ ನಾಯರ್ ಅಧ್ಯಕ್ಷರು ಹಿರಿಯ ವಿದ್ಯಾರ್ಥಿ ಸಂಘದ ಕೆ.ಎಸ್.ಎಸ್. ಕಾಲೇಜ್ ಸುಬ್ರಹ್ಮಣ್ಯ ಇವರು ಆಗಮಿಸಿದ್ದರು. ರಾತ್ರಿ ಸ್ಕೌಟ್–ಗೈಡ್ಸ್‌ಗಳಿಂದ ಸಾಂಸ್ಕೃತಿಕ ವೈವಿಧ್ಯ ಕಾರ್ಯಕ್ರಮ ನಡೆಯಿತು. ನವೆಂಬರ್ 09 ರಂದು ಬೆಳಿಗ್ಗೆ ಸರ್ವಧರ್ಮ ಪ್ರಾರ್ಥನೆ ನಡೆಯಿತು. ಸರ್ವಧರ್ಮ ಪ್ರಾರ್ಥನೆ ಕಾರ್ಯಕ್ರಮದಲ್ಲಿ ಯಶವಂತ ರೈ, ನಿವೃತ್ತ ಮುಖ್ಯ ಶಿಕ್ಷಕರು, ಶ್ರೀ ಸುಬ್ರಹ್ಮಣ್ಯೇಶ್ವರ ಪ್ರೌಢಶಾಲೆ ಸುಬ್ರಹ್ಮಣ್ಯ, ಧರ್ಮ ಗುರುಗಳಾದ ಫಾದರ್ ಹೆನ್ರೀಜೋಸೆಫ್ ನೆಟ್ಟಣ, ಮಹಮ್ಮದ್ ಜಾಕೀರ್ ಸಾಹೇಬ್ ಆಗಮಿಸಿ ತಮ್ಮ ಧರ್ಮಗಳ ಬಗ್ಗೆ ವಿವರಣೆಯನ್ನು ನೀಡಿದರು. ಸ್ಕೌಟ್ ವಿಭಾಗಕ್ಕೆ ಗೂಡು ದೀಪ ತಯಾರಿ, ಗಾಳಿಪಟ ತಯಾರಿ ಹೊರ ಸಂಚಾರ, ಸ್ವಚ್ಛತಾ ಅಭಿಯಾನವನ್ನು ಆಯೋಜಿಸಲಾಗಿತ್ತು. ಮಧ್ಯಾಹ್ನ ಊಟದ ನಂತರ ಸಮಾರೋಪ ಸಮಾರಂಭವು ನಡೆಯಿತು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಮಾಧವ ಬಿ.ಕೆ. ಅಧ್ಯಕ್ಷರು, ಸ್ಕೌಟ್–ಗೈಡ್ಸ್ ಸ್ಥಳೀಯ ಸಂಸ್ಥೆ ಪಂಜ ವಹಿಸಿದರು. ಪ್ರೊಫೆಸರ್ ರಂಗಯ್ಯ ಶೆಟ್ಟಿಗಾರ್, ವಿಶ್ರಾಂತ ಪ್ರಾಂಶುಪಾಲರು ಕುಕ್ಕೆ ಶ್ರೀ ಸುಬ್ರಹ್ಮಣ್ಯೇಶ್ವರ ಮಹಾವಿದ್ಯಾಲಯ ಸುಬ್ರಹ್ಮಣ್ಯ ಇವರು ಸಮಾರೋಪ ಭಾಷಣ ಮಾಡಿದರು. ಶ್ರೀಮತಿ ಲತಾ ಬಿ.ಟಿ., ಐ.ಕ್ಯೂ.ಎ.ಸಿ. ಸಂಯೋಜಕರು, ಶ್ರೀಮತಿ ವಿಮಲಾ ರಂಗಯ್ಯ ಜಿಲ್ಲಾ ಗೈಡ್ಸ್ ಆಯುಕ್ತರು, ಡಾ. ದಿನೇಶ ಪಿ.ಟಿ. ಪ್ರಾಂಶುಪಾಲರು, ಇವರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಶ್ರೀಮತಿ ವಿಮಲಾ ರಂಗಯ್ಯ ಸ್ವಾಗತಿಸಿದರು. ಉದಯಕುಮಾರ್ ಬಾಳಿಲ ಪ್ರಧಾನ ಕಾರ್ಯದರ್ಶಿ ಸ್ಥಳೀಯ ಸಂಸ್ಥೆ ಪಂಜ ಇವರು ಧನ್ಯವಾದಗಳು ಸಮರ್ಪಿಸಿದರು. ಸ್ಕೌಟ್ ಶಿಕ್ಷಕಿ ಸುಜಯಶ್ರೀ, ಗೈಡ್ ಶಿಕ್ಷಕಿ  ಶುಭಕಾರ್ಯಕ್ರಮ ನಿರೂಪಿಸಿದರು. ಧ್ವಜ ಅವರೋಹಣದೊಂದಿಗೆ ಕಾರ್ಯಕ್ರಮವು ಮುಕ್ತಾಯವಾಯಿತು. ಕೆ.ಎಸ್.ಎಸ್. ಕಾಲೇಜಿನ ರೋವರ್–ರೇಂಜರ್ ವಿದ್ಯಾರ್ಥಿಗಳು ಸಾಹಸಮಯ ಪಯೋನಿಯರಿಂಗ್ ಪ್ರಾಜೆಕ್ಟ್‌ನ ರಚನೆಯನ್ನು ಸಂಪೂರ್ಣ ಜವಾಬ್ದಾರಿ ವಹಿಸಿದ್ದರು. ಕಾಲೇಜಿನ ಎನ್.ಎಸ್.ಎಸ್. ಮತ್ತು ರೆಡ್ ಕ್ರಾಸ್ ಘಟಕವು ಸ್ವಯಂ ಸೇವೆಯಲ್ಲಿ ಸಹಕರಿಸಿದ್ದರು.

* ನವೆಂಬರ್ 26ರಂದು ವಿಟ್ಲ ಸ್ಥಳೀಯ ಸಂಸ್ಥೆಯ ಹೊಸ ಕಛೇರಿಯ ಉದ್ಘಾಟನಾ ಕಾರ್ಯಕ್ರಮವು ಸ್ಥಳೀಯ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಸುದರ್ಶನ್ ಪಡಿಯರ್‌ರವರ ಅಧ್ಯಕ್ಷತೆಯಲ್ಲಿ ನಡೆಯಿತು. ಕಾರ್ಯಕ್ರಮದ ಉದ್ಘಾಟನೆಯನ್ನು ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್ ಸಿಂಧ್ಯಾರವರು ನೆರವೇರಿಸಿದರು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಮಾಜಿ ಜಿಲ್ಲಾ ಪಂಚಾಯತ್ ಉಪಾಧ್ಯಕ್ಷರಾದ ಶ್ರೀ ಎಂ.ಎಸ್ ಮಹಮ್ಮದ್, ರಾಮಕೃಷ್ಣ ಪ್ರೌಢಶಾಲೆಯ ಸಂಚಾಲಕರಾದ ಶ್ರೀ ಕಾಪು ಹೇಮನಾಥ ಶೆಟ್ಟಿ, ವಿಟ್ಲ ಜೈನಬಸದಿಯ ಮುಖ್ಯಸ್ಥರಾದ ಶ್ರೀ ಜಿತೇಶ್, ವಿಟ್ಲದ ಪ್ರಖ್ಯಾತ ಉದ್ಯಮಿಗಳಾದ ಶ್ರೀ ರಾಧಾಕೃಷ್ಣ ನಾಯಕ್, ವಿಟ್ಲ ಪಟ್ಟಣ ಪಂಚಾಯಿತಿನ ಕೌನ್ಸಿಲರ್ ಅಶ್ರಫ್, ಶ್ರೀ ಜಯಂತ್, ಶ್ರೀ ಶ್ರೀನಿವಾಸ್ ಶೆಟ್ಟಿ, ಸ್ಥಳೀಯ ಸಂಸ್ಥೆಯ ಗೌರವ ಅಧ್ಯಕ್ಷರಾದ ಶ್ರೀ ಪ್ರಭಾಕರ್ ಶೆಟ್ಟಿ ದಂಬೆಕಾನ, ವಿಠಲ ಪ್ರೌಢಶಾಲೆಯ ಮುಖ್ಯ ಶಿಕ್ಷಕರಾದ ಶ್ರೀ ಕಿರಣ್ ಕುಮಾರ್, ಮೇಗಿನ ಪೇಟೆ ಶಾಲೆಯ ಎಸ್.ಡಿ.ಎಂ.ಸಿ ಅಧ್ಯಕ್ಷರಾದ ಶ್ರೀಮತಿ ಆಶಾ, ಮೇಗಿನಪೇಟೆ ಶಾಲೆಯ ಮುಖ್ಯ ಶಿಕ್ಷಕರಾದ ಶ್ರೀಮತಿ ಜಯಂತಿ, ಸಿ.ಆರ್.ಪಿಯಾದ ಶ್ರೀಮತಿ ಬಿಂದು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಊರಿನ ಗಣ್ಯ ವ್ಯಕ್ತಿಗಳಾದ ಶ್ರೀ ಗೋಕುಲ್ ದಾಸ್ ಶೆಣೈ, ಜೆ.ಸಿ ಪ್ರೌಢಶಾಲೆಯ ಪ್ರಾಂಶುಪಾಲರಾದ ಶ್ರೀ ಜಯರಾಮ್ ರೈ, ಶ್ರೀ ಭಾಸ್ಕರ ಅಡ್ವಾಳ .ಜೆ.ಸಿ., ಗೌರವಾಧ್ಯಕ್ಷರಾದ ಶ್ರೀ ಇಸ್ಮಾಯಿಲ್,  ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದು ಕಾರ್ಯಕ್ರಮದ ಮೆರುಗನ್ನು ಹೆಚ್ಚಿಸಿದರು. ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿಗಳಾದ ಶ್ರೀ ಪ್ರತೀಪ್‌ರವರು ಎಲ್ಲರನ್ನ ಸ್ವಾಗತಿಸಿದರು. ಸ್ಥಳೀಯ ಸಂಸ್ಥೆಯ ಕೋಶಾಧಿಕಾರಿಯಾದ ಶ್ರೀ ವಿಶ್ವನಾಥ ಗೌಡ ಕಾರ್ಯಕ್ರಮ ನಿರೂಪಿಸಿದರು. ಜತೆ ಕಾರ್ಯದರ್ಶಿ ಜಯಶ್ರೀ ಧನ್ಯವಾದಗೈದರು.



* "ಸಾಮರಸ್ಯ, ಗುರು ಹಿರಿಯರಿಗೆ ಗೌರವ, ಪ್ರಕೃತಿ ಪ್ರೇಮ ಹಾಗೂ ಸಮಾಜದ ಮೌಲ್ಯಗಳನ್ನು ಗೌರವಿಸುವ ದೇಶ ಪ್ರೇಮ ಹೊಂದಿರುವ ಸಂಸ್ಥೆ ನಮ್ಮ ಸ್ಕೌಟ್–ಗೈಡ್ಸ್" ಎಂದು ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯಾ ಹೇಳಿದರು. ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ, ಪುತ್ತೂರು, ಜಿಲ್ಲಾ ಸಂಸ್ಥೆ, ಪುತ್ತೂರು, ದ.ಕ.ಜಿ.ಪಂ.ಹಿ.ಪ್ರಾ.ಶಾಲೆ ಪಾಪೆಮಜಲು ಸಂಯುಕ್ತ ಆಶ್ರಯದಲ್ಲಿ ನವೆಂಬರ್ 6 ರಂದು ಪಾಪೆಮಜಲು ಶಾಲೆಯಲ್ಲಿ ನಡೆದ ತಾಲೂಕು ಮಟ್ಟದ ಸ್ಕೌಟ್ ಮತ್ತು ಗೈಡ್ಸ್ ಹಾಗೂ ಕಬ್–ಬುಲ್‌ಬುಲ್ ಮಕ್ಕಳ ನಲಿವಿನ ಹಬ್ಬ ಸಮಾರಂಭವನ್ನು ಅವರು ದೀಪ ಬೆಳಗಿಸಿ ಉದ್ಘಾಟಿಸಿ ಮಾತನಾಡಿದರು.



ಸಂಸ್ಥೆಯ ವತಿಯಿಂದ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್ ಸಿಂಧ್ಯಾ, ತಾಲೂಕು ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಅಂತರಾಷ್ಟ್ರೀಯ ಕ್ರೀಡಾಪಟು, ನಿವೃತ್ತ ಶಿಕ್ಷಕಿ ಶ್ರೀಮತಿ ವೇದಾವತಿ, ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾಗಿರುವ ಸಾಂದೀಪನಿ ಶಿಕ್ಷಣ ಸಂಸ್ಥೆಯ ವಿದ್ಯಾರ್ಥಿನಿ ಕು. ಜ್ಞಾನರೈಯವರನ್ನು ಶಾಲು ಹೊದಿಸಿ ಫಲಪುಷ್ಪ ನೀಡಿ ಸನ್ಮಾನಸಿಲಾಯಿತು.



ಸ್ಥಳೀಯ ಸಂಸ್ಥೆಗಳ ಕಾರ್ಯಾಧ್ಯಕ್ಷ ಶ್ರೀಧರ ರೈ ಸ್ವಾಗತಿಸಿ, ಪಾಪೆಮಜಲು ಶಾಲೆಯ ವಿದ್ಯಾರ್ಥಿನಿ ಹರ್ಷಿಣಿ ಮತ್ತು ಅಂಬಿಕಾ ಸಂಸ್ಥೆಯ ವಿದ್ಯಾರ್ಥಿನಿ ಅವನಿ ಯಕ್ಷಗಾನ ಶೈಲಿಯಲ್ಲಿ ವರದಿ ವಾಚಿಸಿ, ಸ್ಥಳೀಯ ಸಂಸ್ಥೆ ಕಾರ್ಯದರ್ಶಿ ಶ್ರೀಮತಿ ವಿದ್ಯಾ ಆರ್. ಗೌರಿ ಪುತ್ತೂರು ವಂದಿಸಿದರು. ಶಿಕ್ಷಕ ಬಾಲಕೃಷ್ಣ ಪೊರ್ದಾಲ್ ಕಾರ್ಯಕ್ರಮ ನಿರೂಪಿಸಿದರು.

ರಾತ್ರಿ ಶಿಬಿರಾಗ್ನಿಯನ್ನು ನಿವೃತ್ತ ವಲಯ ಅರಣ್ಯಾಧಿಕಾರಿ ಶ್ರೀ ಸುಬ್ರಹ್ಮಣ್ಯಗೌಡ ಉದ್ಘಾಟಿಸಿದರು. ವಿವಿಧ ಶಾಲೆಗಳಿಂದ ಒಟ್ಟು 848 ಶಿಬಿರಾರ್ಥಿಗಳು ಭಾಗಿಯಾಗಿದ್ದರು.

## ದಾವಣಗೆರೆ

* ನವೆಂಬರ್ 11 ರಂದು ಶ್ರೀ ಶಾರದಾ ಮಾಗನಹಳ್ಳಿ ಜಿಲ್ಲಾ ಗೈಡ್ ಆಯುಕ್ತರು ಮತ್ತು ಶ್ರೀಮತಿ ಅಶ್ವಿನಿ ಜೆ. ಎಸ್.ಜಿ.ವಿ. ದೆಹಲಿ ಪಬ್ಲಿಕ್ ಶಾಲೆಗೆ ಭೇಟಿ ನೀಡಿ ಸ್ಕೌಟ್ಸ್–ಗೈಡ್ಸ್ ಸಂಸ್ಥೆ ಬಗ್ಗೆ ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ಲೇಡಿ ಸ್ಕೌಟ್ ಮಾಸ್ಟರ್ ಶ್ರೀಮತಿ ಯಾಸ್ಮಿನ್, ಗೈಡ್ ಕ್ಯಾಪ್ಟನ್ ಶ್ರೀಮತಿ ಮಧುಮಾಲತಿ ಮತ್ತು ಮುಖ್ಯೋಪಾಧ್ಯಾಯರು ಉಪಸ್ಥಿತರಿದ್ದರು.

* ನವೆಂಬರ್ 15 ರಂದು ಶ್ರೀ ಗುರುಮೂರ್ತಿ ರಾಜ್ಯ ಹಣಕಾಸು ಸಮಿತಿ ಸದಸ್ಯರು, ಮೈಸೂರು ಜಿಲ್ಲಾ ಸಂಸ್ಥೆ ಕಾರ್ಯದರ್ಶಿಗಳು ಹಾಗೂ ಕೊಂಡಜ್ಜಿ ಬಸಪ್ಪ ತರಬೇತಿ ಕೇಂದ್ರದ ಅಭಿವೃದ್ಧಿ ಸಮಿತಿ ಅಧ್ಯಕ್ಷರು ದಾವಣಗೆರೆ ಜಿಲ್ಲಾ ಸಂಸ್ಥೆಗೆ ಭೇಟಿ ನೀಡಿದ್ದರು. ಈ ಸಂದರ್ಭದಲ್ಲಿ ಜಿಲ್ಲಾ ಸಂಸ್ಥೆಯ ನೂತನ ಕಛೇರಿ, ಸಭಾಂಗಣವನ್ನು ವೀಕ್ಷಿಸಿ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು.

* ನವೆಂಬರ್ 16 ರಿಂದ 18ರ ವರೆಗೆ ದಾವಣಗೆರೆ ದಕ್ಷಿಣ ವಲಯ ಮತ್ತು ನೇತಾಜಿ ಓಪನ್ ಸ್ಕೌಟ್ ಗ್ರೂಪ್, ಚೇತನ ಓಪನ್ ಗೈಡ್ ಗ್ರೂಪ್ ವತಿಯಿಂದ 51ನೇ ಕನ್ನಡ ರಾಜ್ಯೋತ್ಸವದ ಪ್ರಯುಕ್ತ, ಕರ್ನಾಟಕ ದರ್ಶನ ಮತ್ತು ಅಮೃತ ಭೋಜನ ಎಂಬ ವಿಶೇಷ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಶ್ರೀ ಗುರುಮೂರ್ತಿ ಎಂ., ಎಲ್.ಟಿ. (ಸ್ಕೌಟ್)

ಕಾಸರಗೋಡು ಇವರು ಉದ್ಘಾಟನೆ ಮಾಡಿದರು. ಮುಖ್ಯ ಅತಿಥಿಗಳಾಗಿ ಶ್ರೀ ಸಿ.ಆರ್. ಮರುಳಪ್ಪ, ಶ್ರೀ ಹಾಲಪ್ಪ ಜಿಲ್ಲಾ ಸಹಾಯಕ ಆಯುಕ್ತರುಗಳು ಭಾಗವಹಿಸಿದ್ದರು. ಡಾ. ಹೆಚ್.ಎಸ್. ಮಂಜುನಾಥ್ ಕುರ್ಕಿ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು. ಶ್ರೀ ಎ.ಪಿ. ಷಡಾಕ್ಷರಪ್ಪ ಜಿಲ್ಲಾ ಸ್ಕೌಟ್ ಆಯುಕ್ತರು, ನಾಡ ದೇವತೆ ತಾಯಿ ಭುವನೇಶ್ವರಿಗೆ ಪೂಜೆಯನ್ನು ನೆರವೇರಿಸಿದರು. ಕಬ್ಸ್, ಬುಲ್‌ಬುಲ್ಸ್, ಸ್ಕೌಟ್, ಗೈಡ್‌ಗಳು ಹಾಗೂ ಪೋಷಕರು ವಿವಿಧ ವೇಷಭೂಷಣದಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

* ನವೆಂಬರ್ 17 ರಂದು ಕೊಂಡಜ್ಜಿ ಬಸಪ್ಪ ಸ್ಥಳೀಯ ಸಂಸ್ಥೆಯ ಅನ್ಮೋಲ್ ಪಬ್ಲಿಕ್ ಶಾಲೆಯ ಸ್ಕೌಟ್–ಗೈಡ್ ಮಕ್ಕಳು ಶಿರಮಗೊಂಡನಹಳ್ಳಿಯ ನಾಗನೂರು ಗ್ರಾಮದಲ್ಲಿ ಸಮುದಾಯ ಅಭಿವೃದ್ಧಿ ಸ್ವಚ್ಛತಾ ಕಾರ್ಯಕ್ರಮವನ್ನು ಕೈಗೊಂಡರು. ಈ ಸಂದರ್ಭದಲ್ಲಿ ಶ್ರೀ ರವೀಂದ್ರಸ್ವಾಮಿ.ಟಿ.ಎಂ ಸ್ಥಳೀಯ ಸಂಸ್ಥೆ ಕಾರ್ಯದರ್ಶಿಗಳು, ಶ್ರೀ ವಿಜಯ್ ಸ್ಕೌಟ್ ಮಾಸ್ಟರ್ ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

* ನವೆಂಬರ್ 21 ರಂದು ದಾವಣಗೆರೆ ದಕ್ಷಿಣ ವಲಯ ಸ್ಥಳೀಯ ಸಂಸ್ಥೆಯ ಜೈನ್ ವಿದ್ಯಾಲಯ ಶಾಲೆಯಲ್ಲಿ ದೀಕ್ಷಾ ಸಮಾರಂಭವನ್ನು ಆಯೋಜಿಸಲಾಗಿತ್ತು. ಈ ಸಂದರ್ಭದಲ್ಲಿ ಸ್ಕೌಟ್ ಮಾಸ್ಟರ್ ಶ್ರೀ ಕೊಟ್ರಯ್ಯ, ಶ್ರೀಮತಿ ಮಂಜುಳ ಗೈಡ್ ಕ್ಯಾಪ್ಟನ್‌ರವರು ಹಾಜರಿದ್ದರು. ಶ್ರೀಮತಿ ಅಶ್ವಿನಿ ಜೆ., ಎಸ್.ಜಿ.ವಿ. ಭಾಗವಹಿಸಿದ್ದರು.

* ನವೆಂಬರ್ 23 ರಂದು ದಾವಣಗೆರೆ ದಕ್ಷಿಣ ವಲಯ ಸ್ಥಳೀಯ ಸಂಸ್ಥೆಯ ಎಸ್.ವಿ.ಎಸ್ ಕಾನ್ವೆಂಟ್ ಶಾಲೆಯಲ್ಲಿ ದ್ವಿತೀಯ ಸೋಪಾನ ಪರೀಕ್ಷಾ ಶಿಬಿರವನ್ನು ಆಯೋಜಿಸಲಾಗಿತ್ತು.

* ನವೆಂಬರ್ 23 ರಂದು ಕೊಂಡಜ್ಜಿ ಬಸಪ್ಪ ಸ್ಥಳೀಯ ಸಂಸ್ಥೆಯ ಪಟೇಲ್ ವೀರಪ್ಪ ಶಾಲೆಯಲ್ಲಿ ಸ್ಕೌಟ್ ಗೈಡ್ಸ್‌ಗಳಿಂದ ಕುಕ್ಕಿಂಗ್ ಬ್ಯಾಡ್ಜ್ ತರಬೇತಿಯನ್ನು ಆಯೋಜಿಸಲಾಗಿತ್ತು. ಈ ಸಂಧರ್ಭದಲ್ಲಿ ಶಾಲೆಯ ಮುಖ್ಯಸ್ಥರಾದ ಶ್ರೀಮತಿ ಪ್ರಣೀತ ಗಿರಿರಾಜ್, ಸಂಯೋಜಕರಾದ ಶ್ರೀ ಸೋಮಶೇಖರಪ್ಪ, ಮುಖ್ಯೋಪಾಧ್ಯಾಯರಾದ ಶ್ರೀ ಕಲ್‌ವೀರಪ್ಪ, ಸ್ಥಳೀಯ ಸಂಸ್ಥೆ ಕಾರ್ಯದರ್ಶಿಗಳಾದ ಶ್ರೀ ರವೀಂದ್ರಸ್ವಾಮಿ .ಟಿ.ಎಂ, ಶ್ರೀಮತಿ ಅಶ್ವಿನಿ ಜೆ., ಎಸ್.ಜಿ.ವಿ ಭಾಗವಹಿಸಿದ್ದರು.

* ನವೆಂಬರ್ 24 ರಂದು ಕೊಂಡಜ್ಜಿ ಬಸಪ್ಪ ಸ್ಥಳೀಯ ಸಂಸ್ಥೆಯ ಅನ್‌ಮೋಲ್ ಪಬ್ಲಿಕ್ ಶಾಲೆಯಲ್ಲಿ ಕುಕ್ಕಿಂಗ್ ಬ್ಯಾಡ್ಜ್ ಪಡೆಯಲು ಬೆಂಕಿಯನ್ನು ಉಪಯೋಗಿಸಿಕೊಂಡು ಅಡುಗೆ ಮಾಡುವ ಚಟುವಟಿಕೆಯನ್ನು ಆಯೋಜಿಸಲಾಗಿತ್ತು. ಸ್ಕೌಟ್ಸ್ ಮತ್ತು ಗೈಡ್ಸ್‌ಗಳು ವಿವಿಧ ರೀತಿಯ ತಿಂಡಿ ತಿನಿಸುಗಳನ್ನು ತಯಾರು ಮಾಡಿದರು. ಈ ಸಂದರ್ಭದಲ್ಲಿ ಶಾಲೆಯ ಉಪಾಧ್ಯಕ್ಷರಾದ ಶ್ರೀ ರವೀಂದ್ರ .ಡಿ.ವಿ, ಪ್ರಾಂಶುಪಾಲರಾದ ಶ್ರೀ ಸುಬ್ರಹ್ಮಣ್ಯ .ಎಲ್, ಕೊಂಡಜ್ಜಿ ಬಸಪ್ಪ ಸ್ಥಳೀಯ ಸಂಸ್ಥೆ ಕಾರ್ಯದರ್ಶಿಗಳಾದ ಶ್ರೀ ರವೀಂದ್ರಸ್ವಾಮಿ ಟಿ.ಎಂ., ಸ್ಕೌಟ್ ಮಾಸ್ಟರ್ ಶ್ರೀ ವಿಜಯ್ ಉಪಸ್ಥಿತರಿದ್ದರು.

* ನವೆಂಬರ್ 26 ರಂದು ಜೈನ್ ವಿದ್ಯಾಲಯ ಶಾಲೆಯಲ್ಲಿ ಬನ್ನಿಸ್ ಮಕ್ಕಳಿಂದ ವೇಷ ಭೂಷಣ ಸ್ಪರ್ಧೆಯನ್ನು ಬನ್ನೀ ಶಿಕ್ಷಕರಾದ ಶ್ರೀಮತಿ ಗೀತ, ಶ್ರೀಮತಿ ಭಾರತಿ, ಶ್ರೀ ನೀತು, ಶ್ರೀಮತಿ ಅಶ್ವಿನಿರವರು ಆಯೋಜಿಸಿದ್ದರು. ವಿಶೇಷ ಅತಿಥಿಗಳಾಗಿ ಮುಖ್ಯೋಪಾಧ್ಯಾಯರು, ಶ್ರೀಮತಿ ಮಂಜುಳ, ಗೈಡ್ ಕ್ಯಾಪ್ಟನ್, ಶ್ರೀ ಕೊಟ್ರಯ್ಯ ಸ್ಕೌಟ್ ಮಾಸ್ಟರ್ ಭಾಗವಹಿಸಿದ್ದರು.



* ನವೆಂಬರ್ 28 ರಂದು ದಾವಣಗೆರೆ ಉತ್ತರ ವಲಯ ಮತ್ತು ಆರ್.ವಿ.ಜಿ.ಕೆ ಪ್ರೌಢಶಾಲೆಯ ಸಹಭಾಗಿತ್ವದಲ್ಲಿ ಕನ್ನಡ ರಾಜ್ಯೋತ್ಸವವನ್ನು ಆಚರಿಸಲಾಯಿತು. ಸ್ಥಳೀಯ ಸಂಸ್ಥೆ ಪದಾಧಿಕಾರಿಗಳು, ಎಸ್.ಕೆ.ಪಿ. ಪೀಠದ ಪದಾಧಿಕಾರಿಗಳು ಭಾಗವಹಿಸಿದ್ದರು.

* ನವೆಂಬರ್ 29 ರಂದು ಕೊಂಡಜ್ಜಿ ಬಸಪ್ಪ ಸ್ಥಳೀಯ ಸಂಸ್ಥೆಯ ಸೆಂಟ್ ಪಾಲ್ಸ್ ಕಾನ್ವೆಂಟ್ ಶಾಲೆಯಲ್ಲಿ ಗೈಡ್ಸ್ ಮತ್ತು ಬುಲ್‌ಬುಲ್ಸ್‌ಗಳಿಗೆ ಸಂಚಾರಿ ಪೊಲೀಸ್ ಠಾಣೆ ಮತ್ತು ವಾರ್ತಾ ಇಲಾಖೆ ಸಂಯುಕ್ತ ಆಶ್ರಯದಲ್ಲಿ ರಸ್ತೆ ಸುರಕ್ಷಿತ ಬಗ್ಗೆ ಅರಿವು ಮೂಡಿಸಲಾಯಿತು.

* ನವೆಂಬರ್ 29 ರಂದು ದಾವಣಗೆರೆ ಉತ್ತರ ವಲಯ ಮತ್ತು ಶ್ರೀ ಸಿದ್ದೇಶ್ವರ ಆಂಗ್ಲ ಮಾಧ್ಯಮ ಪ್ರೌಢಶಾಲೆಯ ಸಹಭಾಗಿತ್ವದಲ್ಲಿ ಕನ್ನಡ ರಾಜ್ಯೋತ್ಸವ ಮತ್ತು ಮಕ್ಕಳ ಸಂತೆ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಜಿಲ್ಲಾ ಸಂಸ್ಥೆ ವತಿಯಿಂದ ಶ್ರೀಮತಿ ಶಾರದಾ ಮಾಗನಹಳ್ಳಿ, ಜಿಲ್ಲಾ ಗೈಡ್ ಆಯುಕ್ತರು, ಶ್ರೀಮತಿ ಅಶ್ವಿನಿ .ಜೆ, ಎಸ್.ಜಿ.ವಿ, ಶ್ರೀ ಸುರೇಶ್, ಸ್ಥಳೀಯ ಸಂಸ್ಥೆ ಕಾರ್ಯದರ್ಶಿಗಳು, ಶ್ರೀಮತಿ ಪವಿತ್ರ, ಸಹಕಾರ್ಯದರ್ಶಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.



* ಡಿಸೆಂಬರ್ 01 ರಂದು ಕೊಂಡಜ್ಜಿ ಬಸಪ್ಪ ಸ್ಥಳೀಯ ಸಂಸ್ಥೆಯ ಶ್ರೀ ತರಳಬಾಳು ವಸತಿಯುತ ಶಾಲೆಯಲ್ಲಿ ಸಾರಿಗೆ ಸಪ್ತಾಹ ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಕರ್ನಾಟಕ ಸಾರಿಗೆ ಸಂಸ್ಥೆ, ಸಂಚಾರಿ ಪೊಲೀಸ್ ಮತ್ತು ಆರ್.ಟಿ.ಓ ಕಛೇರಿಯವರ ಸಹಯೋಗದೊಂದಿಗೆ ಸ್ಕೌಟ್ ಗೈಡ್ ಮಕ್ಕಳಿಗೆ ರಸ್ತೆಯ ನಿಯಮಗಳ ಬಗ್ಗೆ ದೃಶ್ಯಾವಳಿಗಳ ಮೂಲಕ ಅರಿವು ಮೂಡಿಸಲಾಯಿತು. ಈ ಸಂದರ್ಭದಲ್ಲಿ ಶಾಲೆಯ ಪ್ರಾಂಶುಪಾಲರು, ಸ್ಕೌಟರ್ಸ್‌ಗಳು, ಗೈಡರ್ಸ್‌ಗಳು ಉಪಸ್ಥಿತರಿದ್ದರು.



* ಡಿಸೆಂಬರ್ 01 ರಂದು ದಾವಣಗೆರೆ ದಕ್ಷಿಣ ವಲಯ ಸ್ಥಳೀಯ ಸಂಸ್ಥೆಯ ಜೈನ್ ವಿದ್ಯಾಲಯ ಶಾಲೆಯಲ್ಲಿ ಬೆಂಕಿ ರಹಿತ ಅಡುಗೆ ಚಟುವಟಿಕೆಯನ್ನು ಆಯೋಜಿಸಲಾಗಿತ್ತು. ಶ್ರೀ ಸಿದ್ದನಗೌಡ ಮುಖ್ಯೋಪಾಧ್ಯಾಯರು, ಶ್ರೀಮತಿ ಶಾರದಾ ಮಾಗನಹಳ್ಳಿ ಜಿಲ್ಲಾ ಗೈಡ್ ಆಯುಕ್ತರು, ವಿದ್ಯಾರ್ಥಿಗಳು ಮಾಡಿರುವ ರುಚಿಕರ ಅಡುಗೆಯನ್ನು ಸವಿದರು. ಈ ಸಂದರ್ಭದಲ್ಲಿ ಶ್ರೀಮತಿ ಮಂಜುಳಾ ಗೈಡ್ ಕ್ಯಾಪ್ಟನ್, ಶ್ರೀ ಕೊಟ್ರಯ್ಯ ಸ್ಕೌಟ್ ಮಾಸ್ಟರ್, ಶ್ರೀಮತಿ ಅಶ್ವಿನಿ.ಜೆ ಎಸ್.ಜಿ.ವಿ ಉಪಸ್ಥಿತರಿದ್ದರು.

* ಡಿಸೆಂಬರ್ 09 ರಿಂದ 13ರ ವರೆಗೆ ಕೊಂಡಜ್ಜಿ ಬಸಪ್ಪ ಸ್ಕೌಟ್ ಗೈಡ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ, ಕೊಂಡಜ್ಜಿಯಲ್ಲಿ ದಾವಣಗೆರೆ ಜಿಲ್ಲಾ ಮಟ್ಟದ ಜಿಲ್ಲಾ ಪುರಸ್ಕಾರ ಕಬ್, ಬುಲ್‌ಬುಲ್, ಸ್ಕೌಟ್, ಗೈಡ್ ಪರೀಕ್ಷಾ ಶಿಬಿರವನ್ನು ಮತ್ತು ನಿಪುಣ್ ಪರೀಕ್ಷಾ ಶಿಬಿರವನ್ನು ಆಯೋಜಿಸಲಾಗಿತ್ತು. ಸ್ಕೌಟ್ ವಿಭಾಗದ ನಾಯಕರಾಗಿ ಶ್ರೀ ಗಂಗಾಧರ ಸ್ವಾಮಿ, ಗೈಡ್ ವಿಭಾಗದ ನಾಯಕರಾಗಿ ಶ್ರೀಮತಿ ಗದಿಗೆಮ್ಮ ಓಲೆಕಾರ್ ಕಾರ್ಯನಿರ್ವಹಿಸಿದರು. 680 ಸ್ಕೌಟ್ಸ್ ಮತ್ತು ಗೈಡ್ಸ್‌ಗಳು, 228 ಕಬ್ಸ್ ಮತ್ತು ಬುಲ್‌ಬುಲ್ಸ್‌ಗಳು, 127 ರೋವರ್ಸ್ ಮತ್ತು ರೇಂಜರ್ಸ್‌ಗಳು 37 ಸ್ಕೌಟರ್ಸ್ ಗೈಡರ್ಸ್‌ಗಳು



18 ಕಬ್ ಮಾಸ್ಟರ್ ಫ್ಲಾಕ್ ಲೀಡರ್, 2 ರೋವರ್ ಸ್ಕೌಟ್ ಲೀಡರ್ ರೇಂಜರ್ ಲೀಡರ್ ಭಾಗವಹಿಸಿದ್ದರು. ಶ್ರೀ ಮುರುಘರಾಜೇಂದ್ರ ಜೆ. ಚಿಗಟೇರಿ, ಜಿಲ್ಲಾ ಮುಖ್ಯ ಆಯುಕ್ತರು, ಶ್ರೀ ಎ.ಪಿ. ಷಡಾಕ್ಷರಪ್ಪ, ಜಿಲ್ಲಾ ಸ್ಕೌಟ್ ಆಯುಕ್ತರು, ಶ್ರೀಮತಿ ಶಾರದ ಮಾಗನಹಳ್ಳಿ, ಜಿಲ್ಲಾ ಗೈಡ್ ಆಯುಕ್ತರು, ಹಾಗೂ ಜಿಲ್ಲಾ ಪದಾಧಿಕಾರಿಗಳು ಶಿಬಿರಕ್ಕೆ ಭೇಟಿ ನೀಡಿ ಮಕ್ಕಳನ್ನು ಪ್ರೋತ್ಸಾಹಿಸಿದರು.

* ಡಿಸೆಂಬರ್ 14 ರಂದು ರಾಜ್ಯ ಸಂಸ್ಥೆಯಲ್ಲಿ ನಡೆದ ರಾಜ್ಯ ಪರಿಷತ್ ಸಭೆಯಲ್ಲಿ ದಾವಣಗೆರೆ ಜಿಲ್ಲೆಗೆ ಬೆಂಗಳೂರು ವಿಭಾಗದಲ್ಲಿ ಪ್ರಥಮ ಸ್ಥಾನ ವಿ.ಪಿ.ದೀನದಾಯಳು ನಾಯ್ಡು ಪರ್ಯಾಯ ಫಲಕ ನೀಡಲಾಯಿತು. ಶ್ರೀ ಪಿ.ಜಿ.ಆರ್. ಸಿಂಧ್ಯ ರಾಜ್ಯ ಮುಖ್ಯ ಆಯುಕ್ತರು ಪ್ರಶಸ್ತಿ ನೀಡಿದರು. ಜಿಲ್ಲಾ ಸಂಸ್ಥೆಯ ಶ್ರೀಮತಿ ಶಾರದ ಮಾಗನಹಳ್ಳಿ ಜಿಲ್ಲಾ ಗೈಡ್ ಆಯುಕ್ತರು ಮತ್ತು ಪದಾಧಿಕಾರಿಗಳು ಪ್ರಶಸ್ತಿ ಸ್ವೀಕರಿಸಿದರು.

* ಡಿಸೆಂಬರ್ 15 ರಂದು ಕೊಂಡಜ್ಜಿ ಬಸಪ್ಪ ಸ್ಥಳೀಯ ಸಂಸ್ಥೆಯ ಶ್ರೀ ತರಳಬಾಳು ವಸತಿಯುತ ಶಾಲೆ ಮತ್ತು ಅನ್ಮೋಲ್ ಪಬ್ಲಿಕ್ ಶಾಲೆಯಲ್ಲಿ ರಸ್ತೆ ಸುರಕ್ಷತೆ ಹಾಗೂ ವಿವಿಧ ಹಸ್ತ ಸಂಕೇತಗಳ ಬಗ್ಗೆ ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಸಂಚಾರಿ ಪೊಲೀಸ್ ಠಾಣೆ ಅಧಿಕಾರಿಗಳಾದ ಶ್ರೀ ಬಸವರಾಜ್ ಅವರು ಮಕ್ಕಳಿಗೆ ರಸ್ತೆ ಸುರಕ್ಷತೆ ಮತ್ತು ಹ್ಯಾಂಡ್ ಸಿಗ್ನಲ್ ಬಗ್ಗೆ ತರಬೇತಿ ನೀಡಿದರು.

## ಧಾರವಾಡ

ನವೆಂಬರ್ 28 ರಂದು ನವಲಗುಂದ ತಾಲೂಕಿನ ಸ್ಕೌಟ್–ಗೈಡ್ ಶಿಕ್ಷಕರ ಸಾಮಾನ್ಯ ಸಭೆಯನ್ನು ಸ.ಹಿ.ಪ್ರಾ. ಶಾಲೆ ನಂ.4 ನವಲಗುಂದ ಇಲ್ಲಿ ಹಮ್ಮಿಕೊಳ್ಳಲಾಯಿತು. ಸದರಿ ಕಾರ್ಯಕ್ರದ ಅಧ್ಯಕ್ಷತೆಯನ್ನು ಎಸ್.ಬಿ. ಮಲ್ಲಾಡದ ಕ್ಷೇತ್ರ ಶಿಕ್ಷಣಾಧಿಕಾರಿ, ನವಲಗುಂದ ತಾಲೂಕು ಇವರು ವಹಿಸಿಕೊಂಡಿದ್ದರು. ಶ್ರೀಶೈಲ ಚ. ಕರೀಕಟ್ಟಿ, ಜಿಲ್ಲಾ ಮುಖ್ಯ ಆಯುಕ್ತರು, ಶ್ರೀ ಡಿ.ಡಿ. ಮಾಳಗಿ ಜಿಲ್ಲಾ ರೋವರ್ ಆಯಕ್ತರು ವಿವಿಧ ಸಂಘಟನೆಗಳ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು ಮತ್ತು ತಾಲೂಕಿನ ಸ್ಕೌಟರ್ಸ್ ಗೈಡರ್ಸ್‌ಗಳು ಭಾಗವಹಿಸಿದ್ದರು. ಅಧ್ಯಕ್ಷೀಯ ಭಾಷಣ ಮಾಡಿದ ಶ್ರೀ ಎಸ್.ಬಿ. ಮಲ್ಲಾಡದ ಕ್ಷೇತ್ರ ಶಿಕ್ಷಣಾಧಿಕಾರಿಗಳು ಪ್ರತಿ ಶಾಲೆಗಳಲ್ಲಿ ಸ್ಕೌಟ್–ಗೈಡ್ ತಂಡ ಇರಬೇಕು ಪ್ರತಿ ವರ್ಷದಂತೆ ಈ ವರ್ಷವೂ ನಮ್ಮ ತಾಲೂಕು ಎಲ್ಲ ಚಟುವಟಿಕೆಗಳಲ್ಲಿ ಪ್ರಥಮ ಸ್ಥಾನದಲ್ಲಿಯೇ ಇರಬೇಕು ಇದಕ್ಕೆ ಎಲ್ಲ ರೀತಿಯ ಸಹಕಾರ ನೀಡಗುವುದು ಎಂದರು. ಶ್ರೀಶೈಲ ಚ. ಕರೀಕಟ್ಟಿ ಜಿಲ್ಲಾ ಮುಖ್ಯ ಆಯುಕ್ತರು ಮಾತನಾಡಿ ತರಬೇತಿ ಪಡೆದ ಶಿಕ್ಷಕರ ನೋಂದಣಿ ಮತ್ತು ಆನಲೈನ ನೋಂದಣಿಯು ಆಗಬೇಕು ಮುಂದಿನ ತರಬೇತಿಗಳಿಗೆ ಶಿಕ್ಷಕರ ನಿಯೋಜನೆ ಮಾಡಬೇಕು ಎಂದರು.



## ಹಾಸನ

* ಚನ್ನರಾಯಪಟ್ಟಣ ತಾಲ್ಲೂಕು ಸಂಸ್ಥೆಯ ಗುಡ್ ಸಿಟಿಜನ್ ಶಾಲೆಯಲ್ಲಿ ಧ್ವಜ ಚೀಟಿಯನ್ನು ಶಾಲಾ ಮುಖ್ಯೋಪಾಧ್ಯಾಯರು ಬಿಡುಗಡೆ ಮಾಡಿ ಕಬ್ ಮತ್ತು ಬುಲ್ ಬುಲ್ ಸ್ಕೌಟ್ಸ್ ಮತ್ತು ಗೈಡ್ಸ್‌ಗಳ ಹೊರಸಂಚಾರಕ್ಕೆ ಚಾಲನೆಯನ್ನು ನೀಡಿದರು. ಈ ಸಂಧರ್ಭದಲ್ಲಿ ಗೈಡ್ ಶಿಕ್ಷಕಿ ಶ್ರೀಮತಿ ಶೋಭ ರವರು ಉಪಸ್ಥಿತರಿದ್ದರು.



* 75ನೇ ಭಾರತ್ ಸ್ಕೌಟ್ಸ್–ಗೈಡ್ಸ್ ಸಂಸ್ಥಾಪನಾ ದಿನ ಹಾಗೂ ಧ್ವಜ ದಿನಾಚರಣೆಯ ಅಂಗವಾಗಿ, ಸಕಲೇಶಪುರದ ಆಕ್ಸ್‌ಫರ್ಡ್ ಆಂಗ್ಲ ಮಾಧ್ಯಮ ಶಾಲೆಯ ಗೈಡ್ಸ್ ನಾಯಕಿ ಶ್ರೀಮತಿ ಜ್ಯೋತಿ ಬಿ.ಬಿ., ಫ್ಲಾಕ್ ಲೀಡರ್ ಶ್ರೀಮತಿ ಮಾನಸ ಡಿ.ಕೆ. ಹಾಗೂ ಶಾಲೆಯ ದೈಹಿಕ ಶಿಕ್ಷಕರಾದ ಶ್ರೀಯುತ ಮಂಜುನಾಥ್ ಇವರು ಸ್ಕೌಟ್ಸ್ ಗೈಡ್ಸ್ ಹಾಗೂ ಕಬ್ಸ್ ಮತ್ತು ಬುಲ್ ಬುಲ್ಸ್‌ಗಳೊಂದಿಗೆ, ಶ್ರವಣ ದೋಷವುಳ್ಳ ಮಕ್ಕಳ ಶಾಲೆಗೆ ಭೇಟಿ ನೀಡಿ ಆ ಶಾಲೆಯ ಮುಖ್ಯೋಪಾಧ್ಯಾಯರಿಂದ ಅಂಚೆ ಚೀಟಿಯನ್ನು ಬಿಡುಗಡೆ ಮಾಡಿಸಿ, ವಿದ್ಯಾರ್ಥಿಗಳಿಗೆ ಹಣ್ಣು ಹಂಪಲು ಹಾಗೂ ಸಿಹಿ ತಿಂಡಿ ವಿತರಿಸಿದರು.



* "ಸ್ಕೌಟ್ಸ್ ಮತ್ತು ಗೈಡ್ಸ್ ನಾಯಕತ್ವ ಮತ್ತು ವ್ಯಕ್ತಿತ್ವ ಬೆಳವಣಿಗೆಯ ಜೊತೆ ಜೊತೆಗೆ ಉನ್ನತ ಶಿಕ್ಷಣಕ್ಕೂ ಸಹಕಾರಿಯಾಗಿದೆ" ಎಂದು ಡಾ॥ ವೈ.ಎಸ್. ವೀರಭದ್ರಪ್ಪ ಅಭಿಪ್ರಾಯ ಪಟ್ಟರು. ಅವರು, ಹಾಸನ ಸ್ಥಳೀಯ ಸಂಸ್ಥೆ ವತಿಯಿಂದ ಜಿಲ್ಲಾ ಸ್ಕೌಟ್ಸ್ ಭವನದಲ್ಲಿ ಹಮ್ಮಿಕೊಂಡಿದ್ದ ದ್ವಿತೀಯ ಸೋಪಾನ ಪರೀಕ್ಷಾ ಶಿಬಿರದ ಸಮಾರೋಪ ಸಮಾರಂಭದಲ್ಲಿ ಮಕ್ಕಳನ್ನು ಉತ್ತೇಜಿಸಿ ಮಾತನಾಡಿದರು. ಕಾರ್ಯಕ್ರಮದಲ್ಲಿ ತಾಲೂಕ ಕಾರ್ಯದರ್ಶಿ, ಶ್ರೀಮತಿ ಬಿ.ಎಸ್. ವನಜಾಕ್ಷಿ ಅವರು "ಸ್ವಂತಕ್ಕೆ ಸ್ವಲ್ಪ, ಸಮಾಜಕ್ಕೆ ಸ್ವಲ್ಪ, ದೇಶಕ್ಕೆ ಸ್ವಲ್ಪ ಎಂಬಂತೆ ಸೇವೆ ಕರ್ತವ್ಯಗಳನ್ನು ಮಾಡಬೇಕು. ರಾಜ್ಯ ಪುರಸ್ಕಾರ, ರಾಷ್ಟ್ರಪತಿ ಪುರಸ್ಕಾರ, ಪಡೆಯುವ ಸ್ಕೌಟ್ಸ್ ಮತ್ತು ಗೈಡ್ಸ್‌ಗಳಿಗೆ ಎಂಜಿನಿಯರಿಂಗ್ ಹಾಗೂ ಎಂ.ಬಿ.ಬಿ.ಎಸ್. ಓದಲು ಮೀಸಲಾತಿ ದೊರೆಯುತ್ತದೆ. ಎಲ್ಲಾ ಶಾಲೆಗಳ ಆಡಳಿತ ಮಂಡಳಿಯವರು ಹೆಚ್ಚಿನ ವಿದ್ಯಾರ್ಥಿಗಳು ಇದರಲ್ಲಿ ಭಾಗವಹಿಸಿ ಇದರ ಸದುಪಯೋಗ ಪಡೆದುಕೊಳ್ಳುವಂತೆ ಮಾರ್ಗದರ್ಶನ ನೀಡಬೇಕು" ಎಂದು ಮನವಿ ಮಾಡಿದರು. ಶಿಬಿರದ ನಾಯಕರೂ ಹಾಗೂ ಹಿರಿಯ ಗೈಡರ್ ಆದ ಶ್ರೀಮತಿ ಹೆಚ್.ಜಿ. ಕಾಂಚನಮಾಲ ಅವರು ಎಲ್ಲ ಮಕ್ಕಳಿಗೂ ಶುಭಕೋರಿ ಪ್ರಮಾಣ ಪತ್ರ ವಿತರಿಸಿದರು.

* ಸ್ಥಳೀಯ ಸಂಸ್ಥೆ ಆಲೂರು ವತಿಯಿಂದ ಪಟ್ಟಣದ ವಿಶ್ವೇಶ್ವರಯ್ಯ ಪಬ್ಲಿಕ್ ಶಾಲೆಯಲ್ಲಿ ನೂತನವಾಗಿ ಕಬ್ಸ್ ಘಟಕವನ್ನು ಪ್ರಾರಂಭಿಸಲಾಯಿತು. ಮಾನ್ಯ ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಸ್ಥಳೀಯ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಎ.ಜೆ. ಕೃಷ್ಣೇಗೌಡರವರು ಗಿಡಕ್ಕೆ ನೀರೆರೆಯುವ ಮೂಲಕ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ರಾಜ್ಯ ಸಹಾಯಕ ಸಂಸ್ಥೆಯ ಮುಖ್ಯಸ್ಥರಾದ ಶ್ರೀ ನಾಗಭೂಷಣ್, ಪ್ರಾಂಶುಪಾಲರಾದ ಶ್ರೀಮತಿ ಸಿ.ಎಸ್. ಪೂರ್ಣಿಮಾ, ಕಬ್ ಮಾಸ್ಟರ್ ರಾಮಚಂದ್ರ ಸೇರಿದಂತೆ ಹಲವರು ಉಪಸ್ಥಿತರಿದ್ದರು.



* ಸ್ಥಳೀಯ ಸಂಸ್ಥೆ ಆಲೂರು ವತಿಯಿಂದ ರಾಜ್ಯಪಾಲರ ಅವಾರ್ಡ್ ಪಡೆದ ಭೈರಾಪುರ ಶಾಲೆಯ ಮಕ್ಕಳಿಗೆ ಅಭಿನಂದನಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ತಾಲ್ಲೂಕು ಕಾರ್ಯದರ್ಶಿ ಶ್ರೀ ಕೊಟ್ರೇಶ್ ಎಸ್. ಉಪ್ಪಾರ್ ಮಾತನಾಡಿದರು. ಮುಖ್ಯ ಶಿಕ್ಷಕಿ ಹಾಗೂ ಫ್ಲಾಕ್ ಲೀಡರ್ ಶ್ರೀಮತಿ ಎಂ.ಎಲ್. ಎಲಿಜಬೆತ್ ಮಾತನಾಡಿದರು. ವೇದಿಕೆಯಲ್ಲಿ ಜಿಲ್ಲಾ ಸಹಾಯಕ ಆಯುಕ್ತ ಶ್ರೀ ಎಂ. ಬಾಲಕೃಷ್ಣ, ಹಿರಿಯ ಗೈಡರ್ ಎಚ್.ಡಿ. ಕಾಂಚನಮಾಲ, ಶಿಕ್ಷಣ ಸಂಯೋಜಕ ಶ್ರೀ ಎಂ.ಡಿ. ದಿವಾಕರ್ ಮಾತನಾಡಿದರು. ಎಸ್.ಡಿ.ಎಂ.ಸಿ. ಅಧ್ಯಕ್ಷರಾದ ಶ್ರೀ ಚಂದ್ರೇಗೌಡ ಸೇರಿದಂತೆ ಮಕ್ಕಳು, ಪೋಷಕರು ಹಾಜರಿದ್ದರು.

* ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯ ಅವರು ಹಾಸನ ಜಿಲ್ಲೆಯ ಜಿಲ್ಲಾಧಿಕಾರಿಗಳಾದ ಶ್ರೀಮತಿ ಸತ್ಯಭಾಮ ಸಿ. ರವರನ್ನು ಭೇಟಿ ಮಾಡಿ ಸ್ಕೌಟ್–ಗೈಡ್‌ಗೆ ಸಂಬಂಧಪಟ್ಟ ಕಾರ್ಯ ಚಟುವಟಿಕೆಗಳ ಬಗ್ಗೆ ಚರ್ಚಿಸಿದರು. ಈ ಸಂದರ್ಭದಲ್ಲಿ ರಾಜ್ಯ ಸಂಘಟನಾ ಆಯುಕ್ತರು ಸ್ಕೌಟ್ ಶ್ರೀ ಪ್ರಭಾಕರ್ ಭಟ್ ಸಿ., ಜಿಲ್ಲಾ ಮುಖ್ಯ ಆಯುಕ್ತರು ಶ್ರೀ ವೈ.ಎಸ್. ವೀರಭದ್ರಪ್ಪ, ಜಿಲ್ಲಾ ಕಾರ್ಯದರ್ಶಿ ಶ್ರೀ ಸುರೇಶ್ ಗುರೂಜಿ, ಜಿಲ್ಲಾ ಖಜಾಂಚಿ ಶ್ರೀ ಆರ್.ಎಸ್. ರಮೇಶ್, ಎಖಓಅ ಶ್ರೀಮತಿ ಪ್ರಿಯಾಂಕ ರವರುಗಳು ಉಪಸ್ಥಿತರಿದ್ದರು.



* ಬೇಲೂರು ತಾಲೂಕಿನ ಹಳೇಬೀಡು ಸಮೀಪದ ಜೈನರ ಗುತ್ತಿಯಲ್ಲಿನ ಪಂಚ ಕಲ್ಯಾಣಕ ಹಾಗೂ ಮಸ್ತಕಾಭಿಷೇಕದ ಸೇವಾ ಕಾರ್ಯದಲ್ಲಿ ಹಳೇಬೀಡಿನ ಎಸ್.ಜಿ.ಆರ್. ಶಾಲೆಯ ಸ್ಕೌಟ್‌ಗಳು ಮತ್ತು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ರೋವರ್ಸ್ ಮತ್ತು ರೇಂಜರ್ಸ್‌ಗಳು ಭಾಗವಹಿಸಿದ್ದರು.

* ಹೊಳೆನರಸೀಪುರ ಪಟ್ಟಣದ ಜಿಲ್ಲಾ ಸಂಸ್ಥೆಯ ಲೇಡಿ ಕಬ್ ಮಾಸ್ಟರ್, ಅಂತರರಾಷ್ಟ್ರೀಯ ಮಟ್ಟದ ಹಿರಿಯರ ವಿಭಾಗದ ಕ್ರೀಡಾ ಪಟು, ಪಟ್ಟಣದ ಸ್ಲಂ ಬೋರ್ಡ ಅಂಗನವಾಡಿ ಕೇಂದ್ರದ ಶಿಕ್ಷಕಿ ಶ್ರೀಮತಿ ವಿಜಯ ಕುಮಾರಿ ಅವರಿಂದ ದ್ವಿಚಕ್ರ ವಾಹನದಲ್ಲಿ ಏಕಾಂಗಿಯಾಗಿ, ಶ್ರೀ ರಾಮ ಜನ್ಮಭೂಮಿ ಅಯೋಧ್ಯೆಗೆ ಅಲ್ಲಿಂದ ನವ ದೆಹಲಿವರೆಗೆ, ಸಂಕಲ್ಪ ಯಾತ್ರೆ ಕೈಗೊಂಡಿರುತ್ತಾರೆ. ಸ್ಥಳೀಯ ಸಂಸ್ಥೆಯ ಎಲ್ಲಾ ಪದಾಧಿಕಾರಿಗಳು ಶ್ರೀಮತಿ ವಿಜಯಕುಮಾರಿ ಅವರ ಈ ಸಂಕಲ್ಪ ಯಾತ್ರೆಯು ಯಶಸ್ವಿಯಾಗಿ ಸುಸಂಪನ್ನಗೊಳ್ಳಲಿ ಎಂದು ಶುಭ ಹಾರೈಸಿದರು.

* "ಸೇವೆಯಿಂದ ಸನ್ಮಾರ್ಗದಲ್ಲಿ ನಡೆಯುವ ಮಹತ್ವದ ಕೆಲಸ ಜಿಲ್ಲಾ ಸಂಸ್ಥೆಯಿಂದ ನಡೆಯುತ್ತಿದೆ" ಎಂದು ಬಿ. ಸಿದ್ದಣ್ಣಯ್ಯ ಪ್ರೌಢಶಾಲೆಯ ಆಡಳಿತ ಮಂಡಳಿ ಅಧ್ಯಕ್ಷ ಶ್ರೀ ಬಿ.ಎಮ್ ಬಸವಣ್ಣನವರು ಹೇಳಿದರು. ಅವರಿಂದ ಶ್ರೀ ಬಿ. ಸಿದ್ದಣ್ಣಯ್ಯ ಪ್ರೌಢಶಾಲೆಯಲ್ಲಿ ಸ್ಥಳೀಯ ಸಂಸ್ಥೆ ಆಯೋಜಿಸಿದ್ದ ಒಂದು ದಿನದ ದ್ವಿತೀಯ ಸೋಪಾನ ತರಬೇತಿ ಮತ್ತು ಪರೀಕ್ಷಾ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದರು. ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಸಂಸ್ಥೆಯ ಅಧ್ಯಕ್ಷರೂ ವಕೀಲರು ಆದ ಶ್ರೀ ಆರ್.ಎನ್. ಕೃಷ್ಣಮೂರ್ತಿರವರು ಮಾತನಾಡಿ ಸಮಾಜಮುಖಿ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದರಿಂದ ವ್ಯಕ್ತಿತ್ವ ವಿಕಸನಕ್ಕೆ ಅವಕಾಶ ದೊರೆಯುತ್ತದೆ ಎಂದು ಹೇಳಿದರು.



ಸಂಸ್ಥೆಯ ಜಿಲ್ಲಾ ಆಯುಕ್ತರು (ಸ್ಕೌಟ್) ಶ್ರೀ ಸ್ಟೀಫನ್ ಪ್ರಕಾಶ್, ಜಿಲ್ಲಾ ಖಜಾಂಚಿ ಶ್ರೀ ಆರ್.ಎಸ್. ರಮೇಶ್, ಸಹಾಯಕ ರಾಜ್ಯ ಸಂಘಟನಾ ಆಯುಕ್ತರು ಶ್ರೀಮತಿ ಪ್ರಿಯಾಂಕ, ತಾಲೂಕು ಕಾರ್ಯದರ್ಶಿ ಶ್ರೀ ಮಲ್ನಾಡ್ ಝಾಕೀರ್, ಶ್ರೀ ಬಿ. ಸಿದ್ದಣ್ಣಯ್ಯ ಶಾಲೆಯ ಖಜಾಂಚಿ ರೋಹಿತ್ ಮಾತನಾಡಿದರು. ಬಿ. ಸಿದ್ದಣ್ಣಯ್ಯ ಶಾಲೆಯ ಮುಖ್ಯ ಶಿಕ್ಷಕರು ಸ್ಕೌಟ್ಸ್ ಮಾಸ್ಟರ್ ಆದ ಶ್ರೀ ಓಂಕಾರ ಮೂರ್ತಿ ಸ್ವಾಗತಿಸಿದರು, ಸಂಸ್ಥೆಯ ರಾಜ್ಯ ಪ್ರತಿನಿಧಿ ಶ್ರೀ ಕೀರ್ತಿ ಕುಮಾರ್ ವಂದಿಸಿದರು, ಪಯೋನೀರ್ ಶಾಲೆಯ ಶ್ರೀ ಉಮೇಶ್ ಕಾರ್ಯಕ್ರಮ ನಿರೂಪಿಸಿದರು. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಹನುಮಂತಪುರ ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿ ಅಂತರಾಷ್ಟ್ರೀಯ ಮಾನವ ಒಗ್ಗಟ್ಟಿನ ದಿನವನ್ನು ಆಚರಿಸಲಾಯಿತು. ಏನೇ ಬರಲಿ ಒಗ್ಗಟ್ಟಿರಲ್ಲಿ ಎಂಬಂತೆ ಮನುಷ್ಯ ಮತ್ತು ದೇಶ ದೇಶಗಳ ನಡುವೆ ಬಾಂಧವ್ಯ ಹೇಗಿರಬೇಕೆಂದು ಮಕ್ಕಳಿಗೆ ಅರಿವು ಮೂಡಿಸಲಾಯಿತು ಈ ಸಂಧರ್ಭದಲ್ಲಿ ಸ್ಕೌಟ್ ಮಾಸ್ಟರ್ ಮೆ॥ ಎನ್.ಎನ್. ಮೂರ್ತಿ ಶಾಲಾ ಮುಖ್ಯೋಪಾಧ್ಯಾಯರು ಉಪಸ್ಥಿತರಿದ್ದರು.

* ತುರ್ತು ಸಂದರ್ಭದಲ್ಲಿ ರೋಗಿಯ ಪ್ರಾಣವನ್ನು ಉಳಿಸಲು, ಸೈನಿಕರಂತೆ ಕಾರ್ಯ ಮಾಡುವುದು ಅಗತ್ಯವಿದೆ ಎಂದು ಸರ್ಕಾರಿ ಆಸ್ಪತ್ರೆಯ ಆಡಳಿತ ವೈಜ್ಞಾಧಿಕಾರಿ ಡಾ. ವಿ. ಮಹೇಶ್ ರೋವರ್ ಹಾಗೂ ರೇಂಜರ್ಸ್ ತಂಡಗಳಿಗೆ ಸಲಹೆ ನೀಡಿದರು. ಸರ್ಕಾರಿ ಪದವಿ ಕಾಲೇಜಿನ ಸ್ಕೌಟ್–ಗೈಡ್ಸ್, ರೋವರ್ಸ್–ರೇಂಜರ್ಸ್ ತಂಡಗಳಿಗೆ ಅಪಘಾತ ಹಾಗೂ ತುರ್ತು ಸಂದರ್ಭದಲ್ಲಿ ರೋಗಿಯ ಪ್ರಾಣ ಉಳಿಸುವ ಕಾರ್ಯದಲ್ಲಿ ತೊಡಗುವಾಗ ವಹಿಸುವ ಜಾಗೃತಿ ಅರಿವು ಎಚ್ಚರಿಕೆ ಬಗ್ಗೆ ಮಾರ್ಗದರ್ಶನ ನೀಡಿದರು. **108** ಆಂಬುಲೆನ್ಸ್‌ನಲ್ಲಿ ದೊರೆಯುವ ಚಿಕಿತ್ಸೆ, ಕರೆತರುವ ರೀತಿ ವಿಧಾನ, ದೊರೆಯುವ ಸೌಲಭ್ಯ ಬಗ್ಗೆ ಪೈಲೆಟ್ ಗಿರೀಶ್ ಮಾಹಿತಿ ನೀಡಿದರು. ಸರ್ಕಾರಿ ಆಸ್ಪತ್ರೆಯ ಟೆಕ್ನಿಷಿಯನ್ ಶ್ರೀ ಗುರುಮೂರ್ತಿ, ಶ್ರೀಮತಿ ಗಿರಿಜಾ, ಶ್ರೀಮತಿ ಪದ್ಮಮ್ಮ, ಶ್ರೀಮತಿ ಫಾತಿಮಾ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದರು. ಲಯನ್ ಸೇವಾ ಸಂಸ್ಥೆ, ಸರ್ಕಾರಿ ಆಸ್ಪತ್ರೆ ಹಾಗೂ ಸರ್ಕಾರಿ ಪದವಿ ಕಾಲೇಜು, ರೋವರ್ಸ್ ಮತ್ತು ರೇಂಜರ್ಸ್ ವತಿಯಿಂದ ಕಾರ್ಯಕ್ರಮ ಆಯೋಜಿನೆ ಮಾಡಲಾಗಿತ್ತು.




## ಕಾರವಾರ (ಉ.ಕ.)

* ನವೆಂಬರ್ **30** ರಂದು ಜಿಲ್ಲಾ ಮಟ್ಟದ ಕಬ್, ಬುಲ್‌ಬುಲ್, ಸ್ಕೌಟ್ಸ್ ಮತ್ತು ಗೈಡ್ಸ್‌ಗಳ ಶಿಬಿರವು ಹವ್ಯಕ ಕಲ್ಯಾಣ ಮಂಟಪ ಕರ್ಕಿಯಲ್ಲಿ ನಡೆಯಿತು. ಈ ಶಿಬಿರಕ್ಕೆ **34** ಕಬ್, **24** ಬುಲ್ ಬುಲ್ **56** ಗೈಡ್ಸ್ **103** ಸ್ಕೌಟ್ಸ್ ಒಟ್ಟು **217** ಮಕ್ಕಳು ಸೇರಿದ್ದರು. ವಿಭಾಗವಾರು ನಾಯಕರುಗಳಾಗಿ ಕಬ್ ವಿಭಾಗಕ್ಕೆ ಶ್ರೀ ಎಂ.ಎನ್. ಗೌಡ್, ಬುಲ್‌ಬುಲ್ ವಿಭಾಗಕ್ಕೆ ಶ್ರೀಮತಿ ಶಾರದಾ ಹೆಗಡೆ, ಸ್ಕೌಟ್ ವಿಭಾಗಕ್ಕೆ ಶ್ರೀ ಜಿ.ಆರ್. ಮಡಿವಾಳ ಮತ್ತು ಗೈಡ್ ವಿಭಾಗಕ್ಕೆ ಶ್ರೀಮತಿ ಬೇಬಿ ಪಡಿಯಾರ ಕರ್ತವ್ಯ ನಿರ್ವಹಿಸಿದರು. ಈ ಶಿಬಿರಕ್ಕೆ ಜಿಲ್ಲೆಯ ಜಿಲ್ಲಾ ಮುಖ್ಯ ಆಯುಕ್ತರಾದ ಡಾ. ಜಿ.ಜಿ. ಸಬಾಹಿತ್, ಜಿಲ್ಲಾ ಗೈಡ್ ಆಯುಕ್ತರಾದ ಶ್ರೀಮತಿ ಶೋಭಾಕುಲಕರ್ಣಿ, ಜಿಲ್ಲಾ ಕಾರ್ಯದರ್ಶಿ ಶ್ರೀ ಆರ್.ಟಿ. ಹೆಬ್ಬಾರರವರು ಆಗಮಿಸಿ ಮಕ್ಕಳಿಗೆ ಶುಭ ಹಾರೈಸಿದರು.



## ಕೊಡಗು

* ವಿದ್ಯಾರ್ಥಿಗಳು ಶಿಕ್ಷಣದ ಜೊತೆಗೆ ಶಿಸ್ತು– ಸಂಯಮ, ಉತ್ತಮ ನಾಯಕತ್ವ ಗುಣ, ರಾಷ್ಟ್ರೀಯ ಭಾವೈಕ್ಯತೆ, ಸೌಹಾರ್ದತೆ ಹಾಗೂ ಮಾನವೀಯ ಮೌಲ್ಯಗಳನ್ನು ಬೆಳೆಸಿಕೊಳ್ಳಲು ಸಾಧ್ಯ ಎಂದು ರಾಜ್ಯ ಮುಖ್ಯ ಆಯುಕ್ತ ಶ್ರೀ ಪಿ.ಜಿ.ಆರ್. ಸಿಂಧ್ಯಾ ಹೇಳಿದರು.



ಕೊಡಗು ಜಿಲ್ಲಾ ಸಂಸ್ಥೆ, ಕುಶಾಲನಗರ ಸ್ಥಳೀಯ ಸಂಸ್ಥೆ ವತಿಯಿಂದ ಜಿಲ್ಲಾ ಶಾಲಾ ಶಿಕ್ಷಣ ಇಲಾಖೆಯ ಸಹಯೋಗದೊಂದಿಗೆ ಡಿಸೆಂಬರ್ 21 ರಿಂದ 22ರ ವರೆಗೆ ಕುಶಾಲನಗರ ಪಿ.ಎಂ. ಶ್ರೀ ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆಯಲ್ಲಿ ಹಮ್ಮಿಕೊಂಡಿರುವ ಕೊಡಗು ಜಿಲ್ಲಾಮಟ್ಟದ ಸ್ಕೌಟ್ಸ್ ಮತ್ತು ಗೈಡ್ಸ್‌ಗಳು ಮೇಳ(ರ‍್ಯಾಲಿ)ವನ್ನು ಉದ್ಘಾಟಿಸಿ ಅವರು ಮಾತನಾಡಿದರು. ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಸ್ಕೌಟ್ ಮತ್ತು ಗೈಡ್ ಸಹಾಯಕಾರಿಯಾಗಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಸಂಸ್ಥೆಯ ಪ್ರಧಾನ ಆಯುಕ್ತ ಶ್ರೀ ಕೆ.ಟಿ. ಬೇಬಿ ಮ್ಯಾಥ್ಯೂ ಮಾತನಾಡಿ, 'ಕುಶಾಲನಗರ ಸ್ಥಳೀಯ ಸಂಸ್ಥೆಯ ಆಶ್ರಯದಲ್ಲಿ ಇದೇ ಮೊದಲ ಬಾರಿ ಇಲ್ಲಿ ಮಕ್ಕಳ ಮೇಳವನ್ನು ಯಶಸ್ವಿಯಾಗಿ ಸಂಘಟಿಸಲಾಗಿದ್ದು, ಜಿಲ್ಲೆಯ 500 ಕ್ಕೂ ಹೆಚ್ಚು ಮಕ್ಕಳು ಈ ಮೇಳದಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಪರಸ್ಪರ ಸ್ನೇಹಪರತೆ, ರಾಷ್ಟ್ರೀಯ ಭಾವೈಕ್ಯತೆ ಬೆಳೆಸಲು ಸಹಕಾರಿಯಾಗಿದೆ' ಎಂದರು.

ಜಿಲ್ಲಾ ಸ್ಕೌಟ್ಸ್ ಆಯುಕ್ತ ಶ್ರೀ ಜಿಮ್ಮಿ ಸಿಕ್ವೇರಾ, ಸ್ಕೌಟ್ಸ್ ಗೈಡ್ಸ್‌ನ ಎರಡು ದಿನಗಳ ಕಾಲ ಹಮ್ಮಿಕೊಂಡಿರುವ ಮಕ್ಕಳ ಮೇಳದ ರೂಪುರೇಷೆಗಳ ಕುರಿತು ಮಾಹಿತಿ ನೀಡಿದರು. ಸ್ಥಳೀಯ ಸಂಸ್ಥೆಯ ಅಧ್ಯಕ್ಷ ಡಾ॥ ಪ್ರವೀಣ್ ದೇವರಗುಂಡ ಸೋಮಪ್ಪ, ಮಕ್ಕಳ ಮೇಳದ ಉದ್ದೇಶ ತಿಳಿಸಿದರು. ಗೈಡ್ಸ್ ವಿಭಾಗದಲ್ಲಿ ಉತ್ತಮ ಸಾಧನೆ ಮಾಡಿ ಶ್ರೀ ರಂಗರಾವ್ ಪ್ರಶಸ್ತಿಗೆ ಭಾಜನರಾದ ರಾಷ್ಟ್ರೀಯ ಗೈಡ್ಸ್ ತರಬೇತಿ ಕೇಂದ್ರದ ನಿವೃತ್ತ ಉಪ ನಿರ್ದೇಶಕಿ ಶ್ರೀಮತಿ ಮಾಚಮ್ಮ, ಸಂಸ್ಥೆಯ ಜಿಲ್ಲಾ ಗೈಡ್ಸ್ ಸಹಾಯಕ ಆಯುಕ್ತೆ ಶ್ರೀಮತಿ ಸಿ.ಎಂ. ಸುಲೋಚನ, ಸಂಪಾಜೆ ಸ್ಥಳೀಯ ಸಂಸ್ಥೆಯ ಅಧ್ಯಕ್ಷ ಶ್ರೀ ಎಂ. ಧನಂಜಯ ಸೇರಿದಂತೆ ಉತ್ತಮ ಸೇವೆ ಸಲ್ಲಿಸಿದ ರೇಂಜರ್ ಮತ್ತು ರೋವರ್ಸ್‌ಗಳನ್ನು ಸನ್ಮಾನಿಸಲಾಯಿತು. ಜಿಲ್ಲಾ ಸಂಸ್ಥೆಯ ಗೈಡ್ಸ್ ವಿಭಾಗದ ಆಯುಕ್ತೆ, ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರಾದ ಶ್ರೀಮತಿ ರಾಣಿ ಮಾಚಯ್ಯ, ಸ್ಥಾನೀಕ ಆಯುಕ್ತ ಶ್ರೀ ಎಚ್.ಆರ್. ಮುತ್ತಪ್ಪ, ಜಿಲ್ಲಾ ತರಬೇತಿ ಆಯುಕ್ತರಾದ ಶ್ರೀ ಕೆ.ಯು. ರಂಜಿತ್, ಶ್ರೀ ಮೈಥಿಲಿರಾವ್ ಮುಂತಾದವರು ಉಪಸ್ಥಿತರಿದ್ದರು.





ಇದರ ಅಂಗವಾಗಿ ಕುಶಾಲನಗರ ಪಟ್ಟಣದಲ್ಲಿ ಕೊಡಗು ಜಿಲ್ಲಾ ಮಟ್ಟದ ಪರಿಸರ ಜಾಗೃತಿ ಜಾಥಾ ನಡೆಸಲಾಯಿತು. ಜಿಲ್ಲೆಯ ವಿವಿಧ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಿಂದ ಆಗಮಿಸಿದ್ದ. 500ಕ್ಕೂ ಹೆಚ್ಚು ಮಂದಿ ಸ್ಕೌಟ್ಸ್ ಮತ್ತು ಗೈಡ್ಸ್‌ಗಳು ಕುಶಾಲನಗರ ಪಟ್ಟಣದಲ್ಲಿ ಬೃಹತ್ ಪರಿಸರ ಜಾಗೃತಿ ಆಂದೋಲನ ನಡೆಸುವ ಮೂಲಕ ಜನರಲ್ಲಿ ಪರಿಸರ ಸಂರಕ್ಷಣೆ, ಪ್ಲಾಸ್ಟಿಕ್ ಬಳಕೆಯಿಂದ ಉಂಟಾಗುತ್ತಿರುವ ಮಾಲಿನ್ಯದ ದುಷ್ಪರಿಣಾಮಗಳು, ನೆಲ– ಜಲ, ಅರಣ್ಯ, ವನ್ಯಜೀವಿಗಳ ಸಂರಕ್ಷಣೆ, ಜೀವಿ– ಸಂಕುಲಗಳ ಸಂರಕ್ಷಣೆ ಕುರಿತಾದ ಪರಿಸರ ಘೋಷಣೆಗಳನ್ನು ಪ್ರಚುರಪಡಿಸುವ ಮೂಲಕ ಜನರಲ್ಲಿ ಪರಿಸರ ಜಾಗೃತಿ ಮೂಡಿಸುವಲ್ಲಿ ಯಶಸ್ವಿಯಾದರು.

ಜಾಗೃತಿ ಜಾಥಾಕ್ಕೆ ಹಸಿರು ನಿಶಾನೆ ನೀಡುವ ಮೂಲಕ ಚಾಲನೆ ನೀಡಿದ ಮಡಿಕೇರಿ ಕ್ಷೇತ್ರದ ಶಾಸಕ ಡಾ. ಮಂತರ್ ಗೌಡ ಮಾತನಾಡಿ, 'ಪ್ರತಿಯೊಬ್ಬರೂ ಪರಿಸರದ ಬಗ್ಗೆ ಕಾಳಜಿ ವಹಿಸಿ ಮುಂದಿನ ಪೀಳಿಗೆಗೆ ಉತ್ತಮ ಪರಿಸರ ನೀಡುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ ಎಂದರು. ಮಡಿಕೇರಿಯಲ್ಲಿನ ಸ್ಕೌಟ್ಸ್ ಮತ್ತು ಗೈಡ್ಸ್ ಭವನ ಕಟ್ಟಡದ ದುರಸ್ತಿಗಾಗಿ ತಾವುಗಳು ಶಾಸಕರ ನಿಧಿಯಿಂದ ರೂ.3 ಲಕ್ಷ ಮೊತ್ತವನ್ನು ಮಂಜೂರುಗೊಳಿಸಿದ್ದು, ಮುಂದಿನ ದಿನಗಳಲ್ಲಿ ಸ್ಕೌಟ್ಸ್, ಗೈಡ್ಸ್ ಭವನ ನಿರ್ಮಾಣಕ್ಕೆ ಅಗತ್ಯ ಅನುದಾನ ಒದಗಿಸಲಾಗುವುದು' ಎಂದು ತಿಳಿಸಿದರು.

ಜಿಲ್ಲಾ ಸಂಸ್ಥೆಯ ಪ್ರಧಾನ ಆಯುಕ್ತ ಶ್ರೀಮತಿ ಕೆ.ಟಿ. ಬೇಬಿ ಮ್ಯಾಥ್ಯೂ ಮಾತನಾಡಿ, 'ಸ್ವಚ್ಛ ಭಾರತಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡಲು ಇಂತಹ ಪರಿಸರ ಕಾರ್ಯಕ್ರಮಗಳು ಪೂರಕವಾಗಿವೆ' ಎಂದರು. ಅಪರ ಜಿಲ್ಲಾಧಿಕಾರಿ ಶ್ರೀಮತಿ ಆರ್. ಐಶ್ವರ್ಯ, ಕುಢಾದ ಅಧ್ಯಕ್ಷ ಶ್ರೀ ಪ್ರಮೋದ್ ಮುತ್ತಪ್ಪ, ಬಿಇಓ ಶ್ರೀಮತಿ ಎಸ್.ಭಾಗ್ಯಮ್ಮ, ಸ್ಕೌಟ್ಸ್, ಗೈಡ್ಸ್‌ನ ಕುಶಾಲನಗರ ಸ್ಥಳೀಯ ಸಂಸ್ಥೆಯ ಅಧ್ಯಕ್ಷ ಡಾ. ಪ್ರವೀಣ್ ದೇವರಗುಂಡ ಸೋಮಪ್ಪ, ಕಾರ್ಯಾಧ್ಯಕ್ಷ ಎ.ಎಂ.ತಮ್ಮಯ್ಯ, ಉಪಾಧ್ಯಕ್ಷರಾದ ಶ್ರೀ ಕೆ.ವಿ. ಅರುಣ್, ಶ್ರೀ ಕೆ.ಪಿ. ರಾಜು, ಕಾರ್ಯದರ್ಶಿ ಶ್ರೀ ಎಂ.ಎಸ್. ಗಣೇಶ್, ನಿವೃತ್ತ ಶ್ರೀ ಕರ್ನಲ್ ಸಿ.ಎಂ. ಕಾವೇರಪ್ಪ, ಜಿಲ್ಲಾ ಸ್ಕೌಟ್ಸ್ ಆಯುಕ್ತ ಶ್ರೀ ಜಿಮ್ಮಿ ಸಿಕ್ವೇರಾ ಉಪ್ಥಿತರಿದ್ದರು.

"ಗ್ರಾಮೀಣ ಜನಪದ ಕ್ರೀಡೆಗಳು, ಹಳ್ಳಿಯ ಸೊಗಡು ಕಲೆ, ಸಂಸ್ಕೃತಿ ಹಾಗೂ ಪರಂಪರೆಯನ್ನು ಜೀವಂತವಾಗಿ ಉಳಿಸಿ ಬೆಳಸುವ ಜತೆಗೆ ಮುಂದಿನ ತಲೆಮಾರಿಗೂ ತಿಳಿಸಿಕೊಡಬೇಕಾಗಿದೆ" ಎಂದು ಜಿಲ್ಲಾ ಪ್ರೌಢಶಾಲಾ ದೈಹಿಕ ಶಿಕ್ಷಣ ಶಿಕ್ಷಕರ ಸಂಘ (ಗ್ರೇಡ್–1)ದ ಅಧ್ಯಕ್ಷರೂ ಆದ ಜನಪದ ಕ್ರೀಡೆಯ ಸಂಪನ್ಮೂಲ ವ್ಯಕ್ತಿ ಡಾ ಸದಾಶಿವಯ್ಯ ಎಸ್. ಪಲ್ಲೇದ್ ಹೇಳಿದರು.

ಮಕ್ಕಳ ಮೇಳ(ರ‍್ಯಾಲಿ)ದ ಅಂಗವಾಗಿ ಭಾನುವಾರ ಏರ್ಪಡಿಸಲಾಗಿದ್ದ ಗ್ರಾಮೀಣ ಕ್ರೀಡಾಕೂಟವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಸ್ಕೌಟ್ಸ್ ಗೈಡ್ಸ್ ಸಂಸ್ಥೆಯ ಜಿಲ್ಲಾ ಪ್ರಧಾನ ಆಯುಕ್ತ ಶ್ರೀಮತಿ ಕೆ.ಟಿ. ಬೇಬಿ ಮ್ಯಾಥ್ಯೂ, "ಮಕ್ಕಳ ಮೇಳದಲ್ಲಿ ಇಂತಹ ಕ್ರೀಡೆಗಳು ಶಾಲಾ ಮಕ್ಕಳಿಗೆ ಗ್ರಾಮೀಣ ಕ್ರೀಡೆಗಳನ್ನು ಪರಿಚಯಿಸಲು ಸಹಕಾರಿಯಾಗಿವೆ" ಎಂದರು. ಮುಖ್ಯ ಅತಿಥಿಯಾಗಿದ್ದ ಜಿಲ್ಲಾ ಛೇಂಬರ್ ಆಫ್ ಕಾಮರ್ಸ್‌ನ ಜಿಲ್ಲಾಧ್ಯಕ್ಷ ಶ್ರೀ ಬಿ.ಆರ್. ನಾಗೇಂದ್ರ ಪ್ರಸಾದ್ ಮಾತನಾಡಿ, "ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ ವತಿಯಿಂದ ಮಕ್ಕಳಿಗೆ ಹಮ್ಮಿಕೊಂಡಿರುವ ಇಂತಹ ಕ್ರೀಡಾಕೂಟಗಳು ಮಕ್ಕಳಲ್ಲಿ ಜನಪದ ಕ್ರೀಡೆಗಳು, ಗ್ರಾಮೀಣ ಜನರ ಬದುಕಿನ ಕಲೆ, ಹಳ್ಳಿಗಾಡಿನ ನಮ್ಮ ಮೂಲ ಸಂಸ್ಕೃತಿಯನ್ನು ಪರಿಚಯಿಸಲು ಸಾಧ್ಯವಾಗುತ್ತವೆ" ಎಂದರು.

ತಾಲ್ಲೂಕು ಜಾನಪದ ಪರಿಷತ್ತಿನ ಅಧ್ಯಕ್ಷ ಶ್ರೀ ಎಂ.ಎನ್. ಚಂದ್ರಮೋಹನ್, "ಆಧುನಿಕ ಅಬ್ಬರಕ್ಕೆ ಸಿಲುಕಿರುವ ಜಾನಪದ ಕಲೆಗಳು ನಸಿಶಿ ಹೋಗದಂತೆ ಮುಂದಿನ ಪೀಳಿಗೆಗೆ ಬೆಳಸಬೇಕು" ಎಂದು ಕಿವಿಮಾತು ಹೇಳಿದರು.

"ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಶ್ರೀ ಕೆ.ಎಸ್. ನಾಗೇಶ್ ಮಾತನಾಡಿ ಇಂತಹ ಕ್ರೀಡೆಗಳು ಮಕ್ಕಳಲ್ಲಿ ಕ್ರೀಡಾಪೂರ್ತಿ ಬೆಳೆಸಲು ಸಹಕಾರಿಯಾಗಿವೆ" ಎಂದರು.

ಡಿಸೆಂಬರ್ 22ರಂದು ಕುಶಾಲನಗರದಲ್ಲಿ ಮೇಳದ ಅಂಗವಾಗಿ ಸರ್ವಧರ್ಮ ಪ್ರಾರ್ಥನೆ ನೆರವೇರಿಸಲಾಯಿತು. ಸರ್ವಧರ್ಮ ಪ್ರಾರ್ಥನೆಗೆ ಚಾಲನೆ ನೀಡಿದ ಸ್ಕೌಟ್ಸ್, ಗೈಡ್ಸ್ ಜಿಲ್ಲಾ ಸಂಸ್ಥೆಯ ಪ್ರಧಾನ ಆಯುಕ್ತ ಶ್ರೀಮತಿ ಕೆ.ಟಿ. ಬೇಬಿ ಮ್ಯಾಥ್ಯೂ ಮಾತನಾಡಿ, "ವಿದ್ಯಾರ್ಥಿಗಳಲ್ಲಿ ಸರ್ವಧರ್ಮಗಳ ಬಗ್ಗೆ ಹೆಚ್ಚಿನ ಜ್ಞಾನ ಬೆಳೆಸುವ ಮೂಲಕ ಅವರಲ್ಲಿ ಪರಸ್ಪರ ಪ್ರೀತಿ– ವಿಶ್ವಾಸ ಹಾಗೂ ಸೌಹಾರ್ದತೆ ಬೆಳೆಸಲು ಸಹಕಾರಿಯಾಗಿದೆ" ಎಂದರು.

ಜಿಲ್ಲಾ ಸ್ಕೌಟ್ಸ್ ಆಯುಕ್ತ ಶ್ರೀ ಜಿಮ್ಮಿ ಸಿಕ್ವೇರಾ ಎರಡು ದಿನಗಳ ಕಾಲ ನಡೆದ ಶಿಬಿರದ ಕುರಿತು ಮಾಹಿತಿ ನೀಡಿದರು. ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರೂ ಆದ ಜಿಲ್ಲಾ ಗೈಡ್ಸ್ ಆಯುಕ್ತೆ ರಾಣಿ ಮಾಚಯ್ಯ, ಸ್ಥಾನೀಕ ಆಯುಕ್ತ ಶ್ರೀ ಎಚ್.ಆರ್. ಮುತ್ತಪ್ಪ ಮುಂತಾದವರು ಉಪಸ್ಥಿತರಿದ್ದರು.

ಮಕ್ಕಳ ಮೇಳದ ಅಂಗವಾಗಿ ಏರ್ಪಡಿಸಿದ್ದ ಶಿಬಿರಾಗ್ನಿ ಶಿಬಿರ ಗಮನ ಸೆಳೆಯಿತು. ಶಿಬಿರಾಗ್ನಿಗೆ ಮಡಿಕೇರಿ ಬಿಇಓ ಡಾ. ಬಿ.ಸಿ. ದೊಡ್ಡೇಗೌಡ ಚಾಲನೆ ನೀಡಿದರು. ಜಿಲ್ಲಾ ಸ್ಕೌಟ್ಸ್ ತರಬೇತಿ ಆಯುಕ್ತ ಕೆ.ಯು. ರಂಜಿತ್ ಶಿಬಿರಾಗ್ನಿ ಶಿಬಿರ ನಿರ್ವಹಿಸಿದರು. ಸಿ.ಆರ್.ಪಿ. ಶ್ರೀ ಟಿ.ಇ. ವಿಶ್ವನಾಥ್ ಮತ್ತು ಸಂಸ್ಥೆಯ ಜಿಲ್ಲಾ ಹಾಗೂ ಸ್ಥಳೀಯ ಸಂಸ್ಥೆಯ ಪದಾಧಿಕಾರಿಗಳು ಇದ್ದರು.

ಮಹೋತ್ಸವದ ಅಂಗವಾಗಿ ಸಿರವಾರ ನಗರದ ಶಾಂತಿನಿಕೇತನ ಶಾಲೆಯ ಸ್ಕೌಟ್ಸ್ ಮತ್ತು ಗೈಡ್ಸ್‌ಗಳಿಂದ ಸರ್ವಧರ್ಮ ಪ್ರಾರ್ಥನೆ, ಜಾಥಾ ನಡೆಸಿ, ಧ್ವಜ ಚೀಟಿಗಳನ್ನು ಬಿಡುಗಡೆ ಮಾಡಲಾಯಿತು ಹಾಗೂ ಸ್ಕೌಟ್ ಮತ್ತು ಗೈಡ್ ಚಟುವಟಿಕೆಗಳಿಗಾಗಿ ನಿಧಿ ಸಂಗ್ರಹಿಸಲಾಯಿತು. ಈ ಸಂದರ್ಭದಲ್ಲಿ ಶಾಲೆಯ ಮುಖ್ಯ ಗುರುಗಳು ಹಾಗೂ ಗೈಡ್ ಕ್ಯಾಪ್ಟನ್ ಆದ ಶ್ರೀಮತಿ ಅನುರಾಧ ರವರು ಹಾಗೂ ಶಾಲೆಯ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ಕೊಪ್ಪಳ

* ಡಿಸೆಂಬರ್ 22 ರಿಂದ 23ರ ವರಿಗೆ ತಾಲೂಕು ಮಟ್ಟದ ದ್ವಿತೀಯ ಸೋಪಾನ ಪರೀಕ್ಷಾ ಶಿಬಿರ ಮತ್ತು ಜಿಲ್ಲಾ ಮಟ್ಟದ ತೃತೀಯ ಸೋಪಾನ ಪರೀಕ್ಷಾ ಶಿಬಿರವನ್ನು ಸರ್ಕಾರಿ ಕೇಂದ್ರ ಹಿರಿಯ ಪ್ರಾಥಮಿಕ ಶಾಲೆ CPS ಗಂಗಾವತಿ ಇಲ್ಲಿ ಜರುಗಿಸಲಾಯಿತು.

ಶಿಬಿರದ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಹೆಚ್.ಎಮ್. ಸಿದ್ದರಾಮ ಸ್ವಾಮಿ, ರಾಜ್ಯ ಉಪಾಧ್ಯಕ್ಷರು ಹಾಗೂ ಜಿಲ್ಲಾ ಮುಖ್ಯ ಆಯುಕ್ತರು ವಹಿಸಿದ್ದರು. ಶ್ರೀ ಮೌಲಾಸಾಬ್ ಗಂಗಾವತಿ ನಗರಸಭೆ ಅಧ್ಯಕ್ಷರು, ಸಸಿಗೆ ನೀರು ಹಾಕುವುದರ ಮೂಲಕ ಶಿಬಿರದ ಉದ್ಘಾಟನೆ ಮಾಡಿದರು. ಮುಖ್ಯ ಅತಿಥಿಗಳಾಗಿ ಶ್ರೀ ರಾಚಪ್ಪ ಗಂಗಾವತಿ ನಗರಸಭೆ ಸದಸ್ಯರು, ಸ್ಕೌಟ್ಸ್-ಗೈಡ್ಸ್ ಚಳುವಳಿಗೆ ಬಹಳ ದೊಡ್ಡ ಗೌರವವಿದೆ ಅದರಲ್ಲಿ ಎಲ್ಲರು ಒಟ್ಟಿಗೆ ಸೇರಿ ತಮ್ಮ ಶಾಲೆಯ ಹೆಸರು ತರಬೇಕು ಎಂದು ಹೇಳಿದರು.



ಶ್ರೀ ಶರೀಫ್ ಹತ್ತಿಮತ್ತೂರ್, ಪ್ರಾಸ್ತಾವಿಕ ನುಡಿಗಳನ್ನು ಆಡಿದರು. ಶ್ರೀ ಸಯ್ಯದ್ ಮೊಹಮ್ಮದ್ ಗುತ್ತಿ ಸಹಾಯಕ ಆಯುಕ್ತರು (ಸ್ಕೌಟ್ಸ್) ಶ್ರೀಮತಿ ಪರಿದಾ ಅಕ್ತರ್ ಹೆಚ್.ಎಮ್., ಸರ್ಕಾರಿ ಕೇಂದ್ರ ಹಿರಿಯ ಪ್ರಾಥಮಿಕ ಉರ್ದು ಆಂಗ್ಲ ಮಾಧ್ಯಮ ಶಾಲೆ ಗಂಗಾವತಿ ಮತ್ತು CRP ರವರು ಉಪಸ್ಥಿತರಿದ್ದರು, ಶ್ರೀ ಹೆಚ್.ಎಮ್. ಸಿದ್ದರಾಮ ಸ್ವಾಮಿ ಮಾತನಾಡಿ, "ಜಿಲ್ಲೆಯ ಸಂಪೂರ್ಣ ಸ್ಕೌಟ್ಸ್-ಗೈಡ್ಸ್‌ಗಳು, ರಾಜ್ಯ ಪುರಸ್ಕಾರ ಪಡೆದು ಜಿಲ್ಲೆಯ ಕೀರ್ತಿ ತರಬೇಕು ಮತ್ತು ರಾಜ್ಯ ರಾಷ್ಟ್ರೀಯ ಶಿಬಿರಗಳಲ್ಲಿ ಭಾಗವಹಿಸಬೇಕು" ಎಂದು ಹೇಳಿ ಶುಭ ಕೋರಿದರು/ ಶ್ರೀ ಹುಸೇನಸಾಬ ಮಕಾಂದಾರ ಗಂಗಾವತಿ ತಾಲೂಕಿನ ಕಾರ್ಯದರ್ಶಿಗಳು ಕಾರ್ಯಕ್ರಮ ನಿರೂಪಿಸಿದರು.

ಜಿಲ್ಲಾ ಮಟ್ಟದ ತೃತೀಯ ಸೋಪಾನ ಪರೀಕ್ಷಾ ಶಿಬಿರಕ್ಕೆ ಶಿಬಿರದ ನಾಯಕರಾಗಿ ಶ್ರೀಮತಿ ಸರೋಜಾ, ಜಿಲ್ಲಾ ತರಬೇತಿ ಆಯುಕ್ತರು ಗೈಡ್ಸ್‌ರವರು ಶ್ರೀ ಹುಸೇನಸಾಬ ಮಕಾಂದಾರ ರವರು ಹಾಗೂ ತಾಲೂಕು ಮಟ್ಟದ ದ್ವಿತೀಯ ಸೋಪಾನ ಪರೀಕ್ಷೆ ಶಿಬಿರ ನಾಯಕರಾಗಿ ಶ್ರೀಮತಿ ಪರವೀನ ಕೌಸರ್ ಶ್ರೀ ಎರಣ್ಣರವರು ಕಾರ್ಯನಿರ್ವಹಿಸಿದರು.

* ಡಿಸೆಂಬರ್ 02 ರಂದು ಜಿಲ್ಲಾ ಪದಾಧಿಕಾರಿಗಳ ಹಾಗೂ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿಗಳ ಜಿಲ್ಲಾ ಸಭೆಯು ರಾಜ್ಯ ಪ್ರಧಾನ ಆಯುಕ್ತರು ಶ್ರೀ ಪಿ.ಜಿ.ಆರ್. ಸಿಂಧ್ಯಾರವರ ನೇತೃತ್ವದಲ್ಲಿ ಯಲಬುರ್ಗಾ ತಾಲ್ಲೂಕಿನಲ್ಲಿ ಜರುಗಿತು. 'ಜಿಲ್ಲಾ ಸಂಸ್ಥೆ ಚಟುವಟಿಕೆಗಳು ಮತ್ತು ಶಿಬಿರಗಳು ಜಿಲ್ಲಾ ಗಣತಿ ಕಾರ್ಯಕ್ರಮಗಳ ಕುರಿತು ಪರಿಶೀಲಿಸಿದರು' ಸಭೆಯಲ್ಲಿ ಶ್ರೀ ಹೆಚ್.ಎಮ್. ಸಿದ್ದರಾಮ್ ಸ್ವಾಮಿ, ರಾಜ್ಯ ಉಪಾಧ್ಯಕ್ಷರು ಹಾಗೂ ಜಿಲ್ಲಾ ಮುಖ್ಯ ಆಯುಕ್ತರುರವರು. ಶ್ರೀ ಮಲ್ಲಿಕಾರ್ಜುನ ಚೌಕಿಮಠ ಜಿಲ್ಲಾ ಆಯುಕ್ತರು (ಸ್ಕೌಟ್), ಶ್ರೀಮತಿ ಅರುಣಾ ವಸ್ತ್ರದ, ಜಿಲ್ಲಾ ಉಪಾಧ್ಯಕ್ಷೆ ಹಾಗೂ ಜಿಲ್ಲಾ ಆಯುಕ್ತರು (ಗೈಡ್ಸ್), ಶ್ರೀಮತಿ ಮಲ್ಲೇಶ್ವರಿ ಜುಜಾರಿ ಕಲ್ಯಾಣ ಕರ್ನಾಟಕ ಉಸ್ತುವಾರಿಗಳು ಹಾಗೂ ರೇಂಜರಿಂಗ್ ವಿಭಾಗದ ಮುಖ್ಯಸ್ಥರು, ಶ್ರೀ ಮಾರುತಿ ಅರೇರ್, ಜಿಲ್ಲಾ ಕಾರ್ಯದರ್ಶಿಗಳು, ಶ್ರೀ ಪ್ರಭಾಕರ್ ದಾಸರ್, ಜಿಲ್ಲಾ ಸಹ ಕಾರ್ಯದರ್ಶಿಗಳು, ಶ್ರೀ ಶ್ರೀಕಾಂತ್ ಮಾಸಗಟ್ಟಿ, ಜಿಲ್ಲಾ ತರಬೇತಿ ಆಯುಕ್ತರು ಸ್ಕೌಟ್ ಶ್ರೀ ವೀರನಗೌಡ ಪೊಲೀಸ್ ಪಾಟೀಲ್ ರಾಜ್ಯ ಪ್ರತಿನಿಧಿಗಳು ಸ್ಕೌಟ್ ಇತರ



ಪದಾಧಿಕಾರಿಗಳು ಉಪಸ್ಥಿತರಿದ್ದರು. ನಂತರ ಸಾಯಂಕಾಲ ಬಯಲು ರಂಗ ಮಂದಿರ ಯಲಬುರ್ಗಾದಲ್ಲಿ ನಡೆದ 'ಸುವರ್ಣ ಯುಗ' ಕಾರ್ಯಕ್ರಮದಲ್ಲಿ ಸಹಭಾಗಿತ್ವದಲ್ಲಿ ಶ್ರೀ ಬಸವರಾಜ ರಾಯರೆಡ್ಡಿ ಮುಖ್ಯ ಮಂತ್ರಿಗಳ ಆರ್ಥಿಕ ಸಲಹೆಗಾರರು ಹಾಗೂ ಯಲಬುರ್ಗಾ ಶಾಸಕರು, ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿಯಿಂದ. ಕೊಪ್ಪಳ ಜಿಲ್ಲಾ ತರಬೇತಿ ಕೇಂದ್ರಕ್ಕೆ 1.5 ಕೋಟಿ ಅನುದಾನ ನೀಡಿದ್ದಕ್ಕಾಗಿ ಶ್ರೀ ಪಿ.ಜಿ.ಆರ್. ಸಿಂಧ್ಯಾ ರಾಜ್ಯ ಪ್ರಧಾನ ಆಯುಕ್ತರು ಮತ್ತು ಜಿಲ್ಲಾ ಸಂಸ್ಥೆ ಸರ್ವ ಪದಾಧಿಕಾರಿಗಳು ಸೇರಿ ಸನ್ಮಾನಿಸಿ ಗೌರವಿಸಲಾಯಿತು, ಮತ್ತು ದನ್ಯವಾದಗಳು ಸಲ್ಲಿಸಲಾಯಿತು.

* ಯಲಬುರ್ಗಾ ತಾಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ಸೂಮಸೇಖರಗೌಡ ರವರು, ಮಾನ್ಯ ರಾಜ್ಯ ಮುಖ್ಯ ಆಯುಕ್ತರು ಶ್ರೀ ಪಿ.ಜಿ.ಆರ್. ಸಿಂಧ್ಯಾರವರ ಭೇಟಿ ಮಾಡಿದರು, ಬಿಇಓ ರವರಿಗೆ ರಾಜ್ಯ ಪ್ರಧಾನ ಆಯುಕ್ತರು ಮತ್ತು ಜಿಲ್ಲಾ ತರಬೇತಿ ಆಯುಕ್ತರಾದ ಶ್ರೀ ಶ್ರೀಕಾಂತ್ ಮಾಸಗಟ್ಟಿರವರು, ಕ್ಷೇತ್ರ ಶಿಕ್ಷಣಾಧಿಕಾರಿಗಳನ್ನು ಸಂಸ್ಥೆಯ ಪರವಾಗಿ ಸನ್ಮಾನಿಸಿ ಗೌರವಿಸಿದರು.

* ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಬಹುದೂರಬಂಡಿ ತಾ. ಕೊಪ್ಪಳ ಇಲ್ಲಿ ವಿಶ್ವ ವಿಕಲಚೇತನ ದಿನಾಚರಣೆ ಅಂಗವಾಗಿ ಕಾರ್ಯಕ್ರಮವನ್ನು ಆಚರಿಸಲಾಯಿತು. ಗಾನಗಂಧರ್ವ ಶ್ರೀ ಪುಟ್ಟರಾಜ ಗವಾಯಿಗಳ ಭಾವ ಚಿತ್ರಕ್ಕೆ ಪುಷ್ಪ ನಮನಗಳನ್ನು ಸಲ್ಲಿಸಲಾಯಿತು. ಕಾರ್ಯಕ್ರಮಕ್ಕೆ ಉದ್ಘಾಟಕರಾಗಿ ಶ್ರೀ ಪಿ.ಜಿ.ಆರ್. ಸಿಂಧ್ಯಾರವರು ಆಗಮಿಸಿ ಕಾರ್ಯಕ್ರಮ ಕುರಿತು ಮಾತನಾಡಿದರು. ಶ್ರೀ ಬೀರಪ್ಪ ಅಂಡಗಿ ರಾಜ್ಯ ಅಧ್ಯಕ್ಷರು ವಿಕಲಚೇತನರ ನೌಕರರ ಸಂಘ ಬೆಂಗಳೂರು, ಶ್ರೀ ಮಾರುತಿ ಅರೇರ್ ಜಿಲ್ಲಾ ಕಾರ್ಯದರ್ಶಿಗಳು ಶ್ರೀ ಮಲ್ಲಪ್ಪ ಗುಡ್ಡಣ್ಣವರ ತಾಲೂಕು ಕಾರ್ಯದರ್ಶಿಗಳು ಕೊಪ್ಪಳ, ಬಹದ್ದೂರ್ ಬಂಡಿ ಶಾಲೆಯ ಎಸ್.ಡಿ.ಎಂ.ಸಿ. ಅಧ್ಯಕ್ಷರು ಮತ್ತು ಸದಸ್ಯರು ಗ್ರಾಮ ಪಂಚಾಯತ್ ಅಧ್ಯಕ್ಷರು ಹಾಗೂ ಶಾಲೆಯ ಮುಖ್ಯ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಮತ್ತು ಸಿಬ್ಬಂದಿ ವರ್ಗ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.



## ಮೈಸೂರು

* ಮೈಸೂರು ಜಿಲ್ಲಾ ಮಟ್ಟದ ಕಬ್ಸ್ ಮತ್ತು ಬುಲ್‌ಬುಲ್ಸ್‌ಗಳ ತೃತೀಯ ಚರಣ್ ಮತ್ತು ಸುವರ್ಣ ಪಂಕ್ ಶಿಬಿರವನ್ನು ಡಿಸೆಂಬರ್ 12 ಮತ್ತು 13ರಂದು ಶ್ರೀ ಜಯಚಾಮರಾಜೇಂದ್ರ ಸ್ಕೌಟ್ಸ್ ಮತ್ತು ಗೈಡ್ಸ್ ಕೇಂದ್ರ ಕಛೇರಿ, ಮೈಸೂರು ಇಲ್ಲಿ ಆಯೋಜಿಸಲಾಗಿತ್ತು. ಈ ಶಿಬಿರದಲ್ಲಿ ಜಿಲ್ಲೆ 217 (119 ಕಬ್ಸ್, 98 ಬುಲ್‌ಬುಲ್ಸ್) ಮಕ್ಕಳು ಕಬ್ ಮಾಸ್ಟರ್‌ಗಳು ಹಾಗೂ ಫ್ಲಾಕ್ ಲೀಡರ್‌ಗಳು ಭಾಗವಹಿಸಿದ್ದರು. ನಾಯಕರುಗಳಾಗಿ ಶ್ರೀಮತಿ ಶಶಿಕಲಾ ಎ.ಎಲ್.ಟಿ.(ಬಿ) ಹಾಗೂ ಜಿಲ್ಲಾ ಆಯುಕ್ತರು (ಬುಲ್‌ಬುಲ್ಸ್) ಹಾಗೂ ಶ್ರೀಮತಿ ಸರಸ್ವತಿ ಸುರೇಶ್ ಹೆಚ್.ಡಬ್ಲ್ಯೂ.ಬಿ.(ಸಿ)ರವರು ಕಾರ್ಯನಿರ್ವಹಿಸಿದರು.



## ರಾಯಚೂರು

* ನವೆಂಬರ್ 07ರಂದು 75ನೇ ಸಂಸ್ಥಾಪನಾ ದಿನ ಮತ್ತು ಧ್ವಜ ದಿನಾಚರಣೆಯ ಅಮೃತ ಮಹೋತ್ಸವದ ಅಂಗವಾಗಿ ಸಿರವಾರ ನಗರದ ಶಾಂತಿನಿಕೇತನ ಶಾಲೆಯ ಸ್ಕೌಟ್ಸ್ ಮತ್ತು ಗೈಡ್ಸ್‌ಗಳಿಂದ ಸರ್ವಧರ್ಮ ಪ್ರಾರ್ಥನೆ, ಜಾಥಾ ನಡೆಸಿ, ಧ್ವಜ ಚೀಟಿಗಳನ್ನು ಬಿಡುಗಡೆ ಮಾಡಲಾಯಿತು ಹಾಗೂ ಸ್ಕೌಟ್ ಮತ್ತು ಗೈಡ್ ಚಟುವಟಿಕೆಗಳಿಗಾಗಿ ನಿಧಿ ಸಂಗ್ರಹಿಸಲಾಯಿತು.

ಈ ಸಂದರ್ಭದಲ್ಲಿ ಶಾಲೆಯ ಮುಖ್ಯ ಗುರುಗಳು ಹಾಗೂ ಗೈಡ್ ಕ್ಯಾಪ್ಟನ್ ಆದ ಶ್ರೀಮತಿ ಅನುರಾಧ ರವರು ಹಾಗೂ ಶಾಲೆಯ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



## ಶಿರಸಿ (ಉತ್ತರ ಕನ್ನಡ)

* ಜಿಲ್ಲಾ ಸಂಸ್ಥೆ ಶಿರಸಿ ಶೈಕ್ಷಣಿಕ ಜಿಲ್ಲೆ ಶಿರಸಿ, ಉತ್ತರ ಕನ್ನಡ ಇಲ್ಲಿ ಡಿಸೆಂಬರ್ 14 ರಂದು ಬಂಗೂರು ನಗರ ಕಲಾ ವಿಜ್ಞಾನ ಮತ್ತು ವಾಣಿಜ್ಯ ಮಹಾ ವಿದ್ಯಾಲಯ ದಾಂಡೇಲಿ ಇವರ ಸಂಯುಕ್ತ ಆಶ್ರಯದಲ್ಲಿ ಜಿಲ್ಲಾ ಮಟ್ಟದ ಪ್ರೇರಣಾ, ಪ್ರಕೃತಿ ಅಧ್ಯಯನ, ಚಾರಣ ಶಿಬಿರವನ್ನು ಶ್ರೀ ರಾಜೇಂದ್ರ ಜೈನ್, ಕಾರ್ಯನಿರ್ವಾಹಕ ನಿರ್ದೇಶಕರು, ಡಬ್ಲ್ಯೂ.ಸಿ.ಪಿ.ಎಮ್. ಹಾಗೂ ಅಧ್ಯಕ್ಷರು, ಡಿ.ಇ.ಎಸ್., ದಾಂಡೇಲಿ ಇವರು ಉದ್ಘಾಟಿಸಿದರು ಡಾ. ಶಾಮಲಾ ಎಂ. ರತ್ನಾಕರ್, ಪ್ರಾಧ್ಯಾಪಕರು, ಇಂಗ್ಲೀಷ್ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ರವಿಗೌತಮ್ ಉಪಾಧ್ಯಾಯರು ವಾಣಿಜ್ಯ ಡಬ್ಲ್ಯೂಸಿಪಿಎಮ್ ಹಾಗೂ ಕಾರ್ಯದರ್ಶಿಗಳು ದಾಂಡೇಲಿ. ಶ್ರೀ ಅಂಜನಾ ಹೆಗಡೆ, ಜಿಲ್ಲಾ ಆಯುಕ್ತರು, ಶ್ರೀ ಅಶೋಕ್ ಶರ್ಮಾ ಸಹ ಕಾರ್ಯದರ್ಶಿ ದಾಂಡೇಲಿ ಎಜುಕೇಶನ್ ಸೊಸೈಟಿ, ಶ್ರೀ ಬಿ.ಎಲ್. ಗುಂಡೂರ ಪ್ರಾಚಾರ್ಯರು ಬಿ.ಎಂ.ಪದವಿ ಮಹಾ ವಿದ್ಯಾಲಯ ದಾಂಡೇಲಿ. ಶ್ರೀ ರಾಘವೇಂದ್ರಜೆ ಜೆ.ಆರ್. ಸಾರ್ವಜನಿಕ ಸಂಪರ್ಕ ಅಧಿಕಾರಿ, ದಾಂಡೇಲಿ ಉಪಸ್ಥಿತರಿದ್ದರು.



ಡಿಸೆಂಬರ್ 15 ರಂದು ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯಾ ರವರು ಭೇಟಿ ನೀಡಿ ಶಿಬಿರಾಗ್ನಿ ಕಾರ್ಯಕ್ರಮವನ್ನು ಉದ್ಘಾಟಿಸಿದರು.



* ಡಿಸೆಂಬರ್ 16 ರಂದು ಬಂಗೂರು ನಗರ ಡಿಗ್ರಿ ಕಾಲೇಜ್‌ಗೆ ಶ್ರೀ ಪಿ.ಜಿ.ಆರ್. ಸಿಂಧ್ಯಾ ಅವರು ಬೇಟಿ ನೀಡಿ ಪ್ರಕೃತಿ ಅಧ್ಯಯನ ಮತ್ತು ಚಾರಣ ಶಿಬಿರಕ್ಕೆ ಚಾಲನೆ ನೀಡಿದರು. ನಂತರ ಬಂಗೂರು ನಗರ ಡಿಗ್ರಿ ಕಾಲೇಜ್‌ಗೆ ಭೇಟಿ ನೀಡಿದರು.



* ಜಿಲ್ಲಾ ಸಂಸ್ಥೆ ಶಿರಸಿ ಶೈಕ್ಷಣಿಕ ಜಿಲ್ಲೆ ಹಾಗೂ ಸ್ಥಳೀಯ ಸಂಸ್ಥೆ ಶಿರಸಿ ಇವುಗಳ ಸಂಯುಕ್ತ ಆಶ್ರಯದಲ್ಲಿ ಒಂದು ದಿನದ ದ್ವಿತೀಯ ಮತ್ತು ತೃತೀಯ ಸೋಪಾನ ಪರೀಕ್ಷಾ ಶಿಬಿರ ನಗರದ ಕೆಎಚ್ಬಿ ಕಾಲನಿಯ ಸಾಲು ಮರದ ತಿಮ್ಮಕ್ಕ ವೃಕ್ಷೋದ್ಯಾನದಲ್ಲಿ ನಡೆಯಿತು. ಮುಂಜಾನೆ ಧ್ವಜಾರೋಹಣದೊಂದಿಗೆ ಶಿಬಿರ ಪ್ರಾರಂಭವಾಯಿತು. ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ವಿ.ಎಚ್. ಭಟ್ಕಳ್, ಸ್ಥಳೀಯ ಸಂಸ್ಥೆಯ ಉಪಾಧ್ಯಕ್ಷರಾದ ಶ್ರೀ ಕುಮಾರ್ ಪಟಗಾರ, ಅರಣ್ಯ ಇಲಾಖೆಯ ಶ್ರೀಮತಿ ಉಷಾ ಬೈಂದೂರು ಉಪಸ್ಥಿತರಿದ್ದರು. ಶಿಬಿರದ ನಾಯಕರಾಗಿ ಸ್ಕೌಟ್ಸ್ ವಿಭಾಗದಲ್ಲಿ ಸ್ಕೌಟ್ ಮಾಸ್ಟರ್ ಶ್ರೀ ರಾಘವೇಂದ್ರ ಹೊಸೂರ್ ಹಾಗೂ ಗೈಡ್ಸ್ ವಿಭಾಗದಲ್ಲಿ ಗೈಡ್ ಕ್ಯಾಪ್ಟನ್ ಶ್ರೀಮತಿ ಸಿಂಡ್ರೆಲ್ಲಾ ಕಾರ್ಯನಿರ್ವಹಿಸಿದರು. ಜಿಲ್ಲಾ ಗೈಡ್ಸ್ ಆಯುಕ್ತರಾದ ಶ್ರೀಮತಿ ಅಂಜನಾ ಹೆಗಡೆ ಭೇಟಿ ನೀಡಿ ಪರೀಕ್ಷಾ ಶಿಬಿರದ ಚಟುವಟಿಕೆಗಳನ್ನು ವೀಕ್ಷಿಸಿದರು. ಅರಣ್ಯ ಇಲಾಖೆ ಹಾಗೂ ಆರೋಗ್ಯ ಇಲಾಖೆಯ ಸಿಬ್ಬಂದಿಗಳು ಉಪಸ್ಥಿತರಿದ್ದು ಸಹಕಾರ ನೀಡಿದರು.

## ಶಿವಮೊಗ್ಗ

* ಜಿಲ್ಲಾ ಸ್ಕೌಟ್ಸ್ ಭವನದಲ್ಲಿ ಡಿಸೆಂಬರ್ 08 ರಂದು ಚತುರ್ಥ ಚರಣ್, ಕಬ್ಸ್ ಮತ್ತು ಹೀರಕ್ ಪಂಕ್ ಬುಲ್‌ಬುಲ್ಸ್‌ಗಳು ತರಬೇತಿ ಶಿಬಿರವನ್ನು ಏರ್ಪಡಿಸಲಾಗಿತ್ತು. ಶ್ರೀ ವೀರೇಶಪ್ಪ ವೈ.ಆರ್. ಸಹಾಯಕ ಕಾರ್ಯದರ್ಶಿಗಳು ಇವರು ಸಭೆಗೆ ಎಲ್ಲರನ್ನೂ ಸ್ವಾಗತಿಸಿದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀಮತಿ ಶಕುಂತಲಾ ಚಂದ್ರಶೇಖರ್, ಜಿಲ್ಲಾ ಆಯುಕ್ತರು (ಗೈ) ವಹಿಸಿದ್ದರು. ಅವರು ಮಾತನಾಡುತ್ತಾ ಎಲ್ಲಾ ಕಬ್ಸ್ ಮತ್ತು ಬುಲ್‌ಬುಲ್‌ಗಳು ಇನ್ನು ಹೆಚ್ಚಿನ ಸಾಧನೆಯನ್ನು ಈ ಕ್ಷೇತ್ರದಲ್ಲಿ ಮಾಡಬೇಕೆಂದು ತಿಳಿಸಿದರು. ಶ್ರೀ ಹೆಚ್. ಶಿವಶಂಕರಪ್ಪ, ಜಿಲ್ಲಾ ತರಬೇತಿ ಆಯುಕ್ತರು (ಸ್ಕೌಟ್) ಎಲ್ಲರಿಗೂ ವಂದಿಸಿದರು. ಕಬ್ಸ್ ವಿಭಾಗಕ್ಕೆ ಶ್ರೀ ಅಶೋಕ್ ಕುಮಾರ್ ಸಿ.ಎನ್., ಶ್ರೀ ರಜು ಹೆಚ್.ಎಸ್. ಶ್ರೀ ನಾಗರಾಜ್ ಇವರು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿ ಸಂಪೂರ್ಣ ಮಾಹಿತಿಯನ್ನು ನೀಡಿದರು. ಹಾಗೆಯೇ ಶ್ರೀಮತಿ ಮೀನಾಕ್ಷಮ್ಮ, ಶ್ರೀಮತಿ ವಿದ್ಯಾ ಎಸ್. ಹಾಗೂ ಇತರರು ಬುಲ್‌ಬುಲ್ಸ್ ವಿಭಾಗಗಳಿಗೆ ಸಂಪೂರ್ಣ ಮಾಹಿತಿಯನ್ನು ನೀಡಿದರು. ಈ ಕಾರ್ಯದಲ್ಲಿ ಶಿವಮೊಗ್ಗ ಸ್ಥಳೀಯ ಸಂಸ್ಥೆ ಕಾರ್ಯದರ್ಶಿಗಳು ಹಾಗೂ ದಳ ನಾಯಕರುಗಳು, 38 ಕಬ್ಸ್ ಮತ್ತು 48 ಬುಲ್‌ಬುಲ್ಸ್‌ಗಳು ಭಾಗವಹಿಸಿದ್ದರು.



## ಉಡುಪಿ

* ವರ್ಧಮಾನ ಪೂರ್ವ ಪ್ರಾಥಮಿಕ ಶಾಲೆ ಬನ್ನಿಸ್ ದಳ ದೀಪಾವಳಿ ಹಬ್ಬದ ಪ್ರಯುಕ್ತ ವರ್ಧಮಾನ ಬನ್ನಿಸ್ ದಳದ ಪುಟಾಣಿಗಳು, ಶ್ರೀ ವೆಂಕಟರಮಣ ಗೋಶಾಲೆಗೆ ಭೇಟಿ ನೀಡಿ ಎಲ್ಲಾ ಗೋವುಗಳಿಗೆ ಬಾಳೆಹಣ್ಣನ್ನು ನೀಡಿದರು.



* ನವೆಂಬರ್ 15 ಮತ್ತು 16 ರಂದು ಕಾಪು ಸ್ಥಳೀಯ ಸಂಸ್ಥೆಯ ಪಟಾಲಂ ಹಾಗೂ ಷಟ್ಕ ನಾಯಕರ ಶಿಬಿರವನ್ನು ವಿದ್ಯಾವರ್ಧಕ ಆಂಗ್ಲ ಮಾಧ್ಯಮ ಶಾಲೆ ಶಿರ್ವ ಇಲ್ಲಿ ನಡೆಸಲಾಯಿತು. ಶಿಬಿರದಲ್ಲಿ ಸುಮಾರು 302 ವಿದ್ಯಾರ್ಥಿಗಳು ಹಾಗೂ 50 ಮಂದಿ ಶಿಕ್ಷಕರು ಭಾಗವಹಿಸಿದ್ದರು



* ಜಿಲ್ಲಾ ಸಂಸ್ಥೆ ಹಾಗೂ ಡಾ. ಜಿ. ಶಂಕರ್ ಸರಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು ಅಜ್ಜರ ಕಾಡು ಇವರ ಸಹಯೋಗದಲ್ಲಿ ಎರಡನೇ ದಿನದ ಪ್ರೇರಣ ಕಾರ್ಯಕ್ರಮವು ಚೆನ್ನಾಗಿ ಮೂಡಿ ಬಂತು. ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಶ್ರೀಧರ್ ಪ್ರಸಾದ್ ಇವರ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮವವನ್ನು ಮಾನ್ಯ ಜಿಲ್ಲಾಧಿಕಾರಿಯಾಗಿರುವ ಡಾ. ವಿದ್ಯಾಕುಮಾರಿಯವರು ಉದ್ಘಾಟಿಸಿದರು. ಈ ಸಮಯದಲ್ಲಿ ಮುಖ್ಯ ಅತಿಥಿಗಳಾಗಿ ಮಾನ್ಯ ಶಾಸಕರಾಗಿರುವ ಶ್ರೀ ಯಶ್‌ಪಾಲ್ ಸುವರ್ಣ, ಜಿಲ್ಲಾ ಮುಖ್ಯ ಆಯುಕ್ತರಾದ ಇಂದ್ರಾಳಿ ಜಯಕರ್ ಶೆಟ್ಟಿ ಭಾಗವಹಿಸಿದ್ದರು.



* ನಾಲ್ಕನೇ ದಿನದ ಪ್ರೇರಣ ಕಾರ್ಯಕ್ರಮವು ಚೆನ್ನಾಗಿ ಮೂಡಿ ಬಂತು. ಸಮಾರೋಪ ಸಮಾರಂಭ ಕಾರ್ಯಕ್ರಮವು ಮಾನ್ಯ ಜಿಲ್ಲಾ ಮುಖ್ಯ ಆಯುಕ್ತರಾದ




ಶ್ರೀ ಜಯಕರ್ ಶೆಟ್ಟಿ ಅಧ್ಯಕ್ಷತೆಯಲ್ಲಿ ನಡೆಯಿತು. ಸಮಾರೋಪ ಸಮಾರಂಭದ ಭಾಷಣವನ್ನು ಡಾ. ಪ್ರತಿಭಾ ಆರ್. ತಹಸಿಲ್ದಾರರು ಕಾಪು ಇವರು ಮಾಡಿದರು. ಈ ಸಮಯದಲ್ಲಿ ಜಿಲ್ಲಾ ಪದಾಧಿಕಾರಿಗಳು ಉಪಸ್ಥಿತರಿದ್ದರು.

* ಡಿಸೆಂಬರ್ 10 ರಂದು ಬ್ರಹ್ಮಾವರ ಸ್ಥಳೀಯ ಸಂಸ್ಥೆಯ ದ್ವಿತೀಯ ಸೋಪಾನ ಪರೀಕ್ಷೆಯು ಶಾರದಾ ಪ್ರೌಢಶಾಲೆ ಚೇರ್ಕಾಡಿಯಲ್ಲಿ ನಡೆಯಿತು. ದೀಪ ಹಚ್ಚುವುದರ ಮೂಲಕ ಸಂಸ್ಥೆಯ ಕಾರ್ಯದರ್ಶಿ ಶ್ರೀ ಎಚ್. ಸುದರ್ಶನ ಹೆಗ್ಡೆಯವರು ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಕ್ಕಳಿಗೆ ಶುಭ ಹಾರೈಸಿದರು. ಸಭಾಧ್ಯಕ್ಷರು ಸಂಸ್ಥೆಯ ಉಪಾಧ್ಯಕ್ಷರೂ ಆದ ಶ್ರೀ ಆರೂರು ತಿಮ್ಮಪ್ಪ ಶೆಟ್ಟರು ಮಕ್ಕಳಲ್ಲಿ ಶಿಸ್ತು ಸಂಯಮ 'ದೇಶಭಕ್ತಿ ಬರಬೇಕಾದರೆ ಇಂತಹ ಚಟುವಟಿಕೆಗಳು ಬೇಕು' ಎಂದರು ಶಾಲಾ ಮುಖ್ಯೋಪಾಧ್ಯಾಯ ಶ್ರೀ ಮಂಜುನಾಥ್ ನಾಯಕ್ ಎಲ್ಲರನ್ನೂ ಸ್ವಾಗತಿಸಿದರು, ಜಿಲ್ಲಾ ಸ್ಕೌಟ್ ಕಮೀಷನರ್ ಶ್ರೀ ಎಚ್. ಉದಯ ಭಾಸ್ಕರ ಶೆಟ್ಟಿಯವರು ಕಾರ್ಯಕ್ರಮದ ಮಹತ್ವ ತಿಳಿಸಿದರು. ವೇದಿಕೆಯಲ್ಲಿ ಜಿಲ್ಲಾ ಪ್ರತಿನಿಧಿಯಾಗಿ ಜಿಲ್ಲಾ ಸಂಸ್ಥೆಯ ಜೊತೆ ಕಾರ್ಯದರ್ಶಿ ಶ್ರೀಮತಿ ಪುಷ್ಪಲತಾ ಇದ್ದರು, ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಶ್ರೀ ಆರ್.ಟಿ. ಭಟ್ಟರು ಎಲ್ಲರಿಗೂ ಧನ್ಯವಾದ ಸಮರ್ಪಿಸಿದರು ಶಾಲೆಯ ಗೈಡ್ ಕ್ಯಾಪ್ಟನ್ ಶ್ರೀಮತಿ ರೇವತಿಯವರು ಕಾರ್ಯಕ್ರಮ ನಿರ್ವಹಿಸಿದರು ನೂರೈವತ್ತು ಸ್ಕೌಟ್/ಗೈಡ್‌ಗಳು ಆರು ಶಿಕ್ಷಕರೂ ಭಾಗವಹಿಸಿದ್ದರು.




* ಡಿಸೆಂಬರ್ 07 ಉಡುಪಿ ಜಿಲ್ಲೆಯ ಕಾಳವಾರ ಷಷ್ಠಿ ಮಹೋತ್ಸವ ಹಾಗೂ ಸೂಡ ಷಷ್ಠಿ ಮಹೋತ್ಸವದಲ್ಲಿ ಉಡುಪಿ ಜಿಲ್ಲೆಯ ಹಲವು ಕಾಲೇಜುಗಳ ರೋವರ್ಸ್–ರೇಂಜರ್ಸ್‌ಗಳು ಸ್ಕೌಟ್–ಗೈಡ್ಸ್‌ರವರು ಹಾಗೂ ಶಿಕ್ಷಕರು ಸ್ವಯಂ ಸೇವಕರಾಗಿ ಸೇವೆ ಸಲ್ಲಿಸಿದರು.

## ವಿಜಯಪುರ

* ಜಿಲ್ಲಾ ಸಂಸ್ಥೆ ವಿಜಯಪುರ ಆಶ್ರಯದಲ್ಲಿ ರೋವರ್ಸ್ ಮತ್ತು ರೇಂಜರ್ಸ್‌ಗಳಿಗೆ ಜಿಲ್ಲಾ ಮಟ್ಟದ ವಿಪತ್ತು ನಿರ್ವಹಣಾ ತರಬೇತಿ ಶಿಬಿರವನ್ನು ಡಿಸೆಂಬರ್ 20 ರಿಂದ 22ರ ವರೆಗೆ ವಾಸಂತಿಬಾಯಿ ಜಿಗಜಿನ್ನಿ ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ತರಬೇತಿ ಹಾಗೂ ಶಿಬಿರ ಕೇಂದ್ರ ಬುರಣಾಪುರ ತಾಲ್ಲೂಕು ವಿಜಯಪುರ ಇಲ್ಲಿ ಆಯೋಜಿಸಲಾಗಿತ್ತು. ಶಿಬಿರದಲ್ಲಿ ಜಿಲ್ಲೆಯ ವಿವಿಧ ತಾಲೂಕಿನ 15 ಕಾಲೇಜಿನಿಂದ ಒಟ್ಟು 187 ಜನ ರೋವರ್ಸ್ ಮತ್ತು ರೇಂಜರ್ಸ್‌ಗಳು ಭಾಗವಹಿಸಿದ್ದರು. ಡಿಸೆಂಬರ್ 20 ರಂದು ಜಿಲ್ಲಾ ಕೋಶಾಧ್ಯಕ್ಷರಾದ ಶ್ರೀ ಸಹಜಾನಂದ ದಂಧರಗಿ ರವರು ಸಸಿಗೆ ನೀರೆರೆಯುವುದರ ಮೂಲಕ ಶಿಬಿರವನ್ನು ಉದ್ಘಾಟಿಸಿದರು. ಜಿಲ್ಲಾ ಕಾರ್ಯದರ್ಶಿಗಳಾದ ಶ್ರೀ ಪಿ.ಎಸ್. ಕುಂಬಾರ, ಶ್ರೀ ಎ.ಕೆ. ಮುಲ್ಲಾ, ಜಿಲ್ಲಾ ಯುವ ಸಮಿತಿಯ ಸದಸ್ಯರಾದ ಕುಮಾರಿ. ಶ್ವೇತಾ ಸುರೇಶ ಜಮಖಂಡಿ ಮತ್ತು ರೋವರ್ ಲೀಡರ್ ಶ್ರೀ ಎಸ್ ಎಸ್ ಜಿಗಜೇವಣಗಿರವರು ಉಪಸ್ಥಿತರಿದ್ದರು. ಶಿಬಿರವನ್ನು ಉದ್ಘಾಟಿಸಿ ಮಾತನಾಡಿದ ಜಿಲ್ಲಾ ಕೋಶಾಧ್ಯಕ್ಷರಾದ ಶ್ರೀ ಸಹಜಾನಂದ ದಂಧರಗಿ ರವರು ವಿಪತ್ತುಗಳು ಅನಿರೀಕ್ಷಿತವಾಗಿ ಸಂಭವಿಸುತ್ತವೆ ಅದಕ್ಕಾಗಿ ನಾವೆಲ್ಲ ಸದಾ ಸಿದ್ಧರಾಗಿರಬೇಕು ಎಂದು ಕರೆ ನೀಡಿದರು.



* ಡಿಸೆಂಬರ್ 21 ರಂದು ಬೆಳಗ್ಗೆ ಆರೋಗ್ಯ ಇಲಾಖೆಯ 108 ತುರ್ತು ಸಹಾಯವಾಣಿ ಸಿಬ್ಬಂದಿಯವರಿಂದ ಆಂಬುಲೆನ್ಸ್ ತುರ್ತು ಆರೋಗ್ಯ ಸೇವೆ ಮತ್ತು ಸಹಾಯವಾಣಿಯ ಕ್ರಮಗಳು ಹಾಗೂ ಆಂಬುಲೆನ್ಸ್‌ನಲ್ಲಿರುವ ಎಲ್ಲಾ ವಸ್ತುಗಳನ್ನು ಪರಿಚಯಿಸುವುದು ಮತ್ತು ಅವುಗಳನ್ನು ಬಳಸುವ ವಿಧಾನಗಳ ಕುರಿತು ತರಬೇತಿ ನೀಡಲಾಯಿತು. ಜಿಲ್ಲೆಯ ಖ್ಯಾತ ವೈದ್ಯರಾಗಿರುವ ಡಾ. ಅಶೋಕ್ ವಾಲಿ ಅವರಿಂದ ಪ್ರಥಮ ಚಿಕಿತ್ಸೆ ತರಬೇತಿಯನ್ನು ಇದೇ ಸಂದರ್ಭದಲ್ಲಿ ನೀಡಲಾಯಿತು. ಈ ಸಂದರ್ಭದಲ್ಲಿ ಜಿಲ್ಲಾ ಸಹ ಆಯುಕ್ತಾರಾದ ಶ್ರೀ ಉದಯ ಕುಮಾರ ಯಾಳವಾರ ಮತ್ತು ಜಿಲ್ಲಾ ತರಬೇತಿ ಆಯುಕ್ತರು ಸ್ಕೌಟ್ ಶ್ರೀ ಎಸ್.ಎಸ್. ಬೊಮ್ಮನಹಳ್ಳಿರವರು ಉಪಸ್ಥಿತರಿದ್ದರು. ಮಧ್ಯಾಹ್ನದ ಅವಧಿಯಲ್ಲಿ ಜಿಲ್ಲಾ ಅಗ್ನಿಶಾಮಕ ಅಧಿಕಾರಿಗಳಾದ ಶ್ರೀ ರಂಗನಾಥ ರವರ ನೇತೃತ್ವದ ತಂಡವು ಅಗ್ನಿಯ ಪ್ರಕಾರಗಳು ಅಗ್ನಿ ಅವಘಡಕ್ಕೆ ಕಾರಣಗಳು ಮತ್ತು ಬೆಂಕಿ ನಂದಿಸುವ ಪ್ರಕಾರಗಳ ಕುರಿತು ಪ್ರಾಯೋಗಿಕವಾಗಿ ತರಬೇತಿ ನೀಡಿದರು.



* ಡಿಸೆಂಬರ್ 22 ರಂದು ಬೆಳಗಿನ ಅವಧಿಯಲ್ಲಿ ಉಗ್ರರ ದಾಳಿಗಳು ಸಂಭವಿಸಿದಾಗ ನಿರ್ವಹಿಸುವ ಕ್ರಮಗಳು ಮತ್ತು ಸಂಭವಿಸಬಹುದಾದ ದುರಂತಗಳ ಕುರಿತು ಅಣುಕು ಪ್ರದರ್ಶನದ ಮೂಲಕ ತರಬೇತಿಯನ್ನು ನೀಡಲಾಯಿತು. ಆಯೋಜಿಸಲಾದ ಶಿಬಿರದ ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಸ್ಕೌಟ್ಸ್ ಮತ್ತು ಗೈಡ್ಸ್, ಕಬ್ ವಿಭಾಗದ ಜಿಲ್ಲಾ ಆಯುಕ್ತರಾದ ಶ್ರೀ ಬಿ.ಎಂ. ಆಜೂರ ರವರು ಸ್ಕೌಟ್ ಮತ್ತು ಗೈಡ್ಸ್ ಇದು ಅಂತರಾಷ್ಟ್ರೀಯ ಸ್ವಯಂ ಸೇವಾ ಸಂಸ್ಥೆಯಾಗಿದ್ದು ತಾವೆಲ್ಲರೂ ಸ್ವಯಂಸೇವಕರಾಗಿ ರಾಷ್ಟ್ರದ ಪ್ರಗತಿಗಾಗಿ ಶ್ರಮಿಸಬೇಕು ಮತ್ತು ವಿಪತ್ತು ಸಂಭವಿಸಿದ ಸಂದರ್ಭದಲ್ಲಿ ತಾವೆಲ್ಲರೂ ಗಟ್ಟಿಯಾಗಿ ನಿಲ್ಲಬೇಕು ಎಂದು ಹೇಳಿದರು. ಜಿಲ್ಲಾ ಕಾರ್ಯದರ್ಶಿಗಳಾದ ಶ್ರೀ ಪಿ.ಎಸ್. ಕುಂಬಾರ ರವರು ಮೂರು ದಿನಗಳ ಶಿಬಿರದ ಚಟುವಟಿಕೆಗಳನ್ನು ತಮ್ಮ ಪ್ರಾಸ್ತಾವಿಕ ನುಡಿಯಲ್ಲಿ ವಿವರಿಸಿದರು. ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಶ್ರೀ ಸಹಜಾನಂದ ದಂಧರಗಿರವರು ಎಲ್ಲ ಶಿಬಿರಾರ್ಥಿಗಳು ವಿದ್ಯಾರ್ಥಿ ದಿಸೆಯಿಂದಲೇ ಸ್ವಯಂಸೇವಾ ಗುಣಗಳನ್ನು ಬೆಳೆಸಿಕೊಂಡು ನಾಡಿಗೆ ಮತ್ತು ಹೆತ್ತವರಿಗೆ ಕೀರ್ತಿ ತರುವಂತವರಾಗಬೇಕು ಎಂದು ಹೇಳಿದರು. ಜಿಲ್ಲಾ ತರಬೇತಿ ಆಯುಕ್ತರು ಸ್ಕೌಟ್ ಶ್ರೀ ಎಸ್.ಎಸ್. ಬೊಮ್ಮನಹಳ್ಳಿರವರು ಸರ್ವರನ್ನು ಸ್ವಾಗತಿಸಿದರು ಜಿಲ್ಲಾ ಸಂಘಟಕ ಶ್ರೀ ರಾಜಶೇಖರ ಖೇಡಗಿರವರು ಕಾರ್ಯಕ್ರಮವನ್ನು ನಿರೂಪಿಸಿ ವಂದಿಸಿದರು.



# ಶ್ರದ್ಧಾಂಜಲಿ



**ಡಾ. ಸಿ. ಜಯರಾಮರಾವ್,** ಸಂಸ್ಥಾಪಕ ಕಾರ್ಯದರ್ಶಿ, ವಿದ್ಯಾನಿಕೇತನ ವಿದ್ಯಾಸಂಸ್ಥೆ, ತುಮಕೂರು ಹಾಗೂ ಮಾಜಿ ಜಿಲ್ಲಾ ಆಯುಕ್ತರು (ಸ್ಕೌಟ್ಸ್) ತುಮಕೂರು ಜಿಲ್ಲಾ ಸಂಸ್ಥೆ ಇವರು 25 ಡಿಸೆಂಬರ್ 2024ರಂದು ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಯಲ್ಲಿ ನಿಧನಹೊಂದಿದರು. ಇವರಿಗೆ 99 ವರ್ಷ ವಯಸ್ಸಾಗಿತ್ತು. ಶ್ರೀಯುತರು 1975ನೇ ಇಸವಿಯಲ್ಲಿ ದೊಡ್ಡಬಳ್ಳಾಪುರದ ಡಾ. ಆನಿಬೆಸೆಂಟ್ ತರಬೇತಿ ಕೇಂದ್ರದಲ್ಲಿ ಜರುಗಿದ ಆಯುಕ್ತರ ತರಬೇತಿಯನ್ನು ಪಡೆದಿರುತ್ತಾರೆ. 1940ನೇ ಇಸವಿಯಿಂದ ಸ್ಕೌಟ್ ಆಗಿ ಸೇರಿ ಜಿಲ್ಲೆಯಲ್ಲಿ ಚಳವಳಿ ಬೆಳವಣಿಗೆಗೆ ಸಹಕರಿಸಿದ್ದರು. ಶ್ರೀಯುತರು ತುಮಕೂರು ಜಿಲ್ಲಾ ಸಂಸ್ಥೆಯಲ್ಲಿ 1972 ರಿಂದ 1975ರ ವರೆಗೆ ಜಿಲ್ಲಾ ಸ್ಕೌಟ್ ಆಯುಕ್ತರಾಗಿ ಅತ್ಯುತ್ತಮವಾಗಿ ಕಾರ್ಯನಿರ್ವಹಿಸಿದ್ದರು. ಇವರು ಒಬ್ಬ ಮಗ ಹಾಗು ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.



**ಶ್ರೀ ರವಿಕುಮಾರ್,** ಸಹಾಯಕ ಜಿಲ್ಲಾ ಆಯುಕ್ತರು (ಮುಕ್ತದಳಗಳು) ಕೋಲಾರ ಜಿಲ್ಲೆ ಇವರು 25 ಡಿಸೆಂಬರ್ 2024ರಂದು ಕೋಲಾರದಲ್ಲಿ ನಿಧನಹೊಂದಿದರು. ಇವರಿಗೆ 63 ವರ್ಷ ವಯಸ್ಸಾಗಿತ್ತು.

ಶ್ರೀಯುತರು ಕಬ್ ವಿಭಾಗದಲ್ಲಿ ಎ.ಎಲ್.ಟಿ ತರಬೇತಿಯನ್ನು ಮುಗಿಸಿದ್ದು, ರಾಜ್ಯ ಮತ್ತು ಜಿಲ್ಲಾ ಮಟ್ಟದ ತರಬೇತಿ ಶಿಬಿರಗಳಲ್ಲಿ ಸಕ್ರೀಯವಾಗಿ ಭಾಗವಹಿಸಿ ತರಬೇತಿ ನೀಡುತ್ತಿದ್ದರು. ಇವರು ತಮ್ಮ ಧರ್ಮಪತ್ನಿ ಶ್ರೀ ಲಕ್ಷ್ಮಿ, ಒಬ್ಬ ಮಗ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ.



ದಕ್ಷಿಣ ಕನ್ನಡ ಜಿಲ್ಲೆ ಬೆಳ್ತಂಗಡಿ ಸ್ಥಳೀಯ ಸಂಸ್ಥೆಯ ಚರ್ಚ್ ಸಂತತೆರೇಸ ಪ್ರೌಢಶಾಲೆಯ ಸ್ಕೌಟ್ **ವಿದ್ಯಾರ್ಥಿ ಸ್ಟೀಫನ್** ಡಿಸೆಂಬರ್ 19, 2024ರಂದು ವಿದ್ಯುತ್ ಅಘಾತದಿಂದ ನಿಧನಹೊಂದಿರುತ್ತಾನೆ. ಈತನಿಗೆ 14 ವರ್ಷ ವಯಸ್ಸಾಗಿತ್ತು. ಈ ವಿದ್ಯಾರ್ಥಿಯು 9ನೇ ತರಗತಿಯಲ್ಲಿ ಓದುತ್ತಿದ್ದು ಸ್ಕೌಟ್‌ನಲ್ಲಿ ದ್ವಿತೀಯ ಸೋಪಾನ ಮುಗಿಸಿ ಮುಂದೆ ತೃತೀಯ ಸೋಪಾನ ಪರೀಕ್ಷೆಗೆ ಸಿದ್ದನಾಗಿದ್ದನು.

ಇವರುಗಳ ಆತ್ಮಕ್ಕೆ ಸದ್ಗತಿ ದೊರಕಲೆಂದು ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬದವರಿಗೆ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

– ರಾಜ್ಯ ಕಾರ್ಯದರ್ಶಿ

## ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಚಟುವಟಿಕೆಗಳಲ್ಲಿ ಭಾಗವಹಿಸಿದ ಕಬ್ಸ್, ಬುಲ್‌ಬುಲ್ಸ್ ಸ್ಕೌಟ್ಸ್, ಗೈಡ್ಸ್ ರೋವರ್ಸ್ ಮತ್ತು ರೇಂಜರ್ಸ್‌ಗಳ ವಿಹಂಗಮ ನೋಟ



ಬೀದರ್


ಚಿಕ್ಕಮಗಳೂರು


ಬೆಂಗಳೂರು ಉತ್ತರ


ಬೆಂಗಳೂರು ಪೂರ್ವ


ತುಮಕೂರು


ಹಾಸನ


ವಿಜಯಪುರ


ಚಿಕ್ಕಬಳ್ಳಾಪುರ

RNI No: 13348/1959. Title Code: KARBIL00285. Posted at Periodical Rate Rs. 2/-
Date of Publishing 28th of Every Month
Posted at: Bengaluru PSO, Mysore Road, Bengaluru-26 on 28th & 30th of every month (No. of Pages: 32)




If not delivered, please return to :
THE EDITOR, Karnataka Scout & Guide
State Headquarters, Shanthi Gruha
#39, Palace Road, Bengaluru - 560 001
Ph.: 080-22260017, 22267470
e-mail.: info@bsgkarnataka.org
www.bsgkarnataka.org

Published, Editor & Owened by: K. Gangappa Gowda belongs to: Bharat Scouts and Guides, Karnataka, No.39, Shanthi Gruha Palace Rd, Bengaluru 560 001. Published at: Bharat Scouts and Guides, Karnataka, No.39, Shanthi Gruha Palace Road, Bengaluru-560 001
Printed by: L. Lingappa at Sathyasri Printers Pvt. Ltd., 16/1, 3rd Cross, 2nd Main, Kasturiba Nagar, Mysore Road, Bengaluru-26